# brown book

THE BOOK WAS DRENCHED

TEXT LITE WITHIN THE BOOK ONLY

Osmania University Library
Call No. K831 B51G
Name of Book
Name of Author
UNIVERSAL LIBRARY
OU_198112
UNIVERSAL LIBRARY

# ಗುಲಾಬಿ ಹೂ

[ಸಣ್ಣ ಕತೆಗಳ ಸಂಕಲನ]

ಪ್ರಭಾತ ಸಾಹಿತ್ಯ

ಮಲ್ಲೇಶ್ವರಂ :: :: ಬೆಂಗಳೂರು

ಪ್ರಕಾಶಕರು :
ಸಿದ್ಧವನಹಳ್ಳಿ ಕೃಷ್ಣಶರ್ಮ
ಪ್ರಭಾತ ಸಾಹಿತ್ಯ, ಬೆಂಗಳೂರು

ಮುದ್ರಣಕಾರರು :
ದಿ ಈಸ್ಟರ್ನ್ ಪ್ರೆಸ್, ಜಯಚಾಮರಾಜ ರಸ್ತೆ
ಬೆಂಗಳೂರು ನಗರ

[ ಪುನರ್ಮುದ್ರಣ, ಅನುವಾದ ಇತ್ಯಾದಿ ಎಲ್ಲ ಹಕ್ಕೂ ಲೇಖಕರ ವಶ ]

ಬೆಲೆ : ಒಂದೂಕಾಲು ರೂಪಾಯಿ

ತನ್ನ ತ್ಯಾಗಮಯ ಜೀವನದಿಂದ
ನನ್ನ ಸಾಹಿತ್ಯ ಜೀವನ ಬೆಳಸಿದ
**ನನ್ನ ಅಣ್ಣನಿಗೆ**

# ಪರಿವಿಡಿ


| | | |
|---|---|---|
| ೧) ಗುಲಾಬಿ ಹೂ | ಪುಟ | ೧ |
| ೨) ರೂಪದ್ವೇಷಿ | .. | ೧೬ |
| ೩) ಬರದ ದೇಶ | .. | ೩೬ |
| ೪) ಮೋಹದ ರಾತ್ರಿ | .. | ೫೬ |
| ೫) ಮನಸಿನ ಮಂಜು | .. | ೭೧ |
| ೬) ಎರಡನೆಯ ತಾಯಿ | .. | ೮೫ |
| ೭) ಹೂವಿನ ಹುಡುಗಿ | .. | ೧೦೩ |


## ಇದೇ ಲೇಖಕರಿಂದ

ಕಾರವಾನ್ (ಕಥಾ ಸಂಗ್ರಹ)

ಅಚ್ಚಿನಲ್ಲಿ :

**ಸ್ವಾತಂತ್ರ್ಯದೆಡೆಗೆ**
(ರಾಜಕೀಯ ಕಾದಂಬರಿ)

**ಆಗಸ್ಟ್ ಒಂಬತ್ತು**
(ಕಥಾ ಸಂಗ್ರಹ)

**ಜೀವನ ಕಲೆ**
(ಕಥಾ ಸಂಗ್ರಹ)

# ಹೂ ಅರಳಿಸುವಾಗ!

೧೯೩೪ರಿಂದ ೧೯೩೯.

ಈ ಐದು ವರ್ಷಗಳಲ್ಲಿ ನಾನು ಬರೆದ ಸಣ್ಣ ಕತೆಗಳಲ್ಲಿ ಕೆಲವು ಇವು. ಎಂದೋ ಬರಬೇಕಾಗಿದ್ದ ಈ ಸಂಕಲನ ಇಂದು ಬೆಳಕಿಗೆ ಬರುತ್ತಿದೆ!

ಈ ಕತೆಗಳಲ್ಲಿ ಕೆಲವು ಕನ್ನಡದ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಬೆಳಗಾವಿಯ ಕಿರಿಯರ ಬಳಗದ 'ತಿರುಗಣಿ'ಯಲ್ಲಿ 'ಬರದ ದೇವಿ'ಯೂ ಸೇರಿಕೊಂಡಿತ್ತು.

ಪರಭಾಷೆಗಳಲ್ಲಿ ಕಥನಕಲೆ ದಿನೇ ದಿನೇ ಮುಂದುವರೆಯುತ್ತಿದೆ. 'ಸಣ್ಣ ಕತೆ'ಯ ಕ್ಷೇತ್ರದಲ್ಲಿ ಬಗೆಬಗೆಯ ಪ್ರಯೋಗ ನಡೆದಿವೆ. ನಿರೂಪಣೆ, ಪಾತ್ರರಚನೆ ಇತ್ಯಾದಿ ಹಳೆಯ ವಿಧಾನಗಳು ಮಾಯವಾಗಿ ಹೊಸ ತಂತ್ರ, ಹೊಸ ರೀತಿ ಬಳಕೆಗೆ ಬರುತ್ತಿವೆ. ಕತೆಗಾರ ಕತೆ ಹೇಳುವ ವಿಧಾನದಲ್ಲಿ ಕ್ರಾಂತಿಕಾರಕ ಪರಿವರ್ತನೆಯಾಗುತ್ತಿದೆ.

ಜಗತ್ತಿನ ಕಥಾಸಾಹಿತ್ಯಕ್ಕೆ ಕನ್ನಡ ಕಥಾಸಾಹಿತ್ಯ ಯಾವ ವಿಧದಲ್ಲೂ ಹಿಂದುಳಿಯಬಾರದೆನ್ನುವ ಉತ್ಸಾಹಿ ಬರೆಹಗಾರರಲ್ಲಿ ನಾನೂ ಒಬ್ಬ. ಈ ಕತೆಗಳಲ್ಲಿ ನಾನು ತುಳಿದಿರುವ ದಾರಿ ಹೊಸದು. ಸ್ವತಂತ್ರವಾದುದು. ಕೆಲವೆಡೆಗಳಲ್ಲಿ ಹೊಸ ಪ್ರಯೋಗಕ್ಕೂ ಕೈಹಾಕಿದ್ದೇನೆ. ಹೊಸ ತಂತ್ರಗಳನ್ನು ಬಳಸಿಕೊಂಡಿದ್ದೇನೆ.

ಈ ಕತೆಗಳನ್ನೋದಿ ಮುಗಿಸಿದ ಬಳಿಕ ವಾಚಕರಿಗೆ ಅತೃಪ್ತಿಯಾಗದಿದ್ದರೆ ನನ್ನ ಪ್ರಯತ್ನ, ಪ್ರಯೋಗ ಸಾರ್ಥಕ.

ಈ ಹೂವನ್ನು ತಮ್ಮ ಮಾಲೆಯಲ್ಲಿ ವಿಶ್ವಾಸದಿಂದ ಸೇರಿಸಿಕೊಂಡ ಶ್ರೀ. ಕೃಷ್ಣಶರ್ಮರು, ಚಿತ್ರ ಬರೆದುಕೊಟ್ಟ ಶ್ರೀ. ಪುರುಷೋತ್ತಮರಾಯರು, ಅಚ್ಚಿನ ಪ್ರತಿ ತಯಾರಿಸಿ, ಕರಡು ನೋಡಿ ನೆರವಾದ ಶ್ರೀ. ಜಿ.ಬಿ. ಮತ್ತು ಆರ್. ಬಿ. ರಾಜ್ ಅವರು, ಮುದ್ರಿಸಿಕೊಟ್ಟ ಶ್ರೀ. ಚಿಂತಾಮಣಿಯವರು ಇವರಿಗೆಲ್ಲ ನಾನು ಋಣಿ.

೧ ಮಾರ್ಚ್, ೧೯೪೬
ಬೆಂಗಳೂರು

ಬಸವರಾಜ ಕಟ್ಟೀಮನಿ

# ತಪ್ಪು – ಒಪ್ಪು

★

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೭ | ೯ | ಏನೋ, | ಏನೋ, ಈಗ |
| ೧೪ | ೨೪ | ನನ್ನ | ನಿನ್ನ |
| ೧೪ | ೨೫ | ನಿನ್ನ | ನನ್ನ |
| ೧೫ | ೨ | ಈ | ಆ |
| ೧೭ | ೩ | ಬಂಾಡಿಗಲ್ಲಿನಂತೆ | ಬಂಡೆಗಲ್ಲಿನಂತೆ |
| ೨೪ | ೮ | ಜಗತ್ತಿನ | ಈ ಜಗತ್ತಿನ |
| ೨೫ | ೯ | ಅನಾತರ | ಅನಂತರ ಜನ |
| ೨೭ | ೧೧ | ಹಾಗೆಯೆ | ಹಾಗೆಯೆ ಇದ್ದ |
| ೨೮ | ೧೫ | ದ್ವೇಷ | ಆ ದ್ವೇಷ |
| ೨೮ | ೨೪ | ಆನ್ನೂ | ಇನ್ನೂ |
| ೩೦ | ೧೩ | ಸುಖವೆನಿಸಿಸುತ್ತಿತ್ತು | ಸುಖವೆನಿಸುತ್ತಿತ್ತು |
| ೩೫ | ೨೦ | ೧೯೪೩ | ೧೯೪೨ |
| ೩೬ | ೨ | ನಿಲುಗನುಡಿ | ನಿಲುಗನ್ನಡಿ |
| ೪೧ | ೧ | ದೇಬ | ದೇವಿ |
| ೪೨ | ೨೧ | ಅವರಿಗೆ | ಅವನಿಗೆ |
| ೫೭ | ೨೦ | ಇವೆಲ್ಲಾ | ಇದೆಲ್ಲಾ |
| ೫೪ | ೫ | ಅವಳ | ಅವನ |
| ೫೫ | ೧೧ | ನಾಗವ್ವ | ನಿಂಗವ್ವ |
| ೬೧ | ೭ | ಅಪರ | ಅವಳ |
| ೬೧ | ೧೦ | ಅವರ | ಅವಳ |
| ೬೨ | ೧೭ | ಅಲಕರಿ | ಅಲಪರಿ |
| ೬೫ | ೨೧ | ಇಳಿಪ | ಇಳಿವ |
| ೬೫ | ೨೨ | ಇಳಿದ | ಇಳಿವ |
| ೭೧ | ೧೪ | ಭಾಗ ವಹಿಸಿಪವರೆ | ಭಾಗ ವಹಿಸದವರೆ |
| ೭೨ | ೨ | ಕಪ್ರಪು | ಕಾಪ್ರಾ |
| ೭೬ | ೭ | ಕೂಡೆಗೆಳೆದು | ಈಚಿಗೆಳೆದು |
| ೮೬ | ೨೪ | ನನ್ನ | ನಿನ್ನ |
| ೯೩ | ೫ | ಭಾವನೆಯಿಂದ | ಎಂಬ ಭಾವನೆಯಿಂದ |
| ೯೬ | ೨೨ | ಮತ್ತೆ | ಮತ್ತೆ ಅವಳನ್ನ |
| ೧೦೪ | ೧೪ | ಆವಾಗ | ಆದರೂ |
| ೧೦೭ | ೧೧ | ಬೃಹಸ್ಪತಿಹಾಳು | ಬೃಹಸ್ಪತಿಗಳು |
| ೧೦೭ | ೨೭ | ಡೋಲು | ಡೌಲು |
| ೧೦೩ | ೪ | (೧) | ........ |
| ೧೧೦ | ೮ | ಕೊನೆಯುವರೊ | ಕೊನೆಯವರೆಗೂ |

# ಗುಲಾಬಿ ಹೂ!

ಹುಣ್ಣಿಮೆಗೆ ಹಿಂದಿನ ದಿನದ ರಾತ್ರಿಯಾದುದರಿಂದ ಹೊರಗಡೆ ತಿಂಗಳ ಬೆಳಕು ತಾನೆತಾನಾಗಿ ಚೆಲ್ಲಿಕೊಂಡಿತ್ತು.

ಕಿಟಕಿಯಿಂದ ಇಣುಕಿ ಹೊರಕ್ಕೆ ದೃಷ್ಟಿಯೋಡಿಸಿದಳು ಕುಸುಮ.

ತಾಯ ಮಡಲಿನಲ್ಲಿ ಸುಖವಾಗಿ ನಿದ್ರೆಹೋದ ಎಳೆ ಮಗುವಿನ ಹಾಗೆ ಆ ಗುಲಾಬಿ ಹೂ ಅರೆ ತೆರೆದಹಾಗೆ ನಸುಬಾಗಿ ಗಿಡದ ಮೇಲೆರಗಿತ್ತು.

ಅದು ದೃಷ್ಟಿಗೆ ಬೀಳುತ್ತಲೂ ಕುಸುಮೆಯ ಎದೆಯ ಕಳವಳವಿನ್ನೂ ಹೆಚ್ಚಾಯಿತು.

ಆ ದಿನ ಬೆಳಗ್ಗೆ.........

ಇದೀಗ ಬಾಗಿ ಗಿಡದ ಮೇಲೊರಗಿದ ಅದೇ ಆ ಗುಲಾಬಿ ಹೂ— ಆಗ ಬಾಲ ರವಿಯ ಬಂಗಾರಗಿರಣಗಳ ಜ್ಯೋತಿಯಲ್ಲಿ ಅರಳಿ ಕುಲುಕುಲು ನಗುವಂತಿತ್ತು........

ಅನಂತರ ನಡೆದ ಆ ಘಟನೆ........

ಚಿತ್ರ ಪಟದಲ್ಲಿಯ ದೃಶ್ಯಗಳಂತೆ ಅದೆಲ್ಲವೂ ಅವಳ ಕಂಗಳೆದುರು ಸರಸರನೆ ಹಾದು ಹೋಗತೊಡಗಿತು

ಬೆಳಗ್ಗೆ ಎದ್ದು ಆ ಅರಳಿದ ಗುಲಾಬಿಯನ್ನೆ ನಿಟ್ಟಿಸುತ್ತ, ಆಗಾಗ ಕನ್ನಡಿಯ ಕಡೆ ಹೊರಳಿ ತನ್ನ ಪ್ರತಿಬಿಂಬದ ಕಡೆ ಕಟಾಕ್ಷ ಬೀರುತ್ತ, ಮಧ್ಯೆ ಮಧ್ಯೆ ಕೇಶರಾಶಿಯ ಮೇಲೆ ಬಾಚಣಿಗೆಯನ್ನಾಡಿಸುತ್ತಿದ್ದಳು. ತನ್ನ ಹೃದಯವನ್ನೆ ಸೂರೆಗೊಂಡಿತ್ತು, ಆ ಮುದ್ದಾದ ಗುಲಾಬಿ ಹೂ!

"ಆಹಾ! ಎಷ್ಟು ಮೋಹಕವಾಗಿದೆ ಈ ಹೂ! ನನ್ನ ಕೆನ್ನೆಗಳೂ ಹೀಗೆಯೆ ಮುದ್ದಾಗಿವೆಯೆಂದು ಕಾಲೇಜಿನಲ್ಲಿದ್ದಾಗ 'ಅವರು' ಹೇಳುತ್ತಿದ್ದರು! ಅಂದಿನ ಆ ದಿನಗಳು! ನೆನೆದೊಡನೆ ಮೈನವಿರೇಳುತ್ತದೆ. ಆ ಬಣ್ಣಬಣ್ಣದ ಕಾಲವೆ ಈಗ ಮತ್ತೆ ಮೊಗದೋರಬಹುದೆ ?........"

ಒಮ್ಮೆದೊಮ್ಮೆಲೆ ತನ್ನ ಕೆನ್ನೆಗಳಿಗೆ ಕೆಂಪೇರಿತ್ತು! ತುಟಿಗಳಲ್ಲಿ ನಾಚಿಕೆಯ ನಗೆ ಸುಳಿದಾಡತೊಡಗಿತ್ತು. ಕನ್ನಡಿಯಲ್ಲಿ ತನ್ನ ಚೆಲುವನ್ನು ತಾನೆ ನೋಡಿಕೊಳ್ಳುತ್ತ ಆಗಾಗ ಆ ಹೂವನ್ನು ಆಸೆಯಿಂದ ನಿಟ್ಟಿಸುತ್ತ ಮೈಮರೆತು ಹೋಗಿದ್ದಳು.

—"ಈ ಗುಲಾಬಿ ಹೂವಿಗೂ ನನ್ನ ಮುಖಕ್ಕೂ ಏನು ವ್ಯತ್ಯಾಸವಿದೆ ?—ನಿಜ. 'ಅವರು' ಕಾಲೇಜಿನಲ್ಲಿದ್ದಾಗ ಹೇಳುತ್ತಿದ್ದಂತೆ 'ಹೆಸರಿಗೆ ತಕ್ಕ ಹುಡುಗಿ' ನಾನು! ಸಂಶಯವೇ ಇಲ್ಲ. ಈ ಕಣ್ಣು! ಈ ಕೆನ್ನೆ! ಈ ರಸದುಂಬಿದ ತುಟಿ! ಈ ಹುಬ್ಬು! —ಈ ಮೂಗು! ಅಹಾಹಾ!........"

ತನ್ನ ಶರೀರವೆಲ್ಲಾ ಒಂದು ಅನಿರ್ವಚನೀಯವಾದ ಸುಖಲಹರಿಯಿಂದ ರೋಮಾಂಚಿತವಾಗಿತ್ತು!

—"ನನ್ನ ಮುಡಿಯಲ್ಲಿ ಹೇಗೆ ಕಾಣಿಸೀತು ಈ ಗುಲಾಬಿ ಹೂ? - ನನ್ನ ಚೆಲುವು ಇನ್ನೂ ಎದ್ದು ಕಾಣಿಸಬಹುದಲ್ಲವೆ ?—'ಅವರು' ಕಳ್ಳತನದಿಂದ ಆ ಹೂ ಹರಿದು ತಂದು ಹಿಂದಿನಿಂದ ಸದ್ದುಮಾಡದೆ ಬಂದು ಅದನ್ನು ನನ್ನ ಮುಡಿಗೆ ಸೇರಿಸಿದರೆ ? —ರೆ........? ಅಹಾಹಾ........"

ಪುನಃ ತನ್ನ ಶರೀರ ಪುಲಕಿತವಾಗಿತ್ತು. ಅದರೊಂದಿಗೆ ಯಾವುದೊ ಮಾಸಪತ್ರಿಕೆಯಲ್ಲಿ ಓದಿದ್ದ ಕತೆಯೊಂದು ಹಠಾತ್ತಾಗಿ ನೆನಪಾಗಿತ್ತು.

—ಆ ಕತೆಯಲ್ಲಿಯ ನಾಯಕ ನಾಯಕಿಯರಿಬ್ಬರೂ ಇನ್ನೂ ಹರಯದವರು. ಒಲವಿನ ನಲ್ಲ–ನಲ್ಲೆಯರು! ಒಂದು ದಿನ ಆಕೆ ಹೆಳಲು ಹಾಕಿಕೊಂಡು ಸಿಂಗಾರರಾಗಿ ಕೂತಿದ್ದಾಗ ಆತನು ಅರಳಿದ ಗುಲಾಬಿ ಹೂವೊಂದನ್ನು ತಂದು ಅವಳಿಗೆ ಮುಡಿಸುವನು. ಮುಡಿಸಿಯಾದ ಬಳಿಕ ಅವಳ ಎದೆಯ ಸುತ್ತ ಕೈ ಹೆಣೆದು ತುಟಿಗಳಿಗೆ ಮುತ್ತಿಟ್ಟು ಕೇಳುವನು.

" ಅಬ್ಬ! ಇದೇನೇ ಇದು! ಅಲ್ಲೊಂದು ಗುಲಾಬಿ ಹೂ! ಇಲ್ಲೊಂದು ಗುಲಾಬಿ ಹೂ!"

" ಎಲ್ಲಿ?" ನಸುನಾಚಿಕೆಯಿಂದಲೂ ನಸುನಗೆಯಿಂದಲೂ ಆಕೆ ಕೇಳುವಳು.

" ಇಲ್ಲಿ!" ಎಂದು ಹೇಳು ಹೇಳುತ್ತಲೇ ಆತನು ಮತ್ತೆ ಆಕೆಯನ್ನು ಪಟಪಟನೆ ಮುದ್ದಿಸುವನು.

" ನನ್ನವರೂ ಹೀಗೆಯೇ ಈ ಗುಲಾಬಿ ಹೂವನ್ನು ಮುಡಿಸಿ ಮುತ್ತಿಟ್ಟರೆ?........" ಎಂದುಕೊಂಡಾಗ ತನ್ನ ಹೃದಯ ಆಶೆ ಆಕಾಂಕ್ಷೆಗಳಿಂದ ತುಂಬಿ ಬಂದಿತ್ತು.

ಆದರೆ........

ಆ ಆಶೆ—ಆಕಾಂಕ್ಷೆ, ಕಾತುರತೆಗಳೆಲ್ಲವನ್ನೂ ಹುಡಿಗೂಡಿಸಿ ತನ್ನ ಹೃದಯಕ್ಕೆ ಬಲವಾದ ಏಟುಹಾಕಿಬಿಟ್ಟಿತ್ತು ನಿರಾಶೆ!—

ಬೆಳಗಿನ ವಾಯು ವಿಹಾರದಿಂದ ಹಿಂದಿರುಗಿದ 'ಅವರು' ತೋಟದಲ್ಲೇ ನಡೆದು ಬಂದರೂ, ಆ ಹೂವಿನ ಕಡೆ ಅವರ ಗಮನ ಸೆಳೆಯಲಿಲ್ಲ. ತನ್ನನ್ನು ಅವರು ಕತ್ತೆತ್ತಿ ನೋಡಲಿಲ್ಲ. ನೇರವಾಗಿ ಒಳಕ್ಕೆ ಕಿಟ್ಟುವಿನ ಹತ್ತಿರ ಹೋಗಿಬಿಟ್ಟಿದ್ದರು. ಅವರಿಟ್ಟ ಒಂದೊಂದು ಹೆಜ್ಜೆಯೂ ತನ್ನ ಆಶೆಯನ್ನು ಮೆಟ್ಟಿ ಮೆಟ್ಟಿ ಹೋದಹಾಗಾಗಿತ್ತು.

ಸಹಜವಾಗಿಯೆ ಆಗ ತನಗೆ ಭಾರಿ ಕೋಪ ಬಂದುಬಿಟ್ಟಿತ್ತು. ಬಾಚಣಿಗೆಯನ್ನು ದೂರ ಬಿಸುಟು, ಕನ್ನಡಿಯನ್ನೊಡೆದು ಚೂರುಚೂರುಮಾಡಿ ಇಲ್ಲಿಂದ ತಕ್ಷಣ ಹೊರಟುಬಿಡಬೇಕೆಂದೂ ಮನಸ್ಸಿನಲ್ಲಿ ಬಂದಿತ್ತು. ಎಂಥ ಸ್ವಾರ್ಥಿ ಈ ಗಂಡಸು ಜಾತಿ! ಅವರ ಹೃದಯವಾದರೂ ಎಂಥದು ಕಲ್ಲಿನಂಥದು!–ಪ್ರೇಯಸಿಯರ ಆಶೆ ಆಕಾಂಕ್ಷೆಗಳ ಕಡೆ ಲಕ್ಷ್ಯ ಕೊಡುವ ತಿಳುವಳಿಕೆ ಕೂಡ ಇರಬಾರದೇ ಅವರಿಗೆ!' ಎಂದುಕೊಂಡಾಗ ಇಡೀ ಪುರುಷ ವರ್ಗವೇ ತನ್ನ ಶಾಪಕ್ಕೆ ಗುರಿಯಾಗಿತ್ತು. ಕಂಠ ಬಿಗಿದುಬಂದಿತ್ತು.

ಅಷ್ಟರಲ್ಲಿ ಕಿಟ್ಟುವನ್ನು ಕರೆದುಕೊಂಡು 'ಅವರು' ತನ್ನ ಬಳಿಬಂದು ನಗುನಗುತ್ತ ಹೇಳಿದ್ದರು:

'ಒಂಭತ್ತು ಗಂಟೆಯಾದರೂ ಇನ್ನೂ ಮುಗೀಲಿಲ್ಲವೇನು ನಿಮ್ಮ ಅಲಂಕಾರ ?'

'ಅವರ' ಮಾತಿನಲ್ಲಿ—'ಅವರ' ಮುಗುಳು ನಗೆಯಲ್ಲಿ ಎಂಥ ಮೋಡಿ ಅವಿತಿತ್ತೊ ಏನೊ!—ತನ್ನ ಕೋಪ—ತಾಪವೆಲ್ಲ ಒಮ್ಮೆಲೆ ಇಳಿದು ಹೋಗಿ ಬಿಟ್ಟಿತ್ತು !

'ಮುಗೀಲಿಲ್ಲರಿ! ಇನ್ನೂ ಕೊಂಚ ಇದೆ' ಎಂದು ಹೇಳಿ ತಾನು ಆ ಹೂವಿನ ಕಡೆ ಅರ್ಥಪೂರ್ಣ ದೃಷ್ಟಿ ಬೀರಿದ್ದಳು. ಏನು ಮಾಡಿದರೇನು! ತನ್ನ ಆಕಾಂಕ್ಷೆ ಅವರಿಗೆ ಕೊನೆಗೂ ಅರ್ಥವಾಗಿರಲಿಲ್ಲ !

'ಕಿಟ್ಟೂಗೆ ಇಂದು ಹೊಸ ಶರ್ಟು ಹೊಲಿಸಬೇಕು ಕುಸುಮಾ! ನಾಡಿದ್ದು ಆತನ ಶಾಲೆ ಶುರುವಾಗುತ್ತಲ್ಲ! ನಡೆ ನೀನೂ ಏನನ್ನಾದರೂ ತೆಗೆದುಕೊಂಡೀಯಂತೆ !"

ಸರಿ! ಆಗ ಮಾತ್ರ ಆ ಹೂವಿನ ಆಸೆ ಬಿಟ್ಟು ಕೊಟ್ಟು ತಾನು ಎದ್ದು ಬಿಡಲೇಬೇಕಾಗಿತ್ತು !

ಒಳಕ್ಕೆ ಹೋಗಿ ಸೀರೆ ಬದಲಾಯಿಸಿಕೊಂಡು ಹೊರಕ್ಕೆ ಬಂದಿದ್ದಳು. ಕಿಟ್ಟೂ ತಂದೆಯ ಕಿರುಬೆರಳನ್ನು ಹಿಡಿದುಕೊಂಡು ಒಂದೊಂದಾಗಿ ಮೆಟ್ಟಲು ಇಳಿಯುತ್ತಿದ್ದ. ಆತನ ದೃಷ್ಟಿ ತಟ್ಟನೆ ಆ ಗುಲಾಬಿ ಹೂವಿನ ಮೇಲೆ ಬಿದ್ದುಬಿಟ್ಟಿತ್ತು.

'ಅಮ್ಮ, ಆ ಹೂ........ನನಗೆ........' ಎಂದು ಹೇಳುತ್ತಲೆ ಕಿಟ್ಟು ಒಂದೇ ಏಟಿಗೆ ಆ ಗುಲಾಬಿ ಗಿಡಕ್ಕೆ ನೆಗೆದುಬಿಟ್ಟಿದ್ದ.

ತನ್ನ ಅತೀವ ನಿರಾಶೆಗೆ ಕಾರಣವಾದ ಆ ಗುಲಾಬಿ ಹೂ ಇನ್ನು ಈ ಕಿಡಿಗೇಡಿ ಕೈಗೆ ಬೀಳುತ್ತಲ್ಲ—ಎಂದು ಯೋಚಿಸುತ್ತಲೂ ತನಗೆ ತಡೆಯಲಾರದ ಕೋಪವುಕ್ಕೇರಿತ್ತು. 'ಅವರು' ನೋಡುತ್ತಿದ್ದಂತೆಯೇ ತಾನು ಸರ್‍ರನೆ ಮುಂದೆ ಹಾರಿ ಕಿಟ್ಟುವಿನ ಕೈಗಳನ್ನು ಬಿಗಿಯಾಗಿ ಹಿಡಿದು ಚಪಾರನೆ ಆತನ ಕೆನ್ನೆಗೊಂದು ಏಟು ಬಿಟ್ಟಿದ್ದಳು. ತಾನೇನು ಮಾಡುತ್ತಿರುವೆನೆಂಬುದರ ಅರಿವೇ ಇರಲಿಲ್ಲ ಆಗ. 'ಹೂವಂತೆ ಇವನಿಗೆ ಹೂ! ನೀನೇನು ಹೆಣ್ಣೇ ?—ಏನು ಮಾಡುತ್ತೀಯಾ ಅದನ್ನ! ಎಂದು ಗರ್ಜಿಸಿದ್ದಳು.

ಏಟು ಬಲವಾಗಿ ಬಿದ್ದುದರಿಂದ ಕಿಟ್ಟೂ ಕೆನ್ನೆಗೆ ತಟ್ಟನೆ ಕೆಂಪೇರಿತ್ತು. ಬೆರಳುಗಳ ಪಡಿಯಚ್ಚು ಅದರ ಮೇಲೆ ಸ್ಪಷ್ಟವಾಗಿ ಎದ್ದು ಕಾಣಿಸು ತ್ತಿತ್ತು.

'ಅವರು' ಒಂದು ಸಲ ತೀಕ್ಷ್ಣ ದೃಷ್ಟಿಯಿಂದ ತನ್ನನ್ನು ನೋಡಿ ದ್ದರು. ಅದೇ ಆಯಿತು. ಅನಂತರ ಪಿಟ್ಟೆಂದು ಮಾತನಾಡಲಿಲ್ಲ. ಎಂಥ ಕಳವಳ ತುಂಬಿಕೊಂಡಿತ್ತು ಆ ದೃಷ್ಟಿಯಲ್ಲಿ!—

ಅತ್ತು ಅತ್ತು ಕಿಟ್ಟುವಿನ ಕಣ್ಣುಗಳೆರಡೂ ಸಾಯಂಕಾಲದ ಮುಗಿ ಲಿನಂತಾಗಿದ್ದುವು.

ಅನಂತರ ಅವನನ್ನು ಸಂತವಿಸಿ ಪೇಟೆಗೆ ಕರೆದೊಯ್ಯಬೇಕಾದರೆ ಒಂದು ಮಹಾ ಪುರಾಣವೇ ನಡೆದಿತ್ತು!

ಅಂದು ಯಾರಿಗೂ ಊಟ ರುಚಿಸಲಿಲ್ಲ. 'ಪಸಿ' ಮಾತ್ರ ಹೊಟ್ಟೆ ತುಂಬಾ ಹೊಡೆದು ಮನೆಯಲ್ಲಿ ಗೊರಗುಟ್ಟುತ್ತಾ ಬಿದ್ದಿತ್ತು.

ಇಡೀ ದಿನವೆಲ್ಲ ಕಳವಳದ ಬರ್ಜಿ ಚುಚ್ಚುತ್ತಲೇ ಇತ್ತು ತನ್ನ ಎದೆ ಯಲ್ಲಿ! ನಿದ್ರೆಯಾದರೂ ಹೇಗೆ ಬರಬೇಕು ಇಂಥ ಸ್ಥಿತಿಯಲ್ಲಿ?........

ಠಣ್! ಠಣ್! ಠಣ್!

—ಕುಸುಮಾ ಬೆಚ್ಚಿಬಿದ್ದು ಹಿಂದಿರುಗಿದಳು.

ಗೋಡೆಗೆ ನೇತಾಡುತ್ತಿದ್ದ ಗಡಿಯಾರದಲ್ಲಿ ತಾಸಿನ ಮತ್ತು ನಿಮಿಷದ ಮುಳ್ಳು ಒಂದನ್ನೊಂದು ಗಟ್ಟಿಯಾಗಿ ಅಪ್ಪಿಕೊಂಡಿದ್ದುವು.

ಹನ್ನೆರಡು ಗಂಟೆ!—ಮಧ್ಯ ರಾತ್ರಿ!

—ಇಡೀ ಜಗತ್ತೆಲ್ಲಾ ನಿದ್ರೆ ಹೋಗಿರಬಹುದು ಈಗ. ಈ ತೋಟ, ಈ ತರುಲತೆಗಳು, ಈ ಗುಡ್ಡ-ಬೆಟ್ಟ, ಈ ನದಿ, ಈ ಗುಲಾಬಿ ಹೂ—ಎಲ್ಲ ಶಾಂತವಾಗಿ ನಿದ್ರೆಹೋದಹಾಗಿವೆ. ಆದರೆ ತಾನು?— ಹಾಯ್! ತನಗೆ ಲ್ಲಿಯ ನಿದ್ರೆ! ಕಳವಳದ ಬಾಣಗಳು ಒಂದೇ ಸಮನೆ ಎದೆಯನ್ನು ಕೊರೆಯು ತ್ತಿವೆ. ಕರುಳನ್ನು ಕಿವುಚುತ್ತಿವೆ!—ನಿದ್ರೆಯ ರುಂಡ ಚೆಂಡಾಡಿ ದೂರ ಹಾರಿಸುತ್ತಿವೆ!

....ಇಂದು ಬೆಳಗ್ಗೆ ಕಿಟ್ಟುವಿನ ಕೆನ್ನೆ ಮೇಲೆ ಮೂಡಿದ್ದ ಬೆರಳುಗಳು!

—ಕೆಂಡದಂತಾಗಿದ್ದ ಆತನ ಕಣ್ಣುಗಳು!

—ಕರುಳನ್ನು ಕೊರೆಯುವ 'ಅವರ' ಆ ಆರ್ತದೃಷ್ಟಿ!

—ಹಾಯ್! ತನಗೆಲ್ಲಿಯ ನಿದ್ರೆ!—ಎಲ್ಲಿಯ ನಿದ್ರೆ;—

ಕುಸುಮಾ ಅಸಹಾಯಳಾದಳು. ಕಿಟಕಿಯಲ್ಲಿ ತಲೆಯನ್ನಿರಿಸಿ ಬಿಕ್ಕಿ ಬಿಕ್ಕಿ ಅಳತೊಡಗಿದಳು.

ತಣ್ಣನೆಯ ಗಾಳಿ ಮೆಲ್ಲನೆ ಬೀಸಿ ಬಂದು ಅವಳ ತಲೆಗೆ ತಂಪ ನೆರಚಿತು. ಅಳುವಿನಿಂದಾಗಿ ಕಳವಳವು ಕೊಂಚ ಕೊಂಚವಾಗಿ ಕರಗಿ ಹೋಗತೊಡಗಿತು.

ಇನ್ನು ನಿದ್ರಿಸಬೇಕು—ಬಿಗಿಯಾಗಿ ಹೊದ್ದುಕೊಂಡು ಮಲಗಿಕೊಳ್ಳಬೇಕು—ಎಂದು ನಿರ್ಧರಿಸಿ ಹಾಸುಗೆಯ ಮೇಲೆ ಉರುಳಿಕೊಂಡಳು. ರಭಸದಿಂದ ಶಾಲನ್ನೆಳೆದು ತಲೆ ತುಂಬಾ ಹೊದೆದುಕೊಂಡಳು.

ಏನು ಮಾಡಿದರೇನು?—

ಬಲಾತ್ಕಾರದಿಂದ ಎಲ್ಲಾದರೂ ಒಲಿಯುವಳೇ ನಿದ್ರೆಯ ಹೆಣ್ಣು?—ಮಹಾ ಮಾಟಗಾತಿ ಆಕೆ! ಕುಸುಮೆಯ ನಿರ್ಧಾರಕ್ಕೆ ಯಶಸ್ಸು ದೊರೆಯುವುದು ಒಂದು ಕಡೆ ಉಳಿದು ಅವಳ ಶರೀರವೆಲ್ಲ ಬಿರ್ರನೆ ಬೆಮತುಕೊಂಡಿತು.

ಎಡಕ್ಕೆ ಹೊರಳಿದಳು! ಬಲಕ್ಕೆ ಹೊರಳಿದಳು! 'ಅಯ್ಯೋ'! ಎಂದಳು. 'ಅಮ್ಮಾ' ಎಂದಳು.

—ಎಲ್ಲಿಯ ನಿದ್ರೆ!........

ತ್ವೇಷದಿಂದ ಎದ್ದು ಕುಳಿತಳು!

ನಿದ್ರೆ ಬರದಂತಾದಾಗ ಎದ್ದು ಏನನ್ನಾದರೂ ಓದುತ್ತಾ ಕುಳಿತಿರುವುದು ಅವಳ ಪದ್ಧತಿಯಾಗಿತ್ತು. ಓದು ಓದುತ್ತಿದ್ದಹಾಗೆ ಕಣ್ಣು ತಾವಾಗಿಯೇ ಮುಚ್ಚಿಕೊಳ್ಳುತ್ತಿದ್ದುವು. ಇಂದೂ ಹಾಗೆಯೇ ಮಾಡುವುದೆಂದುಕೊಂಡು ಚಟ್ಟನೆದ್ದು ಮೇಜಿನ ಬಳಿ ಬಂದು ದೀಪದ ಬತ್ತಿಯನ್ನು ಮೇಲಕ್ಕೇರಿಸಿದಳು. ಏನನ್ನು ಓದುವುದು—ಎಂದು ಯೋಚಿಸುತ್ತಿದ್ದಾಗಲೆ ಮೇಜಿನ ಮೇಲೆ ಬಿದ್ದಿದ್ದ ಹಾಳೆಗಳದೊಂದು ಕಟ್ಟು ಅವಳ ಚಿತ್ತವನ್ನೆಳೆಯಿತು.

ಕುತೂಹಲ ತುಂಬಿದ ದೃಷ್ಟಿಯಿಂದ ಅದನ್ನು ನಿಟ್ಟಿಸಿದಳು.

'ಅವರ' ದಿನಚರಿ!

ರಾತ್ರಿ ಬರೆದು, ಮರೆತು ಅಲ್ಲೇ ಬಿಟ್ಟಿರಬಹುದೇನೊ ಎಂದುಕೊಂಡು ಢಡಢಡಿಸುವ ಹೃದಯದಿಂದ ಅದನ್ನು ಕೈಗೆತ್ತಿಕೊಂಡಳು.

ಇದುವರೆಗೂ 'ಅವರ' ದಿನಚರಿ ಆಕೆ ಕೈಗೆ ಬಂದಿರಲಿಲ್ಲ. ಒಂದೆರಡು ಬಾರಿ 'ಅವರು' ಬರೆಯುತ್ತ ಕೂತಾಗ ನೋಡಿದ್ದಳಾದರೂ, ಅದನ್ನು ಓದಿನೋಡಬೇಕೆಂಬ ಉತ್ಸುಕತೆಯೇನೂ ಆಕೆಗುಂಟಾಗಿರಲಿಲ್ಲ. ಆದರೆ ಏಕೋ ಏನೋ, ಸಾಧ್ಯವಿದ್ದಷ್ಟು ಓದಿಯೆ ತೀರಬೇಕೆಂದು ಅಪೇಕ್ಷೆಯುಂಟಾಯಿತು. ನಿದ್ರೆಹೋಗಿದ್ದ 'ಅವರ'ನ್ನೊಮ್ಮೆ ನಿಟ್ಟಿಸಿದಳು. ಅವಳ ಕಡೆ ಬೆನ್ನು ತಿರುಗಿಸಿ ಗಾಢ ನಿದ್ರೆಯಲ್ಲಿ ತಲ್ಲೀನರಾಗಿದ್ದರು 'ಅವರು'!

ನಡುಗುವ ಕೈಗಳಿಂದ ಕುಸುಮಾ ಒಂದೊಂದೇ ಹಾಳೆಗಳನ್ನು ಮಗುಚಿಹಾಕ ತೊಡಗಿದಳು.

ಒಂದು ಹಾಳೆ ಹೀಗೆ ಆರಂಭವಾಗಿತ್ತು:

"ತಾ|| ೨ ೬ ೩೪.

ರಾತ್ರಿ ಹತ್ತು ಗಂಟೆ.

ಇಂದು ಶಾಮಲೆ ನನ್ನನ್ನು ತ್ಯಜಿಸಿಹೋದಳು. ದೂರ........ದೂರ ........ದೂರ ಹೋದಳು. ಆ ಕೋಮಲ ದೇಹವನ್ನು ಬೆಂಕಿಯ ಜ್ವಾಲೆಗಳಿಗೆ ಬಲಿಕೊಟ್ಟು ಈಗತಾನೇ ಬಂದಿದೇನೆ. ಆಕೆ ಸತ್ತುಹೋದಳು. ಅದಕ್ಕಾಗಿ ಅಳುತ್ತಿಲ್ಲ ನಾನು. ಒಂದು ದಿನ—ಎಂದಾದರೊಂದು ದಿನ ನಾನೂ ಹೀಗೆಯೇ ಬೆಂಕಿಯ ಜ್ವಾಲೆಗಳಿಗೆ ಬಲಿಯಾಗುವವನೇ ಅಲ್ಲವೆ? ಸತ್ತವರಿಗಾಗಿ ಅಳುತ್ತ ಕೂತಿರುವುದು ಶುದ್ಧ ಮೂರ್ಖತನವಲ್ಲದೆ ಬೇರಿಲ್ಲ. ಆದರೆ ........ಸತ್ತ ಶಾಮಲೆಗಾಗಿ ಶೋಕಿಸುತ್ತಿದ್ದೇನೆಯೆ ನಾನು?—ಇಲ್ಲ........ ಇಲ್ಲ........ಶಾಮಲೆಯ ಈ ಪ್ರತಿ ಮೂರ್ತಿ........ನಮ್ಮ ಪ್ರೀತಿಯ ಪಡಿಯಚ್ಚು........ನನ್ನ ಮುದ್ದು ಕಂದ........ಏನನ್ನೂ ಅರಿಯದ ಈ ಹಸು

ಗೂಸು—ಇಂಥ ವಯಸ್ಸಿನಲ್ಲಿ ಹೀಗೆ ಇನನ್ನು ಚೆಲ್ಲಿಕೊಟ್ಟು ಆಕೆ ನಡೆದು ಬಿಟ್ಟಳು. ನಾನಿನ್ನೂ ಕಾಲೇಜು ವಿದ್ಯಾರ್ಥಿ...........ಇನ್ನು ಈ ಅನಾಥ ಮಗುವಿನ—ತಾಯಿಯಿಲ್ಲದ ತಬ್ಬಲಿ ಮಗುವಿನ ಗತಿಯೇನು ಎಂದು ಮರುಗುತ್ತಿದೇನೆ........ಕೊರಗುತ್ತಿದೇನೆ.......ಕಣ್ಣೀರು ಸುರಿಸುತ್ತಿದೇನೆ........

ಶಾಮಲೆಯಂತೂ ಹೋದಳು! ಇನ್ನು ನನ್ನ ಬಾಳುವೆ?—ಸಹರಾ ಮರುಭೂಮಿಯಂತೆ! ಆ ಭೀಕರ ಮರುಭೂಮಿಯಲ್ಲೂ ನನ್ನ ಈ ಕೋಮಲ ಕಂದ ಬೆಂದುಹೋಗಬೇಕೇ ?—

ಹಾಯ್! ಹಾಯ್! ಶಾಮಲೆ! ನಿನ್ನನ್ನು ಸೆಳೆದೊಯ್ದ ಆ ವಿಧಿ ಎಂಥ ಕಂಠೋರ ಹೃದಯಿಯಾಗಿರಬಹುದು! ಈ ಹಸುಳೆಯ ಮೇಲಾದರೂ ಕನಿಕರವಿಟ್ಟು ನಿನ್ನನ್ನು ಬಿಟ್ಟುಬಿಟ್ಟಿದ್ದರೆ?—

ಆದರೆ—ಅದಲ್ಲಿ ಸಾಧ್ಯವಿದೆ ?

ಮೃತ್ಯು! ಕಠೋರ ಮೃತ್ಯು! ಪಾಪಿ! ಮಹಾ ಭಯಂಕರ ಪಿಶಾಚಿ! —ಅಯ್ಯೋ, ಈ ಮೃತ್ಯುವನ್ನು ಕೊಲೆಮಾಡುವವರಾರೂ ಇಲ್ಲವೆ ಈ ಜಗತ್ತಿನಲ್ಲಿ ?—"

ಮುಂದೆ ಓದುವುದಕ್ಕೂ ಆಗಲಿಲ್ಲ ಕುಸುಮಾಗೆ. ಅವಳ ಕಣ್ಣುಗಳಲ್ಲಿ ನೀರು ತುಂಬಿ ಬಂದಿತ್ತು.

ಉದ್ವೇಗದ ಭರದಲ್ಲಿ ಮಧ್ಯೆ ಎಷ್ಟು ಹಾಳೆಗಳನ್ನು ಹಾಗೆಯೇ ಮಗುಚಿ ಹಾಕಿದ್ದಳೊ ತಿಳಿಯದು. ಕಂಬನಿಗಳನ್ನು ಮಿಡಿದುಕೊಂಡು ಇನ್ನೊಂದು ಹಾಳೆಯಮೇಲೆ ದೃಷ್ಟಿಯನ್ನು ಸ್ಥಿರವಾಗಿರಿಸಿದಳು :

"ತಾ|| ೪-೯-೩೭.

ರಾತ್ರಿ ಎರಡು ಗಂಟೆ.

ಏನು ಮಾಡಲಿ?

ನಿದ್ರೆ ಬಾರದಾಗಿದೆ.

ಹೃದಯದಲ್ಲಿ ಭೀಕರ ಕೋಲಾಹಲಕ್ಕಾರಂಭವಾಗಿದೆ.

ನನ್ನಂಥ ದುರ್ದೈವಿ ಈ ಜಗತ್ತಿನಲ್ಲಿ ಇನ್ನೊಬ್ಬನಿರಬಹುದೇ ?

ನನಗೆ ಊಟಕ್ಕೆ ಕೊರತೆಯಿಲ್ಲ. ವಿಲಾಸಕ್ಕೆ ಕೊರತೆಯಿಲ್ಲ. ಈ ಸಂಪತ್ತೆಲ್ಲವನ್ನು ಕಟ್ಟಿಕೊಂಡು ಏನು ಮಾಡಬೇಕಾಗಿದೆ?—ಇದನ್ನೆಲ್ಲ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಸುಖವನ್ನು ಕೊಟ್ಟಾರೇ ಯಾರಾದರೂ ನನಗೆ ?—

ಶಾಮಲೆಯೇನೋ ಸತ್ತು ಹೋದಳು. ಈ ಮಧ್ಯೆ ಕಾಲೇಜಿನಲ್ಲಿ ಕುಸುಮೆಯ ಸ್ನೇಹವಾಯಿತು. ಆ ಸ್ನೇಹ ಮದುವೆಯಲ್ಲಿ ಮುಗಿದೀತೆಂದು ನನಗಾಗ ಎಲ್ಲಿ ತಿಳಿದಿತ್ತು? ಏನೋ—ಹೇಗೋ ಮದುವೆಯೂ ಆಯಿತು. ಮೊದಲ ಹೆಂಡತಿಯಿಂದ ನನಗೊಂದು ಮಗುವಾಗಿದ್ದುದನ್ನು ಅರಿತೂ ಕುಸುಮಾ ನನ್ನನ್ನು ವರಿಸಲೊಪ್ಪಿದಳು. ಅದೆಂಥ ಅಪಾರ ಪ್ರೀತಿ ಆಕೆಯದು ನನ್ನ ಮೇಲೆ! ನಾನೂ ಅವಳ ರೂಪರಾಶಿಗೆ ಮಾರುಹೋದೆ. ಮದುವೆ ಮಾಡಿಕೊಂಡೆ. ಈಗ ಅದರ ಫಲ ಅನುಭವಿಸುತ್ತಿದ್ದೇನೆ.

'ಮಲತಾಯಿ ಎಷ್ಟೆಂದರೂ ಮಲತಾಯಿಯೇ!' ಎಂದು ಜನರಾಡುವ ಮಾತಿನಲ್ಲಿ ಈಗ ಕಾಣಿಸುತ್ತಿದೆ ನನಗೆ ಸತ್ಯ. ಆಗ?—ಆಗ ಏಕೆ ಹೊಳೆಯಲಿಲ್ಲವೊ ಈ ವಿಚಾರ ನನಗೆ? ಏಕೆ ಎಂದರೇನು ಹೇಳುವುದು! ಆಗ ನನ್ನ ಕಣ್ಣುಗಳಿಗೆ ಮೋಹದ ಪರದೆ ಬಿದ್ದಿದ್ದಿತಲ್ಲ! ಕುಸುಮೆಯ ಹರಯದ ತುಂಬು ಶರೀರ ನನ್ನ ಎದೆಯನ್ನು ಸೆರೆಹಿಡಿದಿದ್ದಿತಲ್ಲ!

ಕುಸುಮಾ ಕಿಟ್ಟುವನ್ನು ಮೆಚ್ಚಿಕೊಂಡಿಲ್ಲವೆಂತಲ್ಲ. ಆತನನ್ನಾಕೆ ಪ್ರೀತಿಸುತ್ತಿಲ್ಲವೆಂತಲ್ಲ.........ಆದರೇನು! ಈಚೆಗೆ ಅವಳ ವರ್ತನೆಯೇ ವಿಚಿತ್ರವಾಗಿ ಹೋಗಿದೆ. ನಾನು ಮನೆ ಸೇರಿದಾಗಲೆಲ್ಲ ಕಿಟ್ಟೂ ಕಂಬನಿ ಗರೆಯುತ್ತಲೇ ಇರುತ್ತಾನೆ. ಅವನು ಬಯಸಿದ ವಸ್ತು ಅವನಿಗೆ ಸಿಕ್ಕುವುದಿಲ್ಲ. ಬೇಡವಾದದ್ದು ಮಾತ್ರ ಸಾಕಾಗುವಷ್ಟು!—ಅವುಗಳನ್ನು ಕೊಡುವಾಗ ಬಲಾತ್ಕಾರ ಬೇರೆ. ಕುಸುಮೆಯ ಈ ವಿಲಕ್ಷಣ ವರ್ತನೆಯ ಅರ್ಥವೇನೋ—ನನಗೆ ತಿಳಿಯದಾಗಿದೆ.

ನೆರೆಹೊರೆಯುವರೆಲ್ಲ ಆಗಾಗ ಕಿವಿಮಾತನಾಡಿಕೊಳ್ಳುತ್ತಾರೆ—ನಾನು ಹೊರಗೆ ಹೋಗಿದ್ದಾಗ ಕುಸುಮಾ ಕಿಟ್ಟುವನ್ನು ಕೊಠಡಿಯಲ್ಲಿ ಹಾಕಿ ಏಟು ಕೊಡುತ್ತಾಳೆ—ಎಂದು. ಜನರ ಮಾತನ್ನು ನಿಜವೆಂದು ನಂಬಲೇ ನಾನು?

ಹೂವಿನಂಥ ಮೃದು ಹೃದಯದ ನನ್ನ ಕುಸುಮಾ ಇಂಥ ಕೃತ್ಯ ಮಾಡಿಯಾಳೇ? ಆಕೆಯ ಹೃದಯವೇನು ನನಗೆ ಅಪರಿಚಿತವೇ?—ನಾನಿದನ್ನೆಲ್ಲ ಹೇಗೆ ನಂಬಲಿ?

ಆದರೇನು, ಈ ಜನರೆಲ್ಲ ಆಡುವುದು ಸುಳ್ಳು ಎನ್ನಬೇಕೇ?—ಅಲ್ಲದೆ ಕಿಟ್ಟುವಿನ ಕೆಂಪಗಾದ ಕೆನ್ನೆ, ದಾಸವಾಳ ಹೂವಿನಂತಾದ ಕಣ್ಣು, ಬಾಡಿದ ಮುಖ, ಕುಂದಿದ ಶರೀರ, ಒಡೆದ ಧ್ವನಿ ಇವೆಲ್ಲ ಏನು ಹೇಳುತ್ತವೆ?

ಕುಸುಮೆಯನ್ನು ನಾನು ಮದುವೆಯಾಗಬಾರದಾಗಿತ್ತೇ?

ಅಯ್ಯೋ, ಈ ಸಮಸ್ಯೆ ಪರಿಹಾರವಾಗುವುದೆಂತು?

ನನಗೆ ಸುಖ ನಿದ್ರೆ ಬರುವುದೆಂತು?"

ಓದಿದ ಹಾಗೆಲ್ಲ ಕುಸುಮೆಯ ಹೃದಯದ ಉದ್ವೇಗ ಹೆಚ್ಚತೊಡಗಿತು. ರಭಸದಿಂದ ಎಲ್ಲ ಹಾಳೆಗಳನ್ನೂ ಮಗುಚಿಹಾಕಿದಳು. ಬರೆದಿದ್ದ ಕೊನೆಯ ಹಾಳೆ. ಅಂದು ರಾತ್ರಿ 'ಅವರು' ಬರೆದಿದ್ದುದು!

ಕುಸುಮಾ ಓದತೊಡಗಿದಳು—

ತಾ|| ೫ ೨-೩೨.

ರಾತ್ರಿ ಎಂಟು ಗಂಟೆ.

ಒಂದು ಗುಲಾಬಿ ಹೂವಿಗಾಗಿ!—

—ಒಂದೇ ಒಂದು ಕ್ಷುದ್ರ ಗುಲಾಬಿ ಹೂವಿಗಾಗಿ ಇಂದು ಕಿಟ್ಟೊ ಏಟು ತಿಂದ!

ನನಗೆ ನಿಜಕ್ಕೂ ಆಶ್ಚರ್ಯವಾಗುತ್ತದೆ. ಕುಸುಮಾ ಆತನನ್ನು ಹೇಗೆ ಹೊಡೆದಳೋ! ಅವಳ ಬೆರಳು ಆತನ ಕೆನ್ನೆಯ ಮೇಲೆ ನಿಚ್ಚಳವಾಗಿ ಮೂಡಿದ್ದುವು. ಅವನ್ನು ನೋಡಿದ ಹಾಗೆಲ್ಲ ನನ್ನ ಕರುಳು ಕಿವಿಚುತ್ತಿತ್ತು. ಆದರೆ ನಾನು ಪಿಟ್ಟೆನ್ನಲಿಲ್ಲ—

ಹೇಗೆತಾನೆ 'ಪಿಟ್ಟೆನ್ನು'ವುದು?

**ಕೋಪದ ಭರದಲ್ಲಿ ಕುಸುಮಾ ವಿಪರೀತಕ್ಕೆ ಹೋಗಿಬಿಟ್ಟರೆ?**

**ಮೊದಲೇ ಕಾಲೇಜು ಶಿಕ್ಷಣ ಪಡೆದ ತರುಣಿ. ಸಿಡಿದುಕೊಂಡು ತಟ್ಟನೆ**

ಹೊರಟು ಹೋಗಿಬಿಟ್ಟರೆ? ಆಕೆ ಹೋದರೆ ನಾನೇನೂ ಸತ್ತುಹೋಗುವುದಿಲ್ಲ. ಆದರೆ....ಜನ ಏನೆಂದಾರು? ಅವರ ಮುಖ ಯಾರು ಕಟ್ಟಿಯಾರು?

ಕುಸುಮೆಗೂ ಈ ಬಗ್ಗೆ ಪಶ್ಚಾತ್ತಾಪವಾಗಿದ್ದರೂ ಆಗಿರಬಹುದು. ಸಿಜಕ್ಕೂ ಹೂವಿನಂಥ ಹುಡುಗಿ ಆಕೆ. ಹೃದಯವೂ ಅಂಥದೇ. ಏನೋ ಒಂದು ಹುಚ್ಚು ಆವೇಶದಲ್ಲಿ ಹಟ ಬಿಟ್ಟಿರಬೇಕು. ಸ್ತ್ರೀಯರ ಹೃದಯ! ಅದರಷ್ಟು ವಿಚಿತ್ರವಾದುದು ಇನ್ನಾವುದೂ ಇಲ್ಲ. ಕ್ಷಣಕ್ಕೆ ಕೋಪ— ಕ್ಷಣಕ್ಕೆ ಪ್ರೇಮ!

ಹೋಗಲಿ! ಹೆಂಗಸರು ಎಷ್ಟು ಕಲಿತರೂ ಎಷ್ಟು ಸುಧಾರಿಸಿದರೂ.... ....ಅವರು 'ಹಾ—ಗೆ—ಯೇ!'

ಹೇಳುತ್ತಾರಲ್ಲ—'ಹುಟ್ಟುಗುಣ' ಅಂತ!"

ಓದು ಮುಗಿಸುವುದರೊಳಗಾಗಿ ಕುಸುಮೆಗೆ ತುಂಬಾ ಪಶ್ಚಾತ್ತಾಪವಾಗಿತ್ತು. 'ನಾನು ಹಾಗೆ ಯಾಕೆ ಹೊಡೆದೆ—ಅನ್ನುವುದು ನಿಮಗೆ ಹೇಗೆ ತಿಳಿದೀತು ನನ್ನ ರಾಜಾ!' ಎಂದು ಮನಸ್ಸಿನಲ್ಲೇ ಕೂಗಿಕೊಂಡಳು. ದಿನಚರಿಯ ಪುಸ್ತಕವನ್ನು ಇದ್ದುದಿದ್ದಹಾಗೆ ಇಟ್ಟು ಬಂದು ಹಾಸುಗೆಯಮೇಲೆ ಬಿದ್ದಳು. ತಲೆ ದಿಂಬಿನ ಮೇಲೆ ಮುಖ ಇಟ್ಟು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ರಾಮುವಿನ ನಿದ್ರೆ ಹಾರಿಹೋಯಿತು. ಪಕ್ಕಕ್ಕೆ ತಿರುಗಿ ನೋಡಿದ. ಮೇಜಿನ ಮೇಲಿದ್ದ ದೀವಿಗೆ ಶಾಂತವಾಗಿ ಉರಿಯುತ್ತಿತ್ತು! ಕುಸುಮೆಯ ಮುಖದಿಂದ ಅಳು ಮೌನವಾಗಿ ಉರುಳುತ್ತಿತ್ತು!

ತಟ್ಟನೆದ್ದು ಕುಳಿತು ಅವಳ ತಲೆಯನ್ನೆತ್ತಿ ತೊಡೆಯ ಮೇಲಿಟ್ಟುಕೊಂಡ. ಬೆರಳಿನಿಂದ ಒಂದೊಂದು ಕಂಬನಿಯನ್ನೊರೆಸುತ್ತ ಕೇಳಿದ.

'ಏಕೆ ಕುಸುಮಾ ಅಳುತ್ತಿದ್ದೀಯಾ?'

ನಲ್ಲನ ಎದೆಯಲ್ಲಿ ಮುಖ ಮುಚ್ಚಿಕೊಂಡು ಬಿಕ್ಕುತ್ತ ಬಿಕ್ಕುತ್ತ ಆಕೆ ಹೇಳಿದಳು.

'ನಾನು ಪಾಪಿ! ನನ್ನ ಕ್ಷಮಿಸಿ!'

'ಪಾಪಿ? ಎಂಥ ಪಾಪ? ಏನು ಪುಣ್ಯ?—ಇದೇನೇ ಕುಸುಮಾ, ಎಂದೂ ಇಲ್ಲದ ಹುಚ್ಚು ಇಂದು?—ಇದುವರೆಗೂ ಅಳುತ್ತಲೇ

ಇದ್ದಿಯೆಂತ ಕಾಣುತ್ತೆ?—ನಿದ್ರೆಯೇ ಇಲ್ಲವೇನು? ಅಯ್ಯೋ? ಹುಚ್ಚಿಯೇ ಹುಚ್ಚಿ!—" ಎನ್ನುತ್ತ ಆಕೆಯ ಕೂದಲು ತೀಡುತ್ತ ಹೇಳಿದ.

'ಏನಾಯಿತೇ ಕುಸುಮಾ?—ಹೇಳು. ಏನಾಯಿತು?'

ಆಕೆ ಮಾತನಾಡಲಿಲ್ಲ. ಮೆಲ್ಲನೆ ಕೈ ಎತ್ತಿ ಕಿಟಕಿಯಾಚೆಗಿದ್ದ ಆ ಗುಲಾಬಿ ಹೂವಿನ ಕಡೆ ಬೆರಳು ಮಾಡಿದಳು.

ಆಗ ಅವನಿಗೆಲ್ಲವೂ ಅರ್ಥವಾಯಿತೇನೋ!—ಮೇಜಿನ ಕಡೆ ನೋಡಿದ. ದಿನಚರಿ ಅಲ್ಲೇ ಬಿದ್ದಿತ್ತು!—ಅಂತೂ ಅದನ್ನೆಲ್ಲಾ ಓದಿ ಬಿಟ್ಟಿರಬೇಕು—ಎಂದುಕೊಂಡು ಮೆಲ್ಲನೆದ್ದು ದೀಪ ಸಣ್ಣಗೆ ಮಾಡಿ ಹಾಸುಗೆಗೆ ಬಂದ. 'ಇಂದು ಸಾಕು ಇಷ್ಟೆ. ಇನ್ನು ನಿದ್ರೆ ಮಾಡೋಣ' ಎಂದು ಹೇಳಿ ಅವಳ ಕಂಬನಿಗಳನ್ನು ಒರೆಸಿ, ಕೆನ್ನೆಗಳಿಗೆ ಮೃದುವಾಗಿ ಮುತ್ತಿಟ್ಟು ಮಲಗಿಸಿದ. ಆತನ ಎದೆಗೆ ಎದೆ ಸೇರಿಸಿ, ಕುಸುಮಾ ಹಾಯಾಗಿ ಕಣ್ಣು ಮುಚ್ಚಿಕೊಂಡಳು.

ಠಣ್!

ಒಂದು ಗಂಟೆಯಾಯಿತು ಗಡಿಯಾರದಲ್ಲಿ!

ಅದರೊಂದಿಗೆ ಆ ನಲ್ಲನಲ್ಲೆಯರ ಆತ್ಮಗಳೆರಡೂ ಒಂದಾಗಿಬಿಟ್ಟವು!

## [೨]

ಮಾರನೆಯ ದಿನ ಕುಸುಮಾ ಹಾಸುಗೆ ಬಿಟ್ಟು ಎದ್ದಾಗ ಅವಳ ಹೃದಯದಲ್ಲಿ ಅನನುಭೂತ ಆನಂದೋತ್ಸಾಹ ತುಂಬಿತ್ತು. ಎದ್ದು ಒಲೆ ಹೊತ್ತಿಸಿ ಕಾಫಿಗೆ ನೀರು ಇಟ್ಟು ಕೂದಲು ಬಾಚಿಕೊಳ್ಳತೊಡಗಿದಳು. ನಿತ್ಯದಂತೆ ನಾಲ್ಕು ಗಂಟೆಗೇ ಎದ್ದು ರಾಮೂ ನದೀ ತೀರಕ್ಕೆ ವಾಯುವಿಹಾರ ಹೋಗಿದ್ದ.

ಹಠಾತ್ತಾಗಿ ಏನೋ ಸ್ಮರಣೆಯಾಗಲು ಕುಸುಮಾ ಕೂಗಿ ಕರೆದಳು.

'ಕಿಟ್ಟೂ, ಕಿಟ್ಟೂ, ಏ ಕಿಟ್ಟೂ ssss'

ಕಿಟ್ಟೂ ಎಲ್ಲಿದ್ದನೊ ಏನೋ, ಆಕೆಗೆ 'ಓ' ಕೊಡಲಿಲ್ಲ.

ಪುನಃ ಲಕ್ಷ್ಮಿ ಮಾತಿನಲ್ಲ ಆಕೆ ಕೂಗಿ ಕರೆದಳು--

' ಕಿಟ್ಟೂ, ಕಿಟ್ಟೂ, ಏ ಕೃ--ಷ್ಣಾss '

ಆದರೂ ಉತ್ತರವಿಲ್ಲ. ಕಿಟ್ಟೂವಿನ ಸುಳಿವೂ ಇಲ್ಲ.

' ಕಿಟ್ಟೂ, ಏ ಗೋಪಾಲಕೃಷ್ಣಾ !'

ಮತ್ತೆ ನಿರುತ್ತರವೆ !

ಕುಸುಮಾ ಆಗ ಮಾತ್ರ ಕೂತಲ್ಲಿಂದ ಎದ್ದುಬಿಟ್ಟಳು. ಬಂದು ನೋಡಿದರೆ ಕಿಟ್ಟು ಬಾಗಿಲಿನಲ್ಲಿ ನಿಂತು ಏನನ್ನೋ ಏಕಾಗ್ರ ಚಿತ್ತದಿಂದ ನೋಡುತ್ತಿದ್ದ.

ಅವನ ದೃಷ್ಟಿ ಸ್ಥಿರವಾಗಿ ನೆಲಸಿತ್ತು ಆ ಗುಲಾಬಿಹೂವಿನ ಮೇಲೆ!

ಅದೇ ಆ ಗುಲಾಬಿ ಹೂ—ನಿನ್ನೆಯ ದಿನ ಅಷ್ಟೆಲ್ಲ ಅನರ್ಥಕ್ಕೆ ಕಾರಣ ವಾದ ಆ ಹೂ—ಇಂದು ಇನ್ನೂ ದೊಡ್ಡದಾಗಿ, ಅದೇ ಮೇಲಕ್ಕೇರುತ್ತಿದ್ದ ಸೂರ್ಯ ಕಿರಣಗಳಲ್ಲಿ ಅರಳಿ ನಳನಳಿಸುತ್ತಿತ್ತು !

ಕಿಟ್ಟೂವಿನ ಗದ್ದವನ್ನು ಹಿಡಿದೆತ್ತಿ ಕುಸುಮಾ ಜಿಕ್ಕರದ ಧ್ವನಿಯಲ್ಲಿ ಕೇಳಿದಳು.

' ಏನು ನೋಡುತ್ತಿದ್ದೀಯಾ ಕಿಟ್ಟೂ ? '

ಕಿಟ್ಟೂ ಕಣ್ಣು ಕುಣಿಸುತ್ತ ಉತ್ತರವಿತ್ತ.

' ಆ ಗುಲಾಬಿ ಹೂ........ಅಮ್ಮಾ !'

' ಕಿಟ್ಟೂ, ನಿನಗೆ ಬೇಕೇ ಆ ಗುಲಾಬಿ ಹೂ ?'

' ಹೌದಮ್ಮಾ! ಬೇಕು !....ಆದರೆ....ಬೇಡಮ್ಮಾ ಬೇಡ. ನೀನು ಹೊಡೆಯುತ್ತೀಯೆ !'—ಅವನ ದೃಷ್ಟಿಯಲ್ಲಿ ಕಳವಳ ಹೊರಸೂಸುತ್ತಿತ್ತು.

' ಇಲ್ಲವಮ್ಮಾ ಕಿಟ್ಟೂ, ನಾನಿನ್ನು ಹೊಡೆಯೋಲ್ಲ ! '

' ಹೊಡೆಯೋಲ್ಲವೆ ಅಮ್ಮಾ ?-ಎಂ-ದೆಂ- ದೂ ?'

' ಇಲ್ಲಪ್ಪಾ !-ಇನ್ನೆಂದೂ ನಿನ್ನ ಹೊಡೆಯೋಲ್ಲ !—ನಿನಗೆ ಕೈಕೂಡಾ ಹಚ್ಚೋಲ್ಲ !—ನನ್ನ ಮುದ್ದು ನೀನು ! ನನ್ನ ಚಂದ್ರಾಮ ನೀನು !........' ಎಂದೆನ್ನುತ್ತ ಕುಸುಮಾ ಅವನನ್ನೆತ್ತಿ ಎದೆಗವಚಿಕೊಂಡಳು.

' ಕಿಟ್ಟೂ, ಆ ಹೂ ತೆಗೆದುಕೊಂಡು ಏನು ಮಾಡುತ್ತೀಯಾ ?'

ಆತ ತಟ್ಟನೆ ಉತ್ತರವಿತ್ತ.

'ತಂಗೀಗೆ ಮುಡಿಸುತ್ತೇನೆ ಅಮ್ಮಾ! ನನಗೊಬ್ಬಳು ತಂಗೀನ ಕೊಡೇ ನೀನು!–ಆ ಜಾಗಿರದಾರರ ಮುನ್ನಾ ನಿನ್ನೆ ತನ್ನ ತಂಗಿಗೆ ಹೂ ಕೊಡುತ್ತಾ ಇದ್ದ. ನಾನೂ ನನ್ನ ತಂಗೀಗೂ ಕೊಡಬೇಕು ಅಂತ ಅನ್ನಿಸಿತು. ಅಮ್ಮಾ, ನೀನು ನನಗೊಬ್ಬಳು ತಂಗೀನ ಕೊಡುತೀಯಾ?—ನಾನು ಆಕೆಗೆ ಹೂ ಮುಡಿ ಸುತ್ತೇನೆ. ಅಮ್ಮಾ!—ಆಂss?'

ಕುಸುಮಾ ಬೆಚ್ಚಿಬಿದ್ದಳು. ಇಷ್ಟು ಪುಟ್ಟ ಜೀವದ ಅಪೇಕ್ಷೆ ಎಂಥದು! ತಂಗಿ ಬೇಕಂತೆ! ಆದರೆ ಆ ಭಾಗ್ಯ ಎಲ್ಲಿದೆ ತನಗೆ?

ಆ ತಾಯ ಹೃದಯ ತುಂಬಿ ಬಂದಿತು.

'ಕಿಟ್ಟೂ, ನೀನೇ ಅಣ್ಣ, ನೀನೇ ತಂಗಿ—ಎಲ್ಲಾ ನೀನೇ!' ಎಂದು ಹೇಳಿ ಅವನನ್ನು ಮತ್ತೆ ಮತ್ತೆ ಮುತ್ತಿಟ್ಟುಕೊಂಡಳು.

ಅಷ್ಟರಲ್ಲಿ ರಾಮು ಬಂದು ತಾಯಿ ಮಕ್ಕಳ ಚಿನ್ನಾಟವನ್ನೆಲ್ಲ ನಿರೀಕ್ಷಿಸುತ್ತಿದ್ದ. ಆತನಿಗೆ ಏನು ವಿಚಾರಬಂತೋ ತಿಳಿಯದು. ಆ ಅರಳಿದ ಗುಲಾಬಿ ಹೂವನ್ನು ಮೆಲ್ಲನೆ ಕಿತ್ತು ತಂದು, ಆಕೆಗೆ ತಿಳಿಯದಂತೆ ಹಿಂದಿನಿಂದ ಬಂದು ಅವಳ ಮುಡಿಯಲ್ಲಿ ಸೇರಿಸಿದ. ಮೆಲ್ಲಗೆ ಬಾಗಿ ಅವಳ ತುಟಿಗಳಿಗೆ ಒಂದು ಮುತ್ತನ್ನೊತ್ತಿದ.

ಕುಸುಮಾ ಚಕಿತಳಾಗಿ ಕತ್ತುಹಾರಿಸಿ ನೋಡಿದಳು.

ರಾಮೂ ನಸುನಗುತ್ತ ನಿಂತಿದ್ದ!

'ಅಯ್ಯೋ! ಹೋಗ್ರಿ ಅಂದ್ರೆ! ಏನಿದು ನಿಮ್ಮ ಹುಡುಗಾಟ? ಎಂದು ನಾಚಿಕೆ ತುಂಬಿದ ಧ್ವನಿಯಲ್ಲಿ ಹೇಳಿದಳು.

'ಗುಲಾಬಿ ಹೂ!' ರಾಮೂ ಕಣ್ಣು ಕುಣಿಸುತ್ತ ಉತ್ತರವಿತ್ತ.

'ಇದೋ....ಇಲ್ಲೊಂದು ಗುಲಾಬಿ ಹೂ ನಿನ್ನ ಮುಡಿಯಲ್ಲಿ ಶೋಭಿಸುತ್ತಿದೆ. ಅಲ್ಲೊಂದು ಗುಲಾಬಿ ಹೂ ನನ್ನ ತೊಡೆಯ ಮೇಲೊರಗಿಕೊಂಡಿದೆ–ಇನ್ನೊಂದು–ಇದೋ ನಿನ್ನ ತುಟಿಗಳಿಗೆ ಮುತ್ತಿಡುತ್ತಿದೆ........' ಎಂದು ಹೇಳುತ್ತಾ ಆಕೆಯ ರಸದುಂಬಿದ ತುಟಿಗಳನ್ನು ಮತ್ತೆ ಮತ್ತೆ ಚುಂಬಿಸಿದ.

ಹಠಾತ್ತಾಗಿ ಕುಸುಮೆಗೆ ತಾನು ಓದಿದ್ದ ಈ ಕತೆಯು ಸ್ಮರಣೆಯಾಯಿತು. ಆಕೆಯ ಶರೀರಕ್ಕೆಲ್ಲ ಬಿಸಿಯೇರಿ ನರನರಗಳಲ್ಲೆಲ್ಲ ರೋಮಾಂಚವೆದ್ದಿತು.

“ಅಲ್ಲೊಂದು ಗುಲಾಬಿ ಹೂ....ಇಲ್ಲೊಂದು ಗುಲಾಬಿ ಹೂ!” ‘ತನ್ನವರ’ ಆ ಮೋಹಕ ಧ್ವನಿ ಅವಳ ಕಿವಿಗಳಲ್ಲಿ ಮತ್ತೆ ಮತ್ತೆ ಮೊರೆಯತೊಡಗಿತು!

ಗದಗ ಅಕ್ಟೋಬರ್ ೧೯೩೮.

# ರೂಪದ್ವೇಷಿ!

ನಿತ್ಯ ಬೆಳಗ್ಗೆ ಕಚೇರಿಗೆ ಬಂದು ಕುರ್ಚಿಮೇಲೆ ಕೂತುಕೊಳ್ಳುತ್ತಲೂ ಎದುರಿಗಿನ ಕ್ಷೌರದಂಗಡಿಯ ಆ ಪಟ ನನಗೆ ನಮಸ್ಕಾರ ಹೇಳುತ್ತದೆ! ನನ್ನ ತುಟಿಗಳ ಮೇಲೆ ನಾಜೂಕು ನಗೆಯೊಂದು ಮೂಡಿ ಮಾಯ ವಾಗುತ್ತದೆ.

ಅಂಗಡಿಯ ಹೆಸರು ವಿಲಕ್ಷಣ; ಅದರ ಮಾಲೀಕನೂ ಮಹಾ ವಿಲ ಕ್ಷಣ! ಗ್ರಾಮಾಫೋನಿನಹಾಗೆ ಬೊಬ್ಬೆಯಿಡುವ ಎಷ್ಟೋ ಜನ ಕ್ಷೌರಿಕ ರನ್ನು ನಾನು ನೋಡಿದೇನೆ. ಆದರೆ ಇಂಥ ಮೌನಮುದ್ರೆಯವನನ್ನು ಮಾತ್ರ ಎಲ್ಲೂ ಕಾಣಲಿಲ್ಲ. ಬರದ ಸೀಮೆಯಲ್ಲಿ ಮಳೆ ಬರುವಹಾಗೆ ಮಾತು ಬರಬೇಕು ಅವನ ಬಾಯಿಯಿಂದ.

ಗಿರಾಕಿಗಳೊಂದಿಗೆ ಕರವೀರ ಒಂದೆರಡು ಮಾತು ಆಡುವದೆಷ್ಟೊ ಅಷ್ಟೆ. 'ಏನಾಗಬೇಕು ನಿಮಗೆ? ಕ್ರಾಪ್‌ಕಟ್ಟಿ? ಷೇವಿಂಗೇ?' ಇವೆರಡು ಪ್ರಶ್ನೆಗಳನ್ನು ಮಾತ್ರ ಅವನ ನಾಲಗೆ ಉಚ್ಚರಿಸುತ್ತದೆ. ಒಡನೆಯೆ ಕೈ ತನ್ನ ಕಾಯಕಕ್ಕೆ ತೊಡಗುತ್ತದೆ. ನೀಟಾಗಿ ನಿಂತುಕೊಂಡು, ಗಿರಾಕಿಯ ತಲೆಯಮೇಲೆ ಕೊಂಚ ಬಾಗಿ, ಎಡಗೈಲಿ ಅವನ ಜುಟ್ಟು ಹಿಡಿದು ಬಲಗೈ ಯಿಂದ ಕೂದಲು ಕತ್ತರಿಸುವ ಆ ಆಕೃತಿಯೂ ಒಂದು ಯಂತ್ರವೇ ಎಂದು ನನಗೆ ಭಾಸವಾಗುತ್ತದೆ.

ಅಷ್ಟೇನು ಅದ್ಭುತ ಆಕಾರವಲ್ಲ ಅವನದು. ನಿಜ. ಆದರೆ ರೂಪ

ಕೊಂಚ ವಿಲಕ್ಷಣವೇ. ಇದ್ದಿಲುಬಣ್ಣದ ಮುಖಕ್ಕೆ ಸಿಡುಬಿನ ಕಲೆಗಳ ಅಲಂಕಾರ; ದಪ್ಪಗೆ ಜೋಲುಜೋಲಾದ ತುಟಿ; ಬಂಡಿಗಲ್ಲಿನಂತೆ ಮುಂದೆ ಹಾಯ್ದಿರುವ ಮೂಗು; ಅದರ ಕೆಳಗಡೆ ವಿಚಿತ್ರವಾಗಿ ಹುರಿ ಗೂಡಿಸಲ್ಪಟ್ಟ ದಪ್ಪಗಿನ ಮೀಸೆ; ......ಎಲ್ಲಕ್ಕಿಂತ ವಿಲಕ್ಷಣ ಆತನ ಆ ಕಣ್ಣು........!

ಅಬ್ಬ! ಅದೇನು ಕಣ್ಣುಗಳೊ! ಬೆಂಕಿಯ ಕುಲುಮೆಗಳೊ! ದೃಷ್ಟಿ ಯಾದರೊ ಎಷ್ಟು ತೀಕ್ಷ್ಣ:—ಬರ್ಜಿಯ ಮೊನೆಯಂತೆ!

ಆ ಬೆಂಕಿ, ಆ ಬರ್ಜಿ—ಇದುವರೆಗೆ ಯಾರಿಗೂ ಅಪಾಯವುಂಟುಮಾಡಿಲ್ಲ. ಅದೇ ಸೋಜಿಗದ ವಿಷಯ. ಆತನ ಎಲ್ಲ ಕಾರ್ಯಗಳಲ್ಲೂ ಎಷ್ಟು ಸಹನಶೀಲತೆ ಇದೆ-ಎಂಥ ಶಾಂತಿ ಇದೆ!—ಗಿರಾಕಿಗಳ ಗಲಾಟೆ ಹೆಚ್ಚಿ, ಅಂಗಡಿಯಲ್ಲಿ ಗಲಭೆಗಿಟ್ಟುಕೊಂಡಾಗಲೂ ಅವನು ಸುಮ್ಮನೆ ಇರುತ್ತಾನೆ. ಆ ಮುಖದಮೇಲಿನ ಒಂದು ಗೆರೆಯಾದರೂ ಅಲುಗಾಡೀತೇ? ಕೇಳಬೇಡಿ.

ಅವನ ಕೆಲಸದ ರೀತಿಯೂ ವಿಚಿತ್ರವೆ. ಬೆಳಗಿನ ಆರು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ಎಡೆಬಿಡದೆ ನಡೆದಿರುತ್ತದೆ ಅವನ ಕಾಯಕ. ನಿಂತುನಿಂತು ಅವನ ಕಾಲು ಹೇಗೆ ಸೋಲುವುದಿಲ್ಲವೊ, ಕತ್ತರಿ ಒತ್ತಿ ಒತ್ತಿ ಕೈ ಹೇಗೆ ಬಳಲುವುದಿಲ್ಲವೊ!—ಅದೊಂದು ಬಿಡಿಸಲಾಗದ ಸಮಸ್ಯೆ ನನಗೆ.

ಹೌದು. ಎಷ್ಟೋ ಜನ ಹೇಳುತ್ತಾರೆ. ಅವನಿಗೆ ಕುಡಿತದ ಚಟ ವಿಪರೀತವಂತೆ. ಬೆಳಗ್ಗೆ ಕತ್ತಿನವರೆಗೂ ಕುಡಿದು ಬಂದುಬಿಟ್ಟರೆ ಅವನಿಗೆ ಆಯಾಸವಾಗುವುದೇ ಇಲ್ಲವಂತೆ. ಜನರಾಡುವ ಈ ಮಾತು ನಾನು ನಂಬಲಾರೆ. ನಂಬುವುದಾದರೂ ಹೇಗೆ ಸಾಧ್ಯ..?

ಎರಡು ವರ್ಷಗಳಿಂದಲೂ ಆತನನ್ನು ನೋಡುತ್ತಿದೇನೆ ನಾನು. ಆಗ ಹೇಗಿದ್ದನೊ ಹಾಗೆಯೆ ಇದಾನೆ ಮನುಷ್ಯ. ಕೊಂಚವೂ ಬದಲಾವಣೆ ಯಾಗಿಲ್ಲ. ಈ ಮಧ್ಯೆ ನೂರಾರು ಬಾರಿಯಾದರೂ ಅವನ ಅಂಗಡಿಗೆ ಹೋಗಿದೇನೆ. ಒಂದು ಸಲವಾದರೂ ಆತನ ಹೃದಯ ಬಿಚ್ಚಲಿಲ್ಲ

ನನ್ನೆದುರಿಗೆ. ಅವನ ಜೀವನವೊಂದು ಮುಚ್ಚಿದ ಪುಸ್ತಕ. ಅದರ ಹಾಳೆಗಳನ್ನು ಮಗುಚಿ ಅವನ ಬಾಳಿನ ಅಂತರ್ಯವನ್ನೋದುವುದಕ್ಕೆ ನಾ ಕೈಗೊಂಡ ಪ್ರಯತ್ನ ಅಷ್ಟಿಷ್ಟಲ್ಲ. ಆದರೇನು! ಅದೆಲ್ಲ ವ್ಯರ್ಥವೆ ಆಗಿದೆ.

೨

ಅಲ್ಲವೇ ಮತ್ತೆ! ನಿಜಕ್ಕೂ ಒಂದು ಆಶ್ಚರ್ಯದ ಸಂಗತಿಯೆ ಅದು!

ಎರಡು ವರ್ಷಗಳಿಂದ ಒಂದು ದಿನವೂ ರಜೆ ತೆಗೆದುಕೊಳ್ಳದಿದ್ದ ಕರವೀರ ಅಂದು ಮಾಯವಾಗಿಬಿಟ್ಟಿದ್ದ!

ಮುಖದ ಮೇಲಿನ ಬೆಳೆ ತೆಗೆಯಿಸಲು ಅಂಗಡಿಗೆ ಹೋಗಿದ್ದೆ. ಕರವೀರನಿಗೆ ಪ್ರತಿಯಾಗಿ ಇನ್ನೊಬ್ಬ ಆಸಾಮಿ ಕ್ಷೌರಮಾಡುತ್ತಲಿದ್ದ.

'ಏನಯ್ಯಾ?-ಎಲ್ಲಿ ಕರವೀರ? ಊರಿಗೆ ಹೊದನೋ ಏನು?' ಎಂದೆ.

'ಇರಬೇಕು ಸ್ವಾಮಿ. ಅಂತೇ ಇವತ್ತು ನಾ ಬಂದಿರೋದು?'

'ಯಾವ ಊರು ಅವನದು'

'ಏನೋಪ್ಪ. ನನಗೂ ತಿಳೀದು. ಅವನನ್ನು ಕೇಳುವ ಧೈರ್ಯ ಯಾರಿಗೆ ಬಂದೀತು?—ಹಾಗೆಲ್ಲ ಕೇಳಿಬಿಟ್ರೆ ಕಣ್ಣು ಕೆಂಪಗೆ ಮಾಡಿ ಹಿಡಿದುಬಿಡ್ತಾನೆ.'

'ಸರಿ. ಯಾರಿದಾರೆ ಅವನ ಊರಿನಲ್ಲಿ?'

'ದೇವರೇ ಬಲ್ಲ! ಊರಿನ ಹೆಸರೇ ಗೊತ್ತಿಲ್ಲದಿರುವಾಗ ಮನೆಯುವರ ವಿಷಯ ಏನು ಗೊತ್ತಾದೀತು?'

'ಹಾಗಾದರೆ ಈ ಊರಿನಲ್ಲಿ ಅವನ ಮನೆಯವರಾರೂ ಇಲ್ಲವೆ?'

'ಯಾರೂ ಇಲ್ಲ ಅಂದ್ರೇನು? ಬೇಕಾದಷ್ಟು—ಜನ ಇದಾರೆ ಸಾರ್' ಎಂದು ಹೇಳಿ ಆತ ವಿಚಿತ್ರವಾಗಿ ಹಲ್ಲು ಕಿರಿದ.

ಆ ನಗೆಯ ಅರ್ಥವೇನೋ! ನನಗೆ ಹೊಳೆಯಲಿಲ್ಲ.

'ಏನಯ್ಯಾ? ನೀನು ಹೇಳುವುದೇ ಅರ್ಥವಾಗುವುದಿಲ್ಲವಲ್ಲಾ—ಹಾಗೆಂದರೇನು?' ಎಂದೆ.

' ಅದೆಲ್ಲಾ ನಿಮ್ಮಂಥವರಿಗೆ ತಿಳೀದು ಸಾರ್. ಈ ಊರಿನ ' ನತ್ತಿನೋರೆಲ್ಲಾ ' ಅವನ ಮನೆಯವರೇ ' ' ನತ್ತಿನೋರು ! ಅಂದರೆ ? '

' ಅಯ್ಯೋ ಇಷ್ಟು ತಿಳೀದೇ ನಿಮಗೆ? ಸೂಳೇರು ಸಾರ್, ಸೂಳೇರು!' ಎಂದು ಹೇಳಿ ಆತ ಭೀಕರವಾಗಿ ನಗಲು ಮೊದಲುಮಾಡಿದ.

ಆ ನಗೆಯನ್ನು ಕಂಡು ನನಗೂ ನಗು ಬರಲಿಲ್ಲ. ಅದಕ್ಕೆ ಪ್ರತಿಯಾಗಿ ಜಿಗುಪ್ಸೆಯುಂಟಾಯಿತು. ಅಲ್ಲದೆ ಅವನ ಮಾತಿನಲ್ಲಿ ಕೊಂಚವೂ ನಂಬಿಕೆ ಹುಟ್ಟಲಿಲ್ಲ. ಕರವೀರನ ಬಗ್ಗೆ ಇಂಥ ಸಲ್ಲದ ಮಾತು ಆಡಿ ಮನರಂಜನೆಮಾಡಿಕೊಳ್ಳುವ ಎಷ್ಟೋ ಜನರನ್ನು ನೋಡಿರಲಿಲ್ಲವೆ ನಾನು? ಇವನೂ ಅಂಥವರಲ್ಲೊಬ್ಬನಿರಬೇಕು-ಎಂದುಕೊಂಡು ಸುಮ್ಮನಿದ್ದುಬಿಟ್ಟೆ.

ನಾನೇನೊ ಸುಮ್ಮನಾದರೂ ಈ ಖೋಡಿ ಮನಸ್ಸು ಸುಮ್ಮನಾಗಬೇಕಲ್ಲ! ಆ ದಿನವೆಲ್ಲಾ ಅದಕ್ಕೆ ಕರವೀರನದೇ ಧ್ಯಾನ! ಅವನ ' ನತ್ತಿನ ಗೆಳತಿಯರ ' ನೆನಪು-ಹಗಲು ಇಷ್ಟೊಂದು ಶಾಂತವಾಗಿ, ಗಂಭೀರವಾಗಿ ವರ್ತಿಸುವ ಕರವೀರ, ರಾತ್ರಿ ವ್ಯಭಿಚಾರದಂಥ ಹೀನ ಕೆಲಸದಲ್ಲಿ ತೊಡಗುವುದು ಸಾಧ್ಯವೆ—ಎಂಬ ಪ್ರಶ್ನೆ ತಲೆಯಲ್ಲಿ ಸುಳಿಯುತ್ತಿತ್ತು.

೩

ಇದ್ದರೂ ಇದ್ದೀತು! ಇರಬೇಕು!

ಅಸಾಧ್ಯ ಯಾವುದಿದೆ ಈ ಜಗತ್ತಿನಲ್ಲಿ! ಇಲ್ಲವಾದರೆ.......

ಒಂದು ವಾರದಲ್ಲಿಯೆ ಇಂಥ ಸಮಾಚಾರ ಕೇಳುತ್ತಿದ್ದೆನೇ ನಾನು?—ಮನುಷ್ಯನ ಮನಸ್ಸನ್ನು ಸರಿಯಾಗಿ ಗುರ್ತಿಸುವುದು ಯಾರಿಗೂ ಸಾಧ್ಯವಿಲ್ಲ. ಶಾಂತತೆ, ಸಹನಶೀಲತೆಗಳ ಪ್ರತೀಕದಂತಿದ್ದ ಕರವೀರ ಇಂಥ ಕೆಲಸಮಾಡಬಹುದೆಂದು ನಾನು ಊಹಿಸಬಹುದಾಗಿತ್ತೇ ?

ಆ ವಿಲಕ್ಷಣ ಆಸಾಮಿಯ ಕೆಲಸವೂ ಎಷ್ಟೊಂದು ವಿಲಕ್ಷಣ!—ಅಂದು ಬೆಳಗ್ಗೆ ಊರಿನಲ್ಲೆಲ್ಲ ಅದೇ ಚರ್ಚೆ. ದಿನಪತ್ರಿಕೆಗಳಿಗೆ ಅದೊಂದು ' ಸವಿಸುದ್ದಿ 'ಯಾಗಿ ಪರಿಣಮಿಸಿತ್ತು.

" ವಿಚಿತ್ರರೀತಿಯ ಕೊಲೆಯ ಪ್ರಯತ್ನ! ಕ್ಷೌರಕನೊಬ್ಬನ ಬಂಧನ

ನಿನ್ನೆ ರಾತ್ರಿ ಇಲ್ಲಿಯ ವೇಶ್ಯೆಯೊಬ್ಬಳನ್ನು ಕೊಲೆಮಾಡುವ ಪ್ರಯತ್ನ ನಡಸಿದ್ದಕ್ಕಾಗಿ ಕರವೀರ ಎಂಬ ಕ್ಷೌರಕನನ್ನು ಪೋಲೀಸರು ಬಂಧಿಸಿದ್ದಾರೆ. ಆಪಾದಿತನು ರಾತ್ರಿ ಹನ್ನೆರಡು ಗಂಟೆಗೆ ತನ್ನ ಕ್ಷೌರದ ಕತ್ತಿಯಿಂದ ಅವಳ ಕೂದಲು ಕತ್ತರಿಸಿಹಾಕಿ ಇನ್ನು ಕುತ್ತಿಗೆಗೆ ಏಟು ಹಾಕುವುದರಲ್ಲಿದ್ದಾಗ ಅವಳು ಕೂಗಿಕೊಂಡಳೆಂದೂ, ನೆರೆಹೊರೆಯವರು ಧಾವಿಸಿಬಂದು ಕೊಲೆಯನ್ನು ತಪ್ಪಿಸಿದರೆಂದೂ ತಿಳಿದುಬಂದಿದೆ. ಆಪಾದಿತನನ್ನು ಲಾಕಪ್ಪಿನಲ್ಲಿರಿಸಲಾಯಿತು. ಈ ಬಗ್ಗೆ ವಿಚಾರಣೆ ನಡೆಯುತ್ತಿದೆ."

ಆ ವಿಲಕ್ಷಣ ವ್ಯಕ್ತಿ ಕೊಲೆಗೆ ಪ್ರಯತ್ನಿಸಿದುದೂ ವಿಲಕ್ಷಣರೀತಿಯಲ್ಲೇ! ಆಗಲೂ ತನ್ನ ಕ್ಷೌರದ ಕಾಯಕವನ್ನಾತ ಮರೆಯಲಿಲ್ಲವಲ್ಲ! ಬೇರೆ ಯಾರಾದರೂ ಆ ಕೆಲಸ ಮಾಡಿದ್ದಲ್ಲಿ ನನಗೆ ಜಿಗುಪ್ಸೆಯುಂಟಾಗುತ್ತಿತ್ತೊ ಏನೊ! ಆದರೆ ಆ ಕೃಷ್ಣಕೃತ್ಯದ ನಾಯಕ ಕರವೀರನಾದುದರಿಂದ ತಿರಸ್ಕಾರಕ್ಕೆ ಪ್ರತಿಯಾಗಿ ನನ್ನಲ್ಲಿ ವಿಪರೀತ ಕುತೂಹಲವುಕ್ಕೇರಿತು. ಇದೇನೊ ಒಂದು ಪತ್ತೇದಾರಿ ಕಾದಂಬರಿಯಲ್ಲಿನ ಪ್ರಕರಣದಂತೆ ಭಾಸವಾಯಿತು. ಈ ವಿಚಿತ್ರ ಕೃತ್ಯಕ್ಕೆ ಯಾವ ಕಾರಣವೊ - ಏನು ಸಮಾಚಾರವೊ ?

ಹಣದ ಆಸೆಗಾಗಿ ಅವನಿಂದ ಇಂಥ ಕೃತ್ಯ ನಡೆದಿರಬಹುದೆಂಬುದನ್ನು ನನ್ನ ಮನಸ್ಸು ಒಪ್ಪಲಿಲ್ಲ. ದುಡ್ಡಿನ ಕೊರತೆಯೆಲ್ಲಿತ್ತು ಅವನಿಗೆ ?–ಚೆನ್ನಾಗಿಯೆ ನಡೆದಿತ್ತು ಅವನ ವ್ಯವಸಾಯ. ಹಣವೂ ಸಾಕಷ್ಟು ಸಿಕ್ಕುತ್ತಿತ್ತು. ಅದಕ್ಕೆ ಪಾಲುಗಾರರಾಗುವವರೂ ಇರಲಿಲ್ಲವಲ್ಲ! ನಿಜ ಸಂಗತಿ ಹೀಗಿರುವಾಗ ಹಣಕ್ಕಾಗಿ ಆತನು ಕೊಲೆಗೆ ಪ್ರಯತ್ನಿಸಿದನೆಂದು ಹೇಳುವುದು ಮೂರ್ಖತನವೆ ಸರಿ.

ಅದೂ ಅಲ್ಲದೆ ಈ ಕೂದಲು ಕತ್ತರಿಸುವ ಉಪದ್ವ್ಯಾಪ ಬೇರೆ ಇದೆಯಲ್ಲ ? ಅದಕ್ಕೇನುಕಾರಣ ? ಕೈಲಿದ್ದ ಕತ್ತಿಯಿಂದ ಒಂದೇಟು ಹಾಕಿದರೆ ಸಾಕು. ಪ್ರಾಣಹೋಗಿಬಿಡುತ್ತಿತ್ತು. ಅದನ್ನು ಬಿಟ್ಟು ಅವಳ ಕೂದಲಿನ ಸಮಾಚಾರ ತೆಗೆದುಕೊಳ್ಳಲು ಹೋದನೇಕೆ ?—ದುಡ್ಡಿಗಾಗಿ ಕೊಲೆ ಮಾಡು

ವವರಿಗೆ ಇದೆಲ್ಲಾ ಸಡಗರ ಬೇರೆ ಬೇಕೇ ?—ಇರಲಾರದು. ಅವಳನ್ನು ಅತ್ಯಂತ ಅವಮಾನಕಾರಕ ಸ್ಥಿತಿಯ ಲ್ಲಿಸಾಯಿಸುವಲ್ಲಿ ಅವನಿಗೆ ಬೇರೆ ಏನೋ ಉದ್ದೇಶವಿರಬೇಕು........

ಅಂದು ಅಂಗಡಿಯಲ್ಲಿ ಆ ಕ್ಷೌರಕ ವಿಚಿತ್ರವಾಗಿ ನಗುತ್ತ ಹೇಳಿದ ಮಾತು ಹಠಾತ್ತಾಗಿ ನನ್ನ ನೆನಪಿಗೆ ಬಂತು. 'ಊರಿನ ನತ್ತಿನೋರೆಲ್ಲಾ ಅವನ ಗೆಳತಿಯರೇ!'........ಹೋ! ಇದ್ದೀತು! ಇವಳೂ ಒಬ್ಬಳು ಗೆಳತಿಯೇನೊ! ಅವನಿಗೂ ಅವಳಿಗೂ ಬಹು ದಿನಗಳಿಂದ 'ದೋಸ್ತಿ'ಯಿದ್ದಿರಬೇಕು........ಮಧ್ಯೆ ಇನ್ನಾವನೋ ಕಿತಾಪತಿ ಬಂದುಬಿಟ್ಟು ಆ ಸಂಬಂಧ ಮುರಿಯಲು ಪ್ರಯತ್ನಿಸಿರಬೇಕು. ಸರಿ. ಕರವೀರನ ರೊಚ್ಚು ಹುಚ್ಚಿಗೆದ್ದು ಇಂಥ ಕೃತ್ಯ ಮಾಡಿಸಿರಬೇಕು. ಮೋಸ ಮಾಡಿದ ಹೆಣ್ಣಿನ ಕೂದಲು ಕತ್ತರಿಸಿಹಾಕಿದ ಜನರಿಗೇನೂ ಕೊರತೆಯಿಲ್ಲ........ಹೌದು. ಸಂದೇಹವೇ ಇಲ್ಲ........ಇದೇ ಕಾರಣವಿರಬೇಕು ಈ ಭೀಕರ ಕೃತ್ಯಕ್ಕೆ........

ಅತಿ ಮಹತ್ವದ ಶೋಧ ನಡೆಸಿದ ವೈಜ್ಞಾನಿಕನಿಗಾಗುವಷ್ಟು ಸಮಾಧಾನವಾಯಿತು ನನ್ನ ಮನಸ್ಸಿಗೆ. ಕರವೀರನನ್ನು ಮುಖತಃ ಕಂಡು ಅದರ ನಿಜತ್ವವನ್ನರಿಯಬೇಕೆಂಬ ಅಪೇಕ್ಷೆಯೂ ಉಂಟಾಯಿತು. ಜತೆಯಲ್ಲಿ ಆತನನ್ನು ಈ ಆಪಾದನೆಯಿಂದ ಉಳಿಸಿಕೊಳ್ಳಲೂ ಸಾಧ್ಯವಾದೀತು ಎನಿಸಿತು.

ಆದರೆ ನನ್ನ ಆ ಎಣಿಕೆ ಬಹುಕಾಲ ಉಳಿಯಲಿಲ್ಲ. ಪೋಲೀಸ್ ಸ್ಟೇಷನ್ನಿಗೆ ಹೋಗಿ ಅವನನ್ನು ಕಾಣಲು ಬಯಸಿದಾಗ ಅಧಿಕಾರಿ ಹೇಳಿದ ಮಾತುಗಳಿಂದ ನನಗೆ ಕೊಂಚ ನಿರಾಶೆಯೇ ಉಂಟಾಯಿತು.

"ಅವನು ಮಾತನಾಡಿದರೆ ತಾನೆ ನಿಮ್ಮ ಜತೆಯಲ್ಲಿ? ಆ ಅಟ್ಟಿಲ್ ಬದ್ಮಾಷ್ ಮನುಷ್ಯ ಬಾಯಿ ಹೊಲಿದುಕೊಂಡೇಬಿಟ್ಟಹಾಗಿದೆ. ಎಷ್ಟು ಪ್ರಶ್ನೆ ಕೇಳಿದೆವು. ಒಂದಕ್ಕೂ ಸರಿಯಾದ ಉತ್ತರ ಬಂದರೆ ದೇವರಾಣೆ! 'ನಿನ್ನ ಹೆಸರೇನು?' ಎಂದು ಕೇಳಿದರೆ ಏನಂತಾನೆ ಅಂತೀರಿ? 'ಒಬ್ಬ ಮನುಷ್ಯ'. 'ನಿಮ್ಮಪ್ಪನ ಹೆಸರೇನೋ?'; 'ಒಂದು ಕತ್ತಿ!'; 'ಉದ್ಯೋಗ?'; 'ಹಜಾಮತಿ ಮಾಡೋದು'; 'ಊರಾವುದು?';

'ಊರೇ ಇಲ್ಲ ನನಗೆ'—ಎಂಥಾ ವಿಚಿತ್ರ ಉತ್ತರ ಅಂತ ನಗಬೇಡಿ. ಇದೆಲ್ಲ ಅಟ್ಟಲ್ ಬದ್ಮಾಷರಿಗೆ ನೀರು ಕುಡಿದಹಾಗೆ. 'ಮನೆಯೆಲ್ಲಿದೆ?' ಎಂದು ಕೇಳಿದೆವು. 'ಮನೆಯೆಂಬುದೇ ಇಲ್ಲ ನನಗೆ' ಎಂದ. 'ನಿನ್ನ ಸಂಬಂಧಿಕರು ಯಾರಿದಾರೆ?—ಎಲ್ಲಿದಾರೆ?' ಅಂತ ಕೇಳಿದರೆ ಕಣ್ಣು ಕೆಂಪಗೆ ಮಾಡಿ 'ಎಲ್ಲರೂ ಸುಡುಗಾಡಿಗೆ ಹೋಗಿದಾರೆ' ಅಂತ ಉತ್ತರ ವಿತ್ತ" ಎಂದು ಹೇಳಿ ಅವರು ಗಟ್ಟಿಯಾಗಿ ನಕ್ಕುಬಿಟ್ಟರು.

'ಆ ವೇಶ್ಯೆ ಏನಂತಾಳೆ?' ಎಂದು ಕೇಳಿದೆ.

'ಅವಳಿಗೂ ಕಾರಣ ಸರಿಯಾಗಿ ತಿಳಿಯದು.'

'ಅವಳ ಒಡವೆಗಿಡವೆ ಏನಾದರೂ ಕದ್ದಿದ್ದನೇ?'

'ಇಲ್ಲ. ಹಣದ ಪ್ರಶ್ನೆ ಏನೂ ಇಲ್ಲ ಇದರಲ್ಲಿ. ರಾತ್ರಿ ಅಲ್ಲೇ ಮಲಗಿದ್ದನಂತೆ. ತುಂಬ ಕುಡಿದಿರಬೇಕು. ಅದರ ಅಮಲಿನಲ್ಲಿ ಈ ಕೆಲಸ ನಡಸಿರಬೇಕು........'

ಅಧಿಕಾರಿಯ ತರ್ಕಸರಣಿಯ ಬಗ್ಗೆ ಯೋಚನೆಮಾಡುವುದನ್ನು ನಿಲ್ಲಿಸಿ ಕರವೀರನನ್ನಿರಿಸಿದ್ದ ಕೊಠಡಿಗೆ ನಡೆದೆ.

ಬಾಗಿಲು ತೆರೆಯಲ್ಪಡುತ್ತಿದ್ದ ಹಾಗೆ ನಾನು ಆತನ ಕಡೆ ದೃಷ್ಟಿ ತೂರಿದೆ. ಮೂಲೆಯಲ್ಲಿನ ಗೋಡೆಗೊರಗಿಕೊಂಡು ಮೌನವಾಗಿ ಕೂತಿದ್ದನಾತ. ನಾನು ಹೋಗಿ ಒಳಗಡೆ ಕೂತುಕೊಂಡರೂ ಅವನ ದೃಷ್ಟಿ ಹೊರಳಲಿಲ್ಲ.

'ಯಾಕೆ ಕರವೀರ, ನನ್ನ ಗುರುತಿಸಲಿಲ್ಲವೆ?' ಎಂದೆ.

'ಹೂಂ. ಗುರುತಿಸದೇನು ಸ್ವಾಮಿ?—ನೀವ್ಯಾಕೆ ಬಂದಿರಿ ಇಲ್ಲಿಗೆ?'

'ಅಂಥ ಕಾರಣವಿದೆಯೆಂತಲೇ ಬಂದೆ ಕಣಯ್ಯ. ನೀನು ಕೊಂಚವೂ ಬಚ್ಚಿಟ್ಟುಕೊಳ್ಳದೆ ನಡೆದುದೆಲ್ಲವನ್ನೂ ನನಗೆ ತಿಳಿಸಬೇಕು. ಮೊನ್ನೆರಾತ್ರಿಯಾದುದೆಲ್ಲಾ ನಾ ಬಲ್ಲೆ. ಎಲ್ಲೋ ಸಿಟ್ಟಿನ ಭರದಲ್ಲಿ ನೀನು ಆ ರೀತಿ ಮಾಡಿರಬಹುದೇನೊ! ಹೇಳು. ನಿಜಕ್ಕೂ ಆಕೇನ್ನ ಕೊಲೆಮಾಡುವ ಮನಸ್ಸಿತ್ತೇ ನಿನಗೆ?'

'ಮನಸ್ಸೇನು ಬಂತು ರಾಯರೆ! ಅವಳು ಉಳಿದುಕೊಂಡುಬಿಟ್ಟ ಳಲ್ಲ ಅಂತ ನನ್ನೆದೆಯಲ್ಲಿ ಬೆಂಕಿ ಉರಿತಾ ಇದೆ' ಎಂದು ಕರವೀರ ಅವಡು ಗಚ್ಚಿ ನನ್ನ ಕಡೆ ನೋಡಿದ. ಎದೆಯ ಬೆಂಕಿ ಜ್ವಾಲೆ ಜ್ವಾಲೆಯಾಗಿ ಏರಿ ತ್ತೇನೊ ಆ ಎರಡು ಕಣ್ಣುಗಳಿಗೆ!—ಎಂಥ ಉಗ್ರದೃಷ್ಟಿ ಅದು!

'ಯಾಕಪ್ಪಾ ಇಷ್ಟೊಂದು ದ್ವೇಷ?—ಏನು ಕಾರಣ? ಅವಳೇನು ಮಾಡಿದ್ದಳು ನಿನಗೆ?'

ಕರವೀರ ಸುಮ್ಮನೆ ಕುಳಿತಿದ್ದ—ಕಲ್ಲಿನಂತೆ. ಹೌದು—ಕಲ್ಲಿ ನಂತೆ. ಕಲ್ಲು ಮಾತನಾಡುವುದೆಂತು?—ಆ ಪ್ರಶ್ನೆಗೆ ಉತ್ತರ ದೊರೆ ಯಲಿಲ್ಲ.

'ರಾತ್ರಿ ನೀನು ತುಂಬಾ ಕುಡಿದಿದ್ದೆಯಂತೆ. ನಿಜವೆ?' ಎಂದು ಹಿಂದೆಗೆಯುವ ಸ್ವರದಿಂದಲೇ ಕೇಳಿದೆ.

'ಹೌದು. ಕುಡಿದಿದ್ದೆ! ಜಗತ್ತಿನೊಳಗಿರುವ ಎಲ್ಲ ಹೆಂಡವನ್ನೂ ಕುಡಿದು ಬರಿದು ಮಾಡಿದ್ದೆ!' ಎಂದು ಹೇಳಿ ಕರವೀರ ಮುಷ್ಟಿಯನ್ನು ಬಲವಾಗಿ ನೆಲಕ್ಕಪ್ಪಳಿಸಿದ.

'ಈರೀತಿ ಮಾತನಾಡಿ ಪ್ರಯೋಜನವೇನು ಕರವೀರ? ನಿಜ ಏನಿ ದೆಯೋ ಹೇಳಿಬಿಡಬಾರದೆ?—ಪ್ರತ್ಯಕ್ಷ ಕೊಲೆಯಂತೂ ಆಗಲಿಲ್ಲ. ಬರೀ ಪ್ರಯತ್ನ ನಡೆದಿದೆ ಅಷ್ಟೆ. ಕೋರ್ಟಿನಲ್ಲಿ ತಪ್ಪು ಒಪ್ಪಿಕೊಂಡು ಕ್ಷಮೆ ಕೇಳಿ ದರೆ ಕಡಮೆ ಶಿಕ್ಷೆಯಲ್ಲೇ ಉಳಿದುಕೊಳ್ಳುವೆ. ಇಲ್ಲವಾದರೆ ಹತ್ತು ವರ್ಷ ಶಿಕ್ಷೆ ಆದರೂ ಆದೀತು.'

'ಹತ್ತು ವರ್ಷ ಯಾಕೆ? ಹತ್ತು ಸಾವಿರ ವರ್ಷ ಶಿಕ್ಷೆಯಾದರೂ ಸಂತೋಷವೇ ನನಗೆ. ಅವಳು ಸಾಯಬೇಕಿತ್ತು. ಅಂದರೆ ಆನಂದ ದಿಂದ ಫಾಸಿಹೋಗುತ್ತಿದ್ದೆ. ಅದು ತಪ್ಪಿತಲ್ಲಾ ಅಂತ ಕಳವಳ ಅಷ್ಟೆ.......'

ಎಂಥ ವಿಲಕ್ಷಣ ಉದ್ಗಾರ ಅದು! 'ಸಾಯುವುದು ತಪ್ಪಿಹೋಯಿ ತಲ್ಲ' ಎಂದು ಅಳುವವರೂ ಇದಾರೆ ಹಾಗಾದರೆ ಈ ಜಗತ್ತಿನಲ್ಲಿ? ಸತ್ತು ಹೋಗಬೇಕೆಂಬ ಆಕಾಂಕ್ಷೆ ಇವನಲ್ಲಿ ಏಕೆ ಉತ್ಪನ್ನವಾಗಬೇಕು?

'ಸಾವಿನ ಆಸೆ ಏಕಪ್ಪಾ ನಿನಗೆ?' ಎಂದೆ.

'ನಾನು ಜೀವಿಸಿರಬೇಕೆಂದು, ಬಯಸುವವರು ಯಾರಿದ್ದಾರೆ ಎಂದ?'

ಎಷ್ಟು ಕಠೋರ ಸ್ವರ ಅದು!–ಅದರಲ್ಲಿ ಹರಿದುಬಂದ ಕಳವಳವಾದರೂ ಎಂಥದು! ನಾನು ಬೆಚ್ಚಿಬಿದ್ದು ಅವನ ಕಡೆ ನೋಡಿದೆ. ನೀಳವಾದ ಉಸಿರೊಂದು ಅವನ ಮುಖದಿಂದ ಹೊರಡುತ್ತಿತ್ತು. ತಲೆ ತಾನಾಗಿಯೆ ಕೆಳಕ್ಕೆ ಬಾಗಿಕೊಂಡಿತ್ತು.

ಕೆಲಕಾಲ ಗಾಢಮೌನ. ಮತ್ತೆ ಆತನೇ ಮಾತನಾಡಿದ :

'ನೀವು ವ್ಯರ್ಥವಾಗಿ ನನ್ನನ್ನುಳಿಸಿಕೊಳ್ಳುವ ಪ್ರಯತ್ನಕ್ಕೆ ಬೀಳಬೇಡಿ. ಬದುಕಬೇಕೆಂಬ ಇಷ್ಟ ನನಗಿದ್ದರೆತಾನೆ!–ಜಗತ್ತಿನ ಜನರೊಂದಿಗೆ ಬಾಳುವುದಕ್ಕೆ ಸಹ ಹೇಸಿಕೊಂಡಿದೆ ನನ್ನ ಮನಸ್ಸು. ಅದಕ್ಕಾಗಿಯೇ ಆ ಬೇರೆ ಜಗತ್ತಿಗೆ–ಜೈಲಿಗೆ–ಹೋಗಬೇಕೆಂದಿದ್ದೇನೆ. ಆ ಪ್ರಸಂಗ ಇಂದು ತಾನಾಗಿಯೇ ಬಂದಿರುವಾಗ ಅದನ್ನು ಕಳೆದುಕೊಂಡು ಬೆಪ್ಪನಂತಾಗಲಾ ಸ್ವಾಮಿ! ಆಗುವುದೆಲ್ಲಾ ಆಗಲಿ. ಅನುಭವಿಸುವುದಕ್ಕೆ ನಾನು ಸಿದ್ಧನೇ ಇದ್ದೇನೆ. ನಿಮಗೆ ಯಾಕೆ ನನ್ನ ಅರಿಷ್ಟ?–ಇಲ್ಲಿ ಬಂದು ನನ್ನನ್ನು ನೋಡಿದಿರಲ್ಲಾ ಅಷ್ಟೆ ಒಂದು ಉಪಕಾರವಾಯ್ತು. ಇನ್ನು ತೊಂದರೆ ತಗೋಬೇಡಿ. ಹೋಗಿಬಿಡಿ' ಎಂದು ಹೇಳಿದುದಲ್ಲದೆ ನಾನು ಹೊರಡಬೇಕೆಂಬುದಕ್ಕೆ ಸೂಚನೆಯಾಗಿ 'ನಮಸ್ಕಾರ' ಎಂದು ಕೈಜೋಡಿಸಿಬಿಟ್ಟ.

ಇನ್ನೇನುತಾನೆ ಮಾಡಲು ಸಾಧ್ಯ?–ಹೊರಟುಬಂದೆ.

ಕುರ್ಚಿಯಮೇಲೆ ಕುಳಿತೊಡನೆಯೆ ಎದುರಿಗೆ ದೃಷ್ಟಿ ಹೊರಳಿತು.

ಆ ಪಟ–'ಸರಸ್ವತೀ ಹೇರ್ ಕಟಿಂಗ್‌ಸಲೂನ್' ಅಲ್ಲಿಯೇ ನೇತಾಡುತ್ತಿತ್ತು. ಒಳಗಡೆ ಅದರ ಮಾಲೀಕ ಕರವೀರ ಮಾತ್ರ ಇರಲಿಲ್ಲ.

## ೪

"ನಾಲ್ಕು ವರ್ಷ ಕಠಿಣ ಶಿಕ್ಷೆ!'

ನ್ಯಾಯಾಧೀಶರ ತೀರ್ಪು ಕಿವಿಗೆ ಬಿದ್ದಾಗ ಕರವೀರನ ಮುಖ ಆನಂದದಿಂದ ಅರಳಿತು. ಕೈಜೋಡಿಸಿಕೊಂಡು ಹೇಳಿದ :

'ಬಹಳ ಉಪಕಾರ ಮಾಡಿದಿರಿ ದೊರೆ, ಬಡವನ ಮೇಲೆ. ಇನೂ ಹತ್ತು ವರ್ಷ ಕೊಟ್ಟಿದ್ದರೆ ಸಾಯುವವರೆಗೂ ನಿಮ್ಮನ್ನು ನೆನಸುತ್ತಿದ್ದೆ!'

ನ್ಯಾಯಾಧೀಶರು ನಕ್ಕುಬಿಟ್ಟರು. ನ್ಯಾಯಾಸ್ಥಾನದಲ್ಲಿ ನೆರೆದ ಜನ ಜಂಗುಳಿಯ ಹಲ್ಲುಗಳೂ ಹೊರಕ್ಕೆ ಕಾಣಿಸಿದವು. ನಗದೆ ಉಳಿದವರೆಂದರೆ ಇಬ್ಬರೇ. ನಾನೊಬ್ಬ–ಇನೊಬ್ಬ ಕರವೀರ.

ಅದೇದಿನ ಅತನನ್ನು ಸೆರೆಮನೆಗೆ ಸಾಗಿಸಿದರು. ಕೆಲದಿನಗಳ ಕಾಲ ಅವನ ವಿಷಯ ಊರಿನ ನಿರುದ್ಯೋಗಿಗಳಿಗೆ ಹರಟೆಯ ವಸ್ತುವಾಗಿತ್ತು. ಅನಂತರ ಆತನನ್ನು ಮರೆತುಬಿಟ್ಟರು.

ಆದರೆ ನಾನು ಮರತೇನೇ ಕರವೀರನನ್ನು?

ಒಂದು ವರ್ಷವುರುಳಿತು. ಆದರೂ ಅವನ ನೆನಪು ನನ್ನೆದೆಯಿಂದ ಅಳಿಯಲಿಲ್ಲ.

ಈ ಮಧ್ಯೆ ರಾಜಕೀಯ ಬಿರುಗಾಳಿ ಬೀಸಿತು. ಅವದಲ್ಲಿ ಸಿಲುಕಿ ನಾನೂ ಸೆರೆಮನೆ ಕಾಣಬೇಕಾಯಿತು.

ಕಾರಾಗಾರದ ವಿಲಕ್ಷಣ ಬಾಳಿನ ಅನುಭವ ಪಡೆಯುವಲ್ಲಿ ದಿನಗಳು ಒಂದೊಂದಾಗಿ ಉರುಳಿಹೋಗುತ್ತಿದ್ದುವು. ಕರವೀರ ಅದೇ ಸೆರೆಮನೆ ಯಲ್ಲಿರಬಹುದೆಂಬ ಕಲ್ಪನೆ ಕೂಡ ಇರಲಿಲ್ಲ ನನಗೆ. ಆದರೆ ಅದೇನು ಆಶ್ಚರ್ಯ!–ಅವನೂ ಅಲ್ಲಿಯೆ ಇದ್ದ.

ಒಂದುದಿನ ಕಸಬಳಿಯಲು ಆತ ನಮ್ಮ ಬರಾಕಿಗೆ ಬಂದಿದ್ದಾಗ ತಟ್ಟನೆ ಆತನನ್ನು ಗುರುತಿಸಿದೆ. ಅಡ್ಡತಿಡ್ಡ ಗೆರೆಗಳಿಂದೊಡಗೂಡಿದ ದಪ್ಪ ಗಿನ ಬಟ್ಟೆಯ ಕೈದೀಅಂಗಿ–ಅಂಥದೇ ಲಂಡಚಣ್ಣ–ತಲೆಗೆ ಅದೇ ಬಟ್ಟೆಯ ವಿಚಿತ್ರ ಟೋಪಿ, ಎದೆಯ ಮೇಲೆ ಹೆಸರಿನ ಬಿಲ್ಲೆ. ಕೊಳೆಯಿಲ್ಲದೆ–ಕಸರಿ ಲ್ಲದೆ ಬೆಳ್ಳಗಿತ್ತು ಅವನ ಉಡುಗೆ. ಇನ್ನಿತರ 'ಕ್ರಿಮಿನಲ್ ಕೈದಿ'ಗಳ ಹಾಗೆ ಅದಕ್ಕೆ ಧೂಳಿನ ಬಣ್ಣ ಬಂದಿರಲಿಲ್ಲ. ನಿಜಕ್ಕೂ ದಿಗಿಲಾಯಿತು ನನಗೆ–ಸೆರಮನೆಗೆ ಬಂದಂದಿನಿಂದ ಕರವೀರ ಇಷ್ಟು ಉತ್ಸಾಹಿಯಾದನೇ– ಎಂದು.

ಕೆಳಕ್ಕೆ ಬಾಗಿ ಕಸಗುಡಿಸುತ್ತಿದ್ದ ಹಾಗೆ ಆತ ಹಠಾತ್ತಾಗಿ ತಲೆ ಎತ್ತಿ

ನೋಡಿದ. ನಮ್ಮಿಬ್ಬರ ದೃಷ್ಟಿ ಒಂದುಗೂಡಿದುವು. ಒಂದು ಕ್ಷಣ ಆತನ ಮುಖ ಚಲವಿಚಲವಾದಂತೆ ತೋರಿತು. ಕೈದಿಯ ವೇಷದಲ್ಲಿದ್ದ ನನ್ನನ್ನು ಒಮ್ಮೆಲೆ ಗುರುತಿಸಲು ಅವನಿಗೆ ಸಾಧ್ಯವಾಗಲಿಲ್ಲವೇನೊ ತಿಳಿಯದು.

'ಏನು ಕರವೀರ, ಇಷ್ಟರಲ್ಲಿಯೇ ಮರೆತುಬಿಟ್ಟೆಯಾ ನನ್ನ!' ಎಂದೆ.

ನನ್ನ ಧ್ವನಿ ಅವನ ತುಟಿಗಳಲ್ಲಿ ನಗೆಯ ಅಲೆಯೊಂದನ್ನು ಮೂಡಿಸಿತು. ಅವನ ಕೈ ನಮಸ್ಕಾರಕ್ಕಾಗಿ ಒಂದುಗೂಡಿದವು. ಹೇಳಿದ:

'ಆ ಜಗತ್ತಿನ ಜನರನ್ನೆಲ್ಲಾ ನಾನು ಮರೆತುಬಿಟ್ಟಿದೇನೆ ಸ್ವಾಮಿ! ಅದಕ್ಕಾಗಿ ನಿಮ್ಮನ್ನು ಗುರುತಿಸುವುದೂ ಕೊಂಚ ಕಷ್ಟವಾಯಿತು-ಅಷ್ಟೆ. ಬೇರೇನೂ ಭಾವಿಸಿಕೋಬೇಡಿ.'

'ಆ ಜಗತ್ತು ಅಂದರೆ?........'

'ಸತ್ಯಕ್ಕೆ ಸಾವಿಲ್ಲ' ಎಂತ ಎಲ್ಲರೂ ಹೇಳಿದರೂ ಪ್ರತಿನಿಮಿಷವೂ ಸತ್ಯದ ಕೊಲೆಯಾಗುತ್ತಿರುವ; ಸುಖ, ಪ್ರೇಮ, ಶಾಂತಿಗಳಿಗೆ ಪ್ರತಿಯಾಗಿ ಬರೀ ದುಃಖ, ಮೋಸ, ಅಶಾಂತಿ ತುಂಬಿರುವ ಆ ನಾರಕೀಯ ಜಗತ್ತನ್ನು ನಾ ಮರೆತುಬಿಟ್ಟಿದೇನೆ. ನಮ್ಮ **ಈ ಜಗತ್ತನ್ನು** ಕೊಂಚ ನಿಟ್ಟಿಸಿ ನೋಡಿ. ಇದೇಬೇರೆ—ಅದೇ ಬೇರೆ. ಇದು ಸ್ವರ್ಗ. ಅದು ನರಕ. ಇದು ಪುಣ್ಯಧಾಮ. ಅದು ಪಾಪಕೂಪ. ಇಲ್ಲಿನವರೆಲ್ಲ ದೇವತೆಗಳು. ಅಲ್ಲಿನವರೆಲ್ಲ ದಾನವರು........'

ದಿಗಿಲುಗೊಂಡು ಅವನನ್ನು ನೋಡುತ್ತಿದ್ದೆ. ಅಬ್ಬ! ಏನು ಆಶ್ಚರ್ಯ!—ಎಂಥ ಬದಲಾವಣೆಯಾಗಿತ್ತು ಅವನ ಕಣ್ಣುಗಳಲ್ಲಿ—ಆ ಕೆಂಪು ಕಳೆ, ಆ ಉಗ್ರತೆ—ಯಾವುದೂ ಇಲ್ಲ ಈಗ. ಅದಕ್ಕೆ ಪ್ರತಿಯಾಗಿ ಒಂದು ತರದ ಸಾತ್ವಿಕ ತೇಜಸ್ಸು ಬಂದಿದೆ. ಕಂಗಳೆರಡೂ ತಿಳಿಯಾಗಿ ಶುಭ್ರವಾಗಿ ಹೊಳೆಯುತ್ತಿವೆ!

ಬೇರೆ ಕೆಲಸವಿದ್ದುದರಿಂದ ಆತನು ಹೊರಟುಹೋದ. ಆ ದಿನವೆಲ್ಲಾ ಮತ್ತೆ ಮತ್ತೆ ಅವನ ಮಾತು ಕಿವಿಯಲ್ಲಿ ಝೇಂಕರಿಸುತ್ತಿತ್ತು. 'ಆ ಜಗತ್ತು—ಈ ಜಗತ್ತು-ಪಾಪ-ಪುಣ್ಯ-ಸ್ವರ್ಗ-ನರಕ-ದಾನವರು ಹಾಗೂ **ದೇವತೆಗಳು....'**

ಆ ದಿನವೆಲ್ಲಾ ಇದೇ ಯೋಚನೆ. ರಾತ್ರಿ ಸರಿಯಾಗಿ ನಿದ್ರಿಸುವುದೂ ಸಾಧ್ಯವಾಗಲಿಲ್ಲ. ಬೆಳಗಾದರೆ ಭಾನುವಾರ. ಕೈದಿಗಳಿಗೆಲ್ಲಾ ರಜೆ. ಕರವೀರ ನಾಳೆ ಬರುವನೋ ಇಲ್ಲವೋ?–ಮೊದಲೇ ವಿಲಕ್ಷಣ ಮನುಷ್ಯ. ಇಲ್ಲಿಗೆ ಬಂದು ಅದ್ಭುತವಾಗಿ ಬದಲಾಯಿಸಿದ್ದಾನೆಂಬುದೇನೋ ನಿಜ. ಆದರೆ ಯಾರಿಗೆಗೊತ್ತು?–ಇಂಥ ಮನುಷ್ಯರಿಗೆ ಬದಲಾವಣೆಯೆಂಬುದು ತೀರ ಕ್ಷಣಿಕ........ಒಂದು ಗಂಟೆ-ಎರಡು ಗಂಟೆ ಅಷ್ಟೆ–ಎಂದುಕೊಳ್ಳುತ್ತಿದ್ದೆ.

ಆದರೆ ನನ್ನ ಆ ಸಂಶಯ ಹಾರಿಹೋಯಿತು. ಕರವೀರ ಮಾರನೆ ದಿನ ಬಂದಾಗ ಕೊಂಚವೂ ಬದಲಾವಣೆಯಾಗಿರಲಿಲ್ಲ ಅವನಲ್ಲಿ. ಮುನ್ನಾದಿನ ಇದ್ದ ಹಾಗೆಯೆ.

'ಜೈಲಿನಲ್ಲಿ ಒಂದು ದಿನವಾದರೂ ಬಿಡುವು ಸಿಕ್ಕುತ್ತಿಲ್ಲವೆ ಕರವೀರ? ಹೊರಗಿದ್ದಾಗ, ಒಂದು ಗಳಿಗೆಯೂ ಬಿಡುವಿರುವುದಿಲ್ಲ-ಬರೀ ಹೊಟ್ಟೆಗಾಗಿ ದುಡಿಯಬೇಕಾಗುತ್ತೆ. ಅಲ್ಲವೆ?'

'ಅದೇನೊ ಸರಿಯೆ. ಆದರೆ ನನ್ನ ಮಟ್ಟಿಗೆ ಹೇಳಬೇಕಾದರೆ ಹೊಟ್ಟೆಗಾಗಿ ನಾನು ದುಡೀತಿರಲಿಲ್ಲ. ಆ ಕೆಟ್ಟ ಜಗತ್ತಿನ ಎಲ್ಲ ದುಷ್ಟ ವಿಚಾರಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಹಗಲೆಲ್ಲ ಕೆಲಸದಲ್ಲೇ ತೊಡಗಿಕೊಂಡಿರುತ್ತಿದ್ದೆ. ಮಧ್ಯೆ ಒಂದು ನಿಮಿಷ ಬಿಡುವು ಸಿಕ್ಕಿದರೂ ನೂರಾರು ವಿಚಾರ ತಲೆ ತಿಂದು ನನ್ನನ್ನು ಹಿಂಡಿಹಾಕುತ್ತಿದ್ದವು. ಅಂತೇ ಬಿಡುವಿನ ಅಗತ್ಯವೇ ಇರಲಿಲ್ಲ ನನಗೆ. ಇಲ್ಲಿನ ಮಾತೇ ಬೇರೆ. ಯಾವಾಗಲೂ ಬಿಡುವೇ ಇದ್ದ ಹಾಗಿದೆ ಇಲ್ಲಿ–ಕೆಲಸ ಎಷ್ಟೋ ಇದ್ದರೂ. ಏಕೆ ಅಂತೀರಾ? ಇಲ್ಲಿ ಆ ಮಾನಸಿಕ ವ್ಯಥೆಯೇ ನನಗಿಲ್ಲ'–ಅದನ್ನೆಲ್ಲಾ ನಾನು ಮರೆತು ಬಿಟ್ಟಿದೇನೆ.......'

'ಹೊರಗಿದ್ದಾಗ ಹಾಗೇಕಿದ್ದೆ ನೀನು?'

'ಏಕೆ?–ಏನು ಹೇಳಲಿ ನಿಮಗೆ? ಆಗ ನಾನು ಮನುಷ್ಯನಾಗಿರಲೇ ಇಲ್ಲ....'

'ಮತ್ತೆ?'

'ಭೂತವಾಗಿದ್ದೆ! - ಭೂತ! ಇಲ್ಲಿಗೆ ಬಂದು ನನ್ನ ಮನುಷ್ಯತ್ವವನ್ನು ಮತ್ತೆ ಸಂಪಾದಿಸಿಕೊಂಡಿದೇನೆ!',

'ನಿಜ ಹೇಳು ಕರವೀರ! ನೀನೇನೋ ಸಾಮಾನ್ಯ ಕ್ಷೌರಕನಲ್ಲವೆಂದೇ ನನ್ನ ಭಾವನೆ. ಚೆನ್ನಾಗಿ ಶಿಕ್ಷಣಪಡೆದವನೆಂದೂ ತೋರುತ್ತೆ. ಯಃಕಶ್ಚಿತ್ ಕ್ಷೌರಕರು ನಿನ್ನಂತೆ ಮಾತಾಡಲು ಸಹ ಸಾಧ್ಯವಿಲ್ಲ.'

'ಮ್ಯಾಟ್ರಿಕ್ ಆದವರು ಸುಶಿಕ್ಷಿತರೆಂದಾದರೆ ನಾನೂ ಸುಶಿಕ್ಷಿತನೇ ಸರಿ'ಎಂದು ಆತ ನಗಲಾರಂಭಿಸಿದ.

ನನ್ನ ಊಹೆ ನಿಜವಾಯಿತು ಹಾಗಾದರೆ! - ಮ್ಯಾಟ್ರಿಕ್ ಆಗಿ ಈ ಮನುಷ್ಯ ಕ್ಷೌರವೃತ್ತಿ ಕೈಕೊಂಡುದೇಕೋ?

'ನನ್ನದು ಕ್ಷೌರವೃತ್ತಿಯೇನೂ ಅಲ್ಲ. ಕೇವಲ ತಲೆಕೆಟ್ಟು ಕತ್ತಿ ಕೈಗೆತ್ತಿಕೊಂಡೆ ಅಷ್ಟೆ. ನನ್ನ ಸುತ್ತಮುತ್ತಿ ನನ್ನನ್ನು ಸಾಯುಹೊಡೆಯುತ್ತಿದ್ದ ದ್ವೇಷ, ಮೋಸಗಳ ವಿಚಾರಗಳಿಂದ ಪಾರಾಗುವುದಕ್ಕಾಗಿ ಕೆಲಸ ಮಾಡಬೇಕಿತ್ತು, ನಾನು ...'

'ದ್ವೇಷ ಏನು? - ಮೋಸ ಏನು? - ನಾನೂ ಕೇಳಬಹುದೇ?

ಮಗುವಿನಂತೆ ಆತ ನಕ್ಕುಬಿಟ್ಟ. 'ಓ! ಅದರಲ್ಲೇನು ರಾಯರೆ! ಅವಶ್ಯ ಕೇಳಿಕೊಳ್ಳಿ. ಅಲ್ಲದೆ ಅದರೊಂದಿಗೆ ನನಗಿದ್ದ ಸಂಬಂಧವೂ ಈಗ ಮುಗಿದುಹೋಗಿದೆ. ಅದೆಲ್ಲಾ ಒಂದು ಕೆಟ್ಟ ಕನಸು—ಬೇರೇನೂ ಇಲ್ಲ ಎನಿಸುತ್ತದೆ....'

ಕೊಂಚ ತಡೆದು ಹೇಳಲಾರಂಭಿಸಿದ ಕರವೀರ.

'ನನ್ನದು ಮೊದಲಿನಿಂದಲೂ ಭಾವನಾವಶಸ್ವಭಾವ. ಮ್ಯಾಟ್ರಿಕ್ ಆದಾಗಲೂ ಅಷ್ಟೆ. ಭಾವನಾಜಗತ್ತನ್ನು ಬಿಟ್ಟು ವ್ಯವಹಾರೀ ಜಗತ್ತಿಗೆ ದೃಷ್ಟಿಹಾಕಿಯೆ ಇರಲಿಲ್ಲ ನಾನು. ಬಾಲ್ಯದಿಂದಲೂ ನನ್ನಲ್ಲಿ ವಾಚನಾಭಿರುಚಿ ವಿಪರೀತ. ತಾರುಣ್ಯದಲ್ಲಿ ಅದು ಅನ್ನೂ ಉಕ್ಕೇರಿತು. ಕತೆ, ಕಾದಂಬರಿ, ನಾಟಕ, ಕವನ—ಕೈಗೆ ಸಿಕ್ಕಿದ್ದನ್ನೆಲ್ಲ ಓದಿಬಿಡುತ್ತಿದ್ದೆ. ಅದರಲ್ಲೂ ಪ್ರಣಯಕತೆ, ಕಾದಂಬರಿ ಎಂದರೆ ಹುಚ್ಚೇ ಹಿಡಿಯುತ್ತಿತ್ತು ನನಗೆ. ಬಾಣಭಟ್ಟನ 'ಕಾದಂಬರಿ' ಓದುತ್ತ ಓದುತ್ತ—ಚಂದ್ರಾಪೀಡ—ಕಾದಂಬರಿಯರ,

ಪುಂಡರೀಕ-ಮಹಾಶ್ವೇತೆಯರ ಉನ್ನತ ಪ್ರಣಯದ—ಉನ್ಮಾದಕ ಶೃಂಗಾರದ ಹೊಳೆಯಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದೆ. ಟಾಗೋರರ ‘ಗಾರ್ಡನರ್’, ಶರಚ್ಚಂದ್ರರ ‘ದೇವದಾಸ್’ ನನ್ನನ್ನು ಇನ್ನೂ ಹುಚ್ಚನನ್ನಾಗಿ ಮಾಡಿದ್ದುವು. ದೇವದಾಸ – ಪಾರ್ವತಿಯರ ಅನುಪಮ – ಅಕೃತ್ರಿಮ ಪ್ರೇಮ ನನ್ನ ಹೃದಯವನ್ನೇ ಸೂರೆಗೊಂಡಿತ್ತು. ಜತೆಗೆ ಹಾರ್ಡಿಯ ‘ಟೆಸ್’ ನಿಂದಲೂ ಮನಸ್ಸಿನಮೇಲೆ ತುಂಬಾ ಪರಿಣಾಮವಾಗಿತ್ತು. ರೋಮಿಯೊ – ಜೂಲಿಯಟ್ ದುರಂತ ಪ್ರಣಯವೂ ಎದೆಯಲ್ಲಿ ಬಿಂಬಿಸಿತ್ತು.

‘ಈ ಎಲ್ಲವರ ಪರಿಣಾಮ ಮನಸ್ಸಿನಮೇಲೆ ಅಚ್ಚೊತ್ತಿದಂತೆ ಮೂಡಿತ್ತು. ಈ ಕಾವ್ಯನಾಯಕರ ಹಾಗೆ ನಾನೂ ಸಹ ಅನುಪಮ, ಅಕೃತಿಮ, ವಿಶುದ್ಧ ಪ್ರೇಮ ಮಾಡಬೇಕು ಎನ್ನಿಸುತಿತ್ತು. ನನಗೂ ಒಬ್ಬಳು ಮಹಾಶ್ವೇತೆಯೋ, ಕಾದಂಬರಿಯೋ, ಪಾರ್ವತಿಯೋ, ಟೆಸ್ಸೋ, ಜೂಲಿಯಟ್ಟೋ ದೊರೆತಲ್ಲಿ—ಎಂದೂ ಬತ್ತಲಾರದ ನನ್ನ ಪ್ರಣಯ ನದಿಯನ್ನು ಅವಳ ಅಡಿಗೆ ಸುರಿಯುವೆನೆಂದು ಹಾರೈಸುತ್ತಿದ್ದೆ. ನನ್ನ ಮಾತು ಕೇಳಿ ನಗು ಬರಬಹುದು ನಿಮಗೆ. ಆದರೆ ನನ್ನ ಎದೆಯನ್ನು ಬಿಚ್ಚಿ ಇದುವರೆಗೆ ಅಲ್ಲಿ ಸುಪ್ತವಾಗಿದ್ದ ಭಾವಗಳನ್ನೆಲ್ಲ ಈಗ ನಿಮ್ಮೆದುರು ಇಡುತ್ತಿದೇನೆ. ನಾನು ಮದುವೆಯಾಗುವುದಕ್ಕೆ ಮೊದಲು ಹೀಗಿತ್ತು ನನ್ನ ಭಾವನಾ ಜಗತ್ತು !.......’

ಇಷ್ಟು ಹೇಳಿ ಕರವೀರ ಕೊಂಚ ತಡೆದುನಿಂತ. ಬೆವರು ಬಂದಿರದಿದ್ದರೂ ಮುಖವನ್ನೊರಸಿಕೊಂಡು ಮತ್ತೆ ಪ್ರಾರಂಭಿಸಿದ :

‘ಮನಸ್ಸಿಗೆ ಇಂಥ ಹಿನ್ನೆಲೆಯಿದ್ದಾಗ ಮದುವೆ ಆಯಿತು ನನಗೆ. ನನ್ನ ಪತ್ನಿ !—ನನ್ನೆಲ್ಲ ಕನಸುಗಳನ್ನು ನನಸಾಗಿಸುವುದಕ್ಕಾಗಿಯೆ ಅವಳು ಮೂರ್ತಿವೆತ್ತು ಬಂದಂತೆ ತೋರಿತು ನನಗೆ. ನಿಜಕ್ಕೂ ತುಂಬಾ ಚಲುವೆಯಾಗಿದ್ದಳಾಕೆ—ಕುರೂಪಿಯಾಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಈಗ ಅನ್ನಿಸುತ್ತೆ !—ಅಯ್ಯೋ ! ಅವಳೆಷ್ಟು ಸುಂದರಿಯಾಗಿದ್ದಳು ಅಂತೀರಿ ! ಮಹಾಶ್ವೇತೆ, ಕಾದಂಬರಿ—ಅಷ್ಟೇ ಏಕೆ—ಕ್ಲಿಯೋಪಾತ್ರಾ ಸಹ ಅಷ್ಟು

ಚೆಲುವೆಯಾಗಿದ್ದಿರಲಿಕ್ಕಿಲ್ಲ—ಎಂದು ನನಗಾಗ ಎನಿಸುತಿತ್ತು. ಅವಳು ನನ್ನ ಮನೆಯಲ್ಲಿ ಅಡಿಯಿರಿಸುತ್ತಲೂ ನಾನವಳ ಅಡಿಯಾಳಾಗಿಬಿಟ್ಟೆ. ಇದು ವರೆಗೆ ಬಂಧಿಸಲ್ಪಟ್ಟಿದ್ದ ನನ್ನ ಪ್ರಣಯದ ಹೊಳೆ ಉನ್ಮಾದದಿಂದ—ರಭಸ ದಿಂದ ಹರಿಯತೊಡಗಿತು.

'ಮದುವೆಯಾದ ಹೊಸದರಲ್ಲಿ ಅವಳೂ ನನ್ನನ್ನು ತುಂಬಾ ಪ್ರೀತಿಸು ವಂತೆ ತೋರುತ್ತಿತ್ತು ನನಗೆ. ನಾನೋದಿದ ಪ್ರಸಿದ್ಧ ಕಾದಂಬರಿಗಳಲ್ಲಿನ ಯಾವ ನಾಯಕರಿಗೂ ನಾನು ಕಡಮೆಯವನಲ್ಲ—ಎಂದುಕೊಳ್ಳುತ್ತಿದ್ದೆ. ಎಂಥ ಹುಚ್ಚು ಅಂತೀರಿ ಅದು! ನನ್ನ ಮನಸ್ಸನಮೇಲೆಲ್ಲ ಅವಳ ಮೋಹದ ಪರದೆ ಆಸರಿಸಿಕೊಂಡಿತ್ತು. ಅವಳ ಬೆಳ್ಳಗಿನ ತೋಳಸೆರೆಗೆ ಸಿಕ್ಕಿ ಬಿದ್ದು ನನ್ನ ವ್ಯಕ್ತಿತ್ವವನ್ನೇ ಮರೆತುಬಿಡುತ್ತಿದ್ದೆ. ನನ್ನ ಸರ್ವಸ್ವವನ್ನೂ ಅವಳಿಗರ್ಪಿಸಿ ನಾನವಳ ದಾಸಾನುದಾಸನಾಗಿದ್ದೆ—ಗುಲಾಮನಾಗಿದ್ದೆ. ಆದರಲ್ಲೂ ಎಷ್ಟು ಸುಖವೆನಿಸಿಸುತಿತ್ತು ನನಗೆ!....

'ಆದರೆ ಈ ಸುಖ ಬಹುಕಾಲ ಉಳಿಯಲು ಬೇಡಿ ಬಂದಿರಲಿಲ್ಲ. ಅವಳು-ನಾ ತಿಳಿದಂತೆ ಮಹಾಶ್ವೇತೆಯೂ ಆಗಿರಲಿಲ್ಲ. ಜೂಲಿಯಟ್ಟೂ ಆಗಿರಲಿಲ್ಲ. ಅವಳು-ಅವಳೊಬ್ಬ ಮಹಾದ್ರೋಹಿಯಾಗಿದ್ದಳು. ಹ್ಯಾಮ್ಲೆಟ್‌ನ ತಾಯಿಗಿಂತಲೂ ಭೀಕರ ದ್ರೋಹಿಯಾಗಿದ್ದಳು—ಅಂಥ ನೀಚ ಸ್ತ್ರೀ ಯಾವ ಕಾವ್ಯದಲ್ಲೂ—ಯಾವ ಕಾದಂಬರಿಯಲ್ಲೂ ಚಿತ್ರಿಸಲ್ಪಟ್ಟಿ ರಲಿಕ್ಕಿಲ್ಲವೆನ್ನಿಸಿತು ನನಗೆ........

'ನನ್ನನ್ನು ಸುಳ್ಳುಪ್ರೇಮದ ಮಾಟದಿಂದ ವಂಚಿಸಿ ಆ ಕುಟಿಲೆ ತನ್ನ ಹಳೆಯ ಗೆಳೆಯನೊಬ್ಬನೊಂದಿಗೆ ಪ್ರಣಯಕೇಳಿ ನಡಸುತ್ತಿದ್ದಳು. ಎಷ್ಟು ದಿನ ನಡೆದೀತು ಈ ಮೋಸಗಾರಿಕೆ! ಒಂದು ದಿನ ಎಲ್ಲಾ ಗೊತ್ತಾಯಿತು. ಆಗ ನನ್ನ ಮನಃಸ್ಥಿತಿ ಹೇಗಾಗಿದ್ದೀತು ನೀವೇ ಯೋಚಿಸಿನೋಡಿ. ನನ್ನ ಕಲ್ಪನೆಯ ಕಿನ್ನರರಾಜ್ಯವೆಲ್ಲಾ ಉರುಳಿಹೋಯಿತು. ನನ್ನ Platonic Love'ನ ಸುಗಂಧದಲ್ಲಿ ದುರ್ವಾಸನೆ ಬೆರೆತುಕೊಂಡಿತು. ಆ ದುರ್ಗಂಧ ನನ್ನ ಮನುಷ್ಯತ್ವವನ್ನೇ ಕೊಲೆಮಾಡಿತು. ಹುಚ್ಚು ಹೇಗೆ ಹಿಡಿಯ ಲಿಲ್ಲವೊ ನನಗೆ—ಅದೇ ಆಶ್ಚರ್ಯ.'

'ಆಗಲೇ ನೀನು ಊರುಬಿಟ್ಟು ಪಟ್ಟಣಕ್ಕೆ ಬಂದೆ ಅಂತ ತೋರುತ್ತೆ?' ಎಂದು ಕೇಳಿದೆ.

'ಹೌದು. ಆ ಕೊಳಚೆಯಲ್ಲಿ ಜೀವ ಹಿಡಿದುಕೊಂಡಿರಲು ಸಾಧ್ಯವಾಗಲಿಲ್ಲ. ಹೊರಟುಬಿಟ್ಟೆ. ನಿರಾಶೆ, ಸಂತಾಪ–ದ್ವೇಷ ಥಕಥೈ ಎನ್ನುತ್ತಿತ್ತು ನನ್ನ ಎದೆಯಲ್ಲಿ. ಚಲುವಿಕೆಯ ಮರೆಯಲ್ಲಿ ಇಂಥ ಮೋಸಗಾರಿಕೆ! ನನ್ನ ಮೈಯೆಲ್ಲಾ ಉರಿಯುತ್ತಿತ್ತು. ನಾಗಿಣಿ ನೋಡಲು ಎಷ್ಟು ಚೆಂದ! ಆದರದರ ವಿಷ? ಸುಂದರಿಯಾದ ಹೆಣ್ಣು ಅಂದರೆ ಮಹಾಭಯಂಕರ ನಾಗಿಣಿಯಂತೆಯೆ ಸರಿ. ಹಾವನ್ನು ಸಿಕ್ಕಿದಲ್ಲಿ ಕೊಂದುಹಾಕುವಂತೆ ಜಗತ್ತಿನಲ್ಲಿನ ಎಲ್ಲ ಹೆಣ್ಣುಗಳನ್ನೂ ಅದರಲ್ಲು ಸುಂದರಿಯರಾದವರನ್ನು ಕಡಿದು ತುಂಡುತುಂಡುಮಾಡಿ ಹಾಕಬೇಕೆಂದು ನನಗೆನಿಸುತಿತ್ತು. ಆ ಸೇಡಿನ ಭಾವನೆ–ದ್ವೇಷದ ಉರಿ! ದೊಡ್ಡದೊಂದು ಜ್ವಾಲಾಮುಖಿ ಯಾವಾಗಲೂ ನನ್ನೆದೆಯಲ್ಲಿ ಉರಿಯುವಂತಿತ್ತು. ಯಾವ ಸಾಗರವೂ ಅದನ್ನು ಆರಿಸಲು ವಂತಿರಲಿಲ್ಲ. ಅದಕ್ಕಾಗಿ...............'

ಅವನನ್ನು ಮಧ್ಯದಲ್ಲಿಯೆ ತಡೆದು ಹೇಳಿದೆ:

'ಅದನ್ನೇನೂ ಹೇಳಬೇಕಾಗಿಲ್ಲ ಕರವೀರ! ನಿರಾಶೆಯನ್ನು ಮರೆಸುವುದಕ್ಕಾಗಿ ದೇವದಾಸನೂ ಕುಡಿಯಲಿಲ್ಲವೆ?– ಹಾಗೆಯೇ ನೀನೂ........'

'ಛೆ! ಛೆ! ಕುಡಿತದ ಮಾತೆತ್ತಬೇಡಿ ಸ್ವಾಮಿ! ದೇವದಾಸನ ಮಾತು ಬೇರೆ – ಪಾರ್ವತಿಯ ಶರೀರವೇನೊ ಸಿಕ್ಕಲಿಲ್ಲ ಅವನಿಗೆ. ಹೃದಯ ಮಾತ್ರ ಪೂರ್ತಿಯಾಗಿ ಅವನದಾಗಿತ್ತು. ಆದರೆ ನನಗೋ – ನನ್ನವಳ ಶರೀರವೇನೋ ಸಿಕ್ಕಿತ್ತು. ಹೃದಯ ಮಾತ್ರ ಪೂರ್ತಿಯಾಗಿ ಬೇರೆಯವರದಾಗಿತ್ತು. ಬಾಳಿನಲ್ಲಿ ಅವನು ನಿರಾಶೆಹೊಂದಿನರೂ ಅವನ ಪ್ರೇಯಸಿ ಅವನಿಗೆ ಮೋಸವನ್ನೇನೂ ಮಾಡಲಿಲ್ಲ. ಆದರೆ ನನ್ನವಳು.......ಕುಡಿತದಿಂದ ಮರೆಯಲು ಸಾಧ್ಯವಿತ್ತೇ ಅವಳ ನೀಚ ಕಪಟವನ್ನು?–'

'ಜನರೆಲ್ಲ ಆಡಿಕೊಳ್ಳುತ್ತಿದ್ದರು. ನೀನು ತುಂಬ ಕುಡಿಯುತ್ತೀಯೆ ಎಂದು. ಅಲ್ಲದೆ ಆ ದಿನ ನಡೆದ ಕೊಲೆಯ ಪ್ರಯತ್ನ.......ಆಗ ನೀನು ತುಂಬ ಕುಡಿದುದರಿಂದಲೇ ಹಾಗಾಯಿತೆಂದು ನಾನೂ ಭಾವಿಸಿದ್ದೆ.'

'ಇಲ್ಲ ಸ್ವಾಮಿ. ನಂಬಿದರೆ ನಂಬಿ. ಬಿಟ್ಟರೆಬಿಡಿ. ಇದುವರೆಗೂ ಮದ್ಯದ ಒಂದು ಹನಿಯನ್ನೂ ಮುಟ್ಟಿಲ್ಲ ನಾನು. ಅಂದು ನಡೆದ ಘಟನೆಗೆ ಮದ್ಯದ ಅಮಲು ಕಾರಣವೆಂಬುದೇನೋ ನಿಜ. ಆದರೆ ಅದು ನೀವು ತಿಳಿದಿರುವಂಥ ಮದ್ಯವಲ್ಲ—ಅದು ಸೇಡಿನ ಮದ್ಯ-ದ್ವೇಷದ ಮದ್ಯ........

'ಅಂದು ನಡೆದ ಘಟನೆಯ ಬಗ್ಗೆ ನೀವು ಈಗಲೂ ಆಶ್ಚರ್ಯಪಟ್ಟು ಕೊಳ್ಳುತ್ತಿರಬಹುದಲ್ಲವೆ ?—ಅದು ನಡೆಯುವುದಕ್ಕೆ ಕೆಲದಿನಗಳಿಗೆ ಮೊದಲು ನಾನು ಊರಿಗೆ ಹೋಗದಿದ್ದರೆ ಆ ಪ್ರಸಂಗ ಬರುತ್ತಿರಲೇ ಇಲ್ಲ.'

'ಮತ್ತೆ ಯಾಕಪ್ಪಾ ಊರಿಗೆ ಹೋದೆ ?'

'ಅದೇ ವಿಚಿತ್ರ ರಾಯರೆ! ನನ್ನ ಮನಸ್ಸೆ ಅದಕ್ಕೆ ಕಾರಣ. ಮನುಷ್ಯನ ಮನಸ್ಸಿನಷ್ಟು ಆಶೆಬುರುಕ ವಸ್ತು ಇನ್ನಾವದೂ ಇರಲಾರದು ಈ ಜಗತ್ತಿನಲ್ಲಿ. ನನ್ನ ಕಣ್ಣೆದುರಲ್ಲೇ ಘೋರ ನಿರಾಶೆಯಾಗಿದ್ದರೂ, ನನ್ನ ಪತ್ನಿಯ ಬಗ್ಗೆ ಇನ್ನೂ ಕೊಂಚ ವಿಶ್ವಾಸವುಳಿದಿತ್ತು ನನ್ನಲ್ಲಿ. ಅವಳು ಅಡ್ಡದಾರಿ ಹಿಡಿಯುವಲ್ಲಿ ಅವಳ ತಪ್ಪೇನೂ ಇರಲಾರದೆಂದೂ ಅವಳ ಆ ಗೆಳೆಯನೇ ಅದಕ್ಕೆ ಕಾರಣವಾಗಿರಬೇಕೆಂದೂ ಭಾವಿಸಿದ್ದೆ. ಅವಳ ತಪ್ಪನ್ನವಳಿಗೆ ತಿಳಿಸಿ ಕೊಟ್ಟು ಬುದ್ಧಿ ಹೇಳಿದರೆ ಮತ್ತೆ ನನಗಾಕೆ ಸಿಕ್ಕಿದರೂ ಸಿಕ್ಕಬಹುದೇನೊ ?—ಎಂದುಕೊಂಡೆ. ಸರಿ—ಅದಕ್ಕಾಗಿ ಊರಿಗೆಹೋದೆ........'

'ಏನಾಯಿತು ಊರಿನಲ್ಲಿ ?'

'ಅವಳಿಗೂ ನನಗೂ ಸಾಕಷ್ಟು ವಾಗ್ವಾದವಾಯಿತು. ಇದುವರೆಗೆ ಮುಚ್ಚು ಮರೆಯಿಂದ ನಡೆದಿದ್ದ ಅವಳ ಕಾರ್ಯ ಈಗ ಪ್ರತ್ಯಕ್ಷವಾಗಿಯೆ ನಡೆಯುತ್ತಿತ್ತು. ತಾನು ಮಾಡಿದುದರಲ್ಲಿ ತಪ್ಪೇನೂ ಇಲ್ಲವೆಂದೇ ಅವಳು ಸಾಧಿಸಿದಳು. 'ನಿನ್ನ ರೂಪಲಾವಣ್ಯಗಳ ಮರೆಯಲ್ಲಿ ಇಂಥ ಹೊಲಸು ಹೃದಯವಿರಬಹುದೆಂದು ನಾ ಭಾವಿಸಿರಲಿಲ್ಲ. ನಿನ್ನ ಮುಖಕ್ಕೆ ಬೆಂಕಿ ಹಾಕಲಿ!' ಎಂದು ನಾನು ಕೋಪದಿಂದ ಕಿರುಚಿಕೊಂಡೆ. ಅವಳು ಕನ್ನಡಿಯೊಂದನ್ನು ನನ್ನ ಮುಖಕ್ಕೆ ಹಿಡಿದು ಹೇಳಿದಳು; 'ನಿನ್ನ ಮುಖಕ್ಕೆ ಆಗಲೆ ಬೆಂಕಿ ಬಿದ್ದಿದೆ. ಅದರಿಂದಲೇ ಅದು ಹೀಗಾಗಿದೆ—ಕರೀ ಇದ್ದಲಿನ ಹಾಗೆ!—ಏನು ಬಣ್ಣ, ಏನು ಕಣ್ಣು, ಏನು ಮೂಗು!—ನಿನ್ನಂಥ ಕಾಮಣ್ಣ

ನಿಗೆ ನನ್ನಂಥ ರತಿಯೆ?–ನಿನ್ನಿಂದ ನಾನೇನು ಸುಖಪಡಲಿ?–ಹೋಗು. ಸುಮ್ಮನೆ ನನ್ನನ್ನು ಪೀಡಿಸಬೇಡ!' ಅಬ್ಬ! ಏನು ಮಾತು ಅವು!

'ಇದುವರೆಗೆ ಎಂದೂ ಉಂಟಾಗದಷ್ಟು ಕೋಪ, ಅಸಹನೆ ಆ ಮಾತಿನಿಂದ ಉಕ್ಕೇರಿತು ನನಗೆ. ನಾನು ಕುರೂಪಿ–ಎಂಬುದರ ಅರಿವೇ ಇರಲಿಲ್ಲ ಇದುವರೆಗೆ. ಅವಳ ಮಾತುಗಳಿಂದಲೇ ಮೊದಲಬಾರಿ ಗೊತ್ತಾದ್ದು ನನಗೆ. ನನ್ನಲ್ಲಿ ಅತೀವ ದ್ವೇಷ, ಅತ್ಯಂತ ಭೀಕರ ಸೇಡಿನಭಾವನೆ ಉಕ್ಕಿತು. ನನ್ನ ಕನಸನ್ನೆಲ್ಲಾ ಹುಡಿಗೂಡಿಸಿದ, ನನ್ನ ಚಿನ್ನದ ಸಂಸಾರವನ್ನೆಲ್ಲಾ ಹಾಳುಮಾಡಿದ ಆ ರೂಪದ ಮೇಲೆಯೆ ಸಿಟ್ಟು ಹೊರಳಿತು. 'ನಿನ್ನ ಚೆಲುವಿನ ಜಂಬ ಹೊಡೀಬೇಡವೆ! ನಿನ್ನ ತಲೆಯನ್ನೆಲ್ಲ ಬೋಳಿಸಿ, ಈ ಲಾವಣ್ಯದ ಅವಯವಗಳನ್ನೆಲ್ಲಾ ಕತ್ತರಿಸಿಬಿಟ್ಟರೆ- ಆಮೇಲೆ ನೋಡೋಣ ಯಾವ ಕಾಮ ಬರ್ತಾನೋ ನಿನ್ನ ಮೂಸಿನೋಡಲು! ಈ ಸುಂದರ ರೂಪ ಹೋದಮೇಲೆ ಒಂದು ಹೊಲಸು ನಾಯಿ ಸಹ ನಿನ್ನೆದುರು ಹಾಯಲಾರದು ತಿಳೀತೇ!' ಎಂದು ಹೇಳುತ್ತ ಅವಳನ್ನು ಹಿಡಿದು ಏಟುಹಾಕುವುದರಲ್ಲಿದ್ದೆ. ಆದರೆ ಅದಕ್ಕೆಲ್ಲ ಅವಳು ಮೊದಲೇ ಸಿದ್ಧತೆ ಮಾಡಿದ್ದಳೆಂದು ತೋರುತ್ತೆ. ಹಿಂದೆ ಅಡಗಿದ್ದ ಅವಳ ಗೆಳೆಯ ಬಂದವನೆ ದೊಣ್ಣೆಯಿಂದ ನನ್ನ ತಲೆಯ ಮೇಲೆ ಪ್ರಹಾರಮಾಡಿದ ನಾನು ಎಚ್ಚರತಪ್ಪಿ ಬಿದ್ದುಬಿಟ್ಟೆ........ಎದ್ದು ನೋಡಿದರೆ ಅವರಿಬ್ಬರೂ ಫರಾರಿ........!'

'ಆದರೆ ಆ ಕೊಲೆಯ ಪ್ರಯತ್ನಕ್ಕೂ ಇದಕ್ಕೂ ಏನು ಸಂಬಂಧ?'– ನಿನ್ನ ಹೆಂಡತಿಯೇನು ಆ ವೇಶ್ಯೆ?'

'ಛಿ! ಛಿ! ಆಕೆ ನನ್ನ ಹೆಂಡತಿಯಲ್ಲ. ಅವಳೇ ಇವಳಾಗಿದ್ದರೆ ಎಷ್ಟು ಚೆನ್ನಾಗುತಿತ್ತು! ಆಕೆ ಸಿಕ್ಕಲಿಲ್ಲ. ಓಡಿಹೋದಳು. ನನ್ನ ಸೇಡು–ದ್ವೇಷ ಪೂರ್ತಿಯಾಗಲು ಆಸ್ಪದ ದೊರೆಯಲಿಲ್ಲ. ಆದರಿಂದ ಅದು ವಿಕೃತವಾಗಿ ಈ ರೀತಿ ಹುಚ್ಚುಹುಚ್ಚಾಗಿ ಹೊರಳಿತು........'

'ನಿನಗೂ ಆ ವೇಶ್ಯೆಗೂ ಮೊದಲಿನಿಂದಲೂ ಪರಿಚಯವಿತ್ತೇ?'

'ಎಲ್ಲಿಯ ಪರಿಚಯ ರಾಯರೆ! ಸೂಳೆಯರೆಂದರೆ ನನ್ನ ತಲೆ ಕೆಟ್ಟುಹೋಗುತಿತ್ತು. ಆ ಕೊಳಚೆಯಲ್ಲಿ ಬೀಳುವ ಸ್ಥಿತಿಯಲ್ಲೂ ನಾನಿರ

ಲಿಲ್ಲ. ನನ್ನವಳ ಮೋಸಗಾರಿಕೆಯಿಂದಾಗಿ ನನಗೆ ಹೆಣ್ಣೆಂದರೆ ಮೋಸದ ಮೊಟ್ಟೆ, ಅಸತ್ಯದ ಸಾರಸಂಗ್ರಹವೆಂಬ ಭಾವನೆ ಬಂದಿತ್ತು. ಇಡೀ ಹೆಣ್ಣು ಜಾತಿಯನ್ನೆಲ್ಲ ನಾನು ಅತ್ಯಂತ ಹೀನಾಯವಾಗಿ ಭಾವಿಸುತ್ತಿದ್ದೆ........'

'ಹಾಗಾದರೆ ಆ ವೇಶ್ಯೆಯ ಸಂಬಂಧ ಹೇಗೆ ಬಂತು?'

'ನಾನಾಗಿಯೆ ತಂದುಕೊಳ್ಳಲಿಲ್ಲ. ಅಕಸ್ಮಾತ್ತಾಗಿ ಆ ಯೋಗ ಬಂತು. ಒಂದು ರಾತ್ರಿ ಆಕೆ ಸಿನಿಮಾ ಥಿಯೇಟರಿನ ಬಳಿ ಸುಳಿದಾಡು ತ್ತಿದ್ದಳು. ಸೆಲೂನಿನಿಂದ ಮನೆಗೆ ಹೋಗುವಾಗ ನಾನು ಅಲ್ಲಿ ಹಾಯುತ್ತಿದ್ದೆ. ಸೂಳೆಯರ ಮಾಟ ಗೊತ್ತಿರಬೇಕು ನಿಮಗೆ. ನನ್ನನ್ನು ಕಂಡು ಕುಡಿ ನೋಟ ಬಿಟ್ಟಳು. ಹುಬ್ಬು ಹಾರಿಸಿದಳು. ಸೆರಗು ತೂರಿದಳು. ತಿರಸ್ಕಾರ ದಿಂದ ನಾನವಳ ಕಡೆ ನೋಡಿದೆ. ಏನು ಆಶ್ಚರ್ಯ! ನನ್ನ ಪತ್ನಿಯ ಹಾಗೇ ಇದ್ದಳಾಕೆ. ಅದೇ ಆಕಾರ! ಅದೇ ರೂಪ! ಅದೇ ಬಣ್ಣ! ಹೃದಯ ಗಳಂತೂ ಅವಳಿಜವಳಿಯೆ! ನನಗೆ ಎಚ್ಚರದಪ್ಪಿತು. ಆಕೆ ನನ್ನ ಪತ್ನಿಯೆಂದೇ ಭಾವನೆಯಾಯಿತು. ನನ್ನಲ್ಲಿ ಕುದಿಯುತ್ತಿದ್ದ ಸೇಡಿನ ಜ್ವಾಲಾಮುಖಿ ಸ್ಫೋಟಗೊಂಡಿತು. ಅಂದು ಅವಳನ್ನು ತೀರಿಸಿಬಿಡಬೇಕೆಂದು ನಿರ್ಧರಿಸಿದೆ. 'ಮನೆಗೆ ಹೋಗೋಣ ನಡೀ' ಅಂದೆ. ಅವಳು ಹೊರಟಳು. ದಾರಿಯಲ್ಲಿ ಸೆಲೂನಿನ ಹೊರಗಡೆ ಅವಳನ್ನು ನಿಲ್ಲಿಸಿ ಕತ್ತಿಯೊಂದನ್ನು ಚೆನ್ನಾಗಿ ಮಸೆದು ಕೊಂಡು ಬಂದೆ. ಮುಂದಾದುದೆಲ್ಲ ನಿಮಗೆ ತಿಳಿದೇ ಇದೆ........'

ಢಣ್....ಢಣ್....ಢಣ್....

ಕಾರಾಗಾರದ ಕಾವಲುಗೃಹದಿಂದ ಗಂಟೆ ಹನ್ನೊಂದಾದುದು ಕೇಳಿಸಿತು.

ಮಧ್ಯಾಹ್ನದ ರೊಟ್ಟಿ ಬರುವ ಸಮಯವಾಯಿತು. ಬರಾಕಿನಲ್ಲಿನ ಸೆರೆಯಾಳುಗಳೆಲ್ಲ ಒಬ್ಬೊಬ್ಬರಾಗಿ ಎದ್ದು 'ಥಾಲೀ-ಪಾಟು' ಹಿಡಿದು ಕೊಂಡು ಕೆಳಗೆ ನಡೆದರು.

'ಶಿಕ್ಷೆಯಾದುದಕ್ಕೆ ವಿಷಾದವಾಗಲಿಲ್ಲವೆ ನಿನಗೆ?' ಎಂದೆ.

'ವಿಷಾದ ಏನು ಬಂತು? ಅತ್ಯಾನಂದವಾಯಿತು ನನಗೆ. ಆದುಷ್ಟ-ಜಗತ್ತಿನಿಂದ ಬಿಡುಗಡೆಯಾಯಿತಲ್ಲಾ- ಎಂದು ನನಗೆ ತುಂಬ ಸಂತೋಷ.

ಹಿಂದೆ ನಡೆದ ಆ ಎಲ್ಲ ಘಟನೆಗಳನ್ನೂ ನಾನಿಂದು ಮರೆತುಬಿಡುತ್ತಿದೇನೆ- ಇಲ್ಲಿನ ವಾತಾವರಣವೇ ಬೇರೆಯಾಗಿದೆ. ಜೈಲಿನ ಸುತ್ತಮುತ್ತ ಇರುವ ವಿಸ್ತೃತವಾದ ಗೋಡೆ ನಮ್ಮನ್ನು ಆ ಪಾಪಿ ಜಗತ್ತಿನಿಂದ ಸುರಕ್ಷಿತವಾಗಿರಿಸಿದೆ. ನನ್ನ ಮಟ್ಟಿಗಂತೂ ಜೈಲು ಅಂದರೆ ದುಃಖದಾಯಕ ನರಕವಲ್ಲವೇ ಅಲ್ಲ. ಇದೊಂದು ಪುಣ್ಯಭೂಮಿ' ಎಂದು ಹೇಳಿ ಕರವೀರ ಮಂದಹಾಸ ಬೀರಿದ.

'ಅದಿರಲಿ ಕರವೀರ! ನೀನು ನಿನ್ನ ಅಂಗಡಿಗೆ? ಸರಸ್ವತೀ ಹೇರ್ ಕಟಿಂಗ್ ಸೆಲೂನ್' ಎಂದು ಹೆಸರಿಟ್ಟುದೇಕೆ 'ಅದಕ್ಕೇನಾದರೂ ಉದ್ದೇಶವಿರಬೇಕಷ್ಟೆ?'

'ಹೌದು. ಉದ್ದಿಶ್ಯಪೂರ್ವಕವಾಗಿಯೆ ಹಾಗೆ ಹೆಸರಿಟ್ಟೆ.'

'ನಿನ್ನ ಹೆಂಡತಿಯ ಹೆಸರು ಹೇಳಲಾ ನಾನು?'

'ಹೇಳಿ.'

'ಸರಸ್ವತಿ!'

ನನಗಾದ ಶಿಕ್ಷೆ ಮುಗಿಸಿಕೊಂಡು ಹೊರಕ್ಕೆ ಬಂದೆ.

ಕಚೇರಿಗೆ ಬಂದು ಕುರ್ಚಿಯಮೇಲೆ ಓತುಕೊಳ್ಳುತ್ತಲೂ ಎದುರಿಗೆ ದೃಷ್ಟಿ ಹೋಯಿತು.

'ಶ್ರೀ ಸರಸ್ವತೀ ಹೆರ್ ಕಟಿಂಗ್ ಸೆಲೂನ್' ಎಂಬ ವಿಲಕ್ಷಣಪಟವೂ ಅಲ್ಲಿ ಕಾಣಿಸಲಿಲ್ಲ. ಒಳಗಡೆ ಅದರ ಮಾಲೀಕ ಕರವೀರನೂ ಇರಲಿಲ್ಲ!

# ಬರದ ದೇವಿ!

ನಿಲುಗನ್ನಡಿಯ ಎದುರಿಗೆ ನಿಂತುಕೊಂಡು ಶಿವಣ್ಣ. ಸರಸರನೆ ಕೂದಲಿನ ಮೇಲೆ ಬಾಚಣಿಗೆಯನ್ನಾಡಿಸಿದ. ಬೈತಲೆಯನ್ನು ಸರಿಪಡಿಸುವುದರ ಕಡೆ ಅವನ ಗಮನವಿದ್ದಂತಿರಲಿಲ್ಲ. ಕನ್ನಡಿಯಲ್ಲಿ ಮೂಡಿದ್ದ ಪ್ರತಿಬಿಂಬದ ಕಡೆಗೂ ಅವನ ದೃಷ್ಟಿಯಿದ್ದ ಹಾಗಿರಲಿಲ್ಲ.

ಬಾಚಣಿಗೆಯನ್ನು ಮೇಜಿನ ಮೇಲೆ ಬಿಸುಟಬಿಟ್ಟು ವಿರಾಮ ಕುರ್ಜಿಯಲ್ಲೊರಗಿಕೊಂಡ. ಕೊಂಚ ತೀವ್ರ ಸ್ವರದಲ್ಲಿಯೇ ಕೂಗಿದ.

"ಪಾರೂ ಽಽ, ಏ ಪಾರೂ ಽಽಽ!"

ಅವನ ಕೂಗಿಗೆ ಉತ್ತರವೇನೂ ದೊರೆಯಲಿಲ್ಲ.

ಕೊಂಚ ಕೋಪದ ಸ್ವರದಲ್ಲಿ ಅವನು ಪುನಃ ಕೂಗಿದ:

'ಏ ಪಾರೀ,............ಮನೇ ಮಾರೀ ಽಽ —'

ಆಗಲೂ ಅವನ ಕೂಗು ಹುಸಿ ಹೋಯಿತು. ಪಾರಿಯೂ 'ಓ' ಕೊಡಲಿಲ್ಲ, ಮಾರಿಯೂ 'ಓ' ಕೊಡಲಿಲ್ಲ.

'ಎಲ್ಲಿ ಹಾಳಾದಳೋ ತಿಳಿಯದು ಕಾಫಿ ಹೊತ್ತಿನಲ್ಲೇ ಈಕೆ ಮಟಮಾಯವಾಗಿಬಿಡೋದು; ಇಲ್ಲಿ ನಮ್ಮ ಗಲಾಟೆಯೋ ಗಲಾಟೆ! ಹೊರಕ್ಕೆ ಹೊರಟುನಿಂತಾಗಲೇ ಈಕೆ ಎಲ್ಲಿ ಬಾವಿ ಬೀಳಲು ಹೋದಳೋ ಏನೊ!

...........' ಎಂದು ಗೊಣಗಿಕೊಳ್ಳುತ್ತ ಶಿವಣ್ಣ ಎದ್ದುಬಿಟ್ಟ. ರೇಗಿನಿಂದ ಅಡಿಗಳನ್ನಿಡುತ್ತ ಅಡಿಗೆ ಮನೆಯನ್ನು ಪ್ರವೇಶಿಸಿದ.

ಅಡಿಗೆ ಮನೆಯೇನೋ ಇದ್ದುದಿದ್ದ ಹಾಗೆಯೆ ಇತ್ತು, ಅದರ ರಾಣಿ ಮಾತ್ರ ಅಲ್ಲಿರಲಿಲ್ಲ.

ಒಲೆಯಿಂದ ಹಠಾತ್ತಾಗಿ 'ಚುರ್‌ರ್‌ರ್' ಎಂಬ ಸದ್ದು ಕೇಳಬಂದಿತು ಶಿವಣ್ಣ ಆಕಡೆ ಹೊರಳಿದ.

ಒಲೆಯಲ್ಲಿಯ ಬೆಂಕಿ ಹೋಮಾಗ್ನಿಯಂತೆ ಧಗಧಗಿಸುತ್ತಿತ್ತು. ಪಾತ್ರೆಯಲ್ಲಿರಿಸಿದ್ದ ಹಾಲು ಉಕ್ಕೇರಿ ಬಂದು ಅಗ್ನಿ ದೇವತೆಯನ್ನು ತೃಪ್ತಿಪಡಿಸುತ್ತಲಿತ್ತು.

ಇದುವರೆಗೆ ಮೂಗಿನ ಮೇಲಿದ್ದ ಅವನ ಕೋಪ ಅದನ್ನು ಕಂಡೊಡನೆ ನೆತ್ತಿಗೇರಿಬಿಟ್ಟಿತು. ಹಾಲಿನ ಪಾತ್ರೆಯನ್ನೆತ್ತಿ ಕೆಳಕ್ಕೆ ಕುಕ್ಕರಿಸಿಬಿಟ್ಟು ಹಿತ್ತಲಿನ ಕಡೆಗೆ ಹೊರಳಿದ.

ಕೋಪದ ರಭಸದಲ್ಲಿ ಆತನು ಪಾರ್ವತಿಗೆ ಎಂತೆಂತಹ ಮಾತನ್ನು ಆಡಿಬಿಡುತ್ತಿದ್ದನೋ ತಿಳಿಯದು; ಆದರೆ ಹಿತ್ತಿಲ ಬಾಗಿಲಲ್ಲಿಯ ದೃಶ್ಯ ಅವನ ಕಣ್ಣ ಬೊಂಬೆಗಳಲ್ಲಿ ಮೂಡುತ್ತಲೂ ಅವನ ನಾಲಗೆಯ ಆವೇಶವೆಲ್ಲ ಎಲ್ಲೊ ಮಾಯವಾಯಿತು. ಕೋಪ ಎಲ್ಲಿ ಅದೃಶ್ಯವಾಯಿತೊ! ಅವಳನ್ನು ಬೈದುಬಿಡಲು ಪ್ರತ್ಯೇಕವಾಗಿದ್ದ ತುಟಿಗಳೆರಡೂ ಗಂಭೀರವಾಗಿ ಕೂಡಿಕೊಂಡುವು.

ಇನ್ನೂ ಹರೆಯದವಳಂತಿದ್ದ ಹಳ್ಳಿಯ ಹೆಂಗಸೊಬ್ಬಳು ಬಾಗಿಲಲ್ಲಿ ಕುಳಿತುಕೊಂಡಿದ್ದಳು; ಪಾರ್ವತಿ ಅವಳೊಂದಿಗೆ ಏನೋ ಮಾತನಾಡುತ್ತಿದ್ದಳು.

ಹಠಾತ್ತಾಗಿ ಶಿವಣ್ಣನ ದೃಷ್ಟಿ ಆ ಹಳ್ಳಿಯವಳ ಕೆನ್ನೆಗಳ ಕಡೆಗೆ ಹೋಯಿತು. ಕಂಬನಿಗಳ ಮಳೆಯಲ್ಲಿ ಆ ಎರಡು ಕೆನ್ನೆಗಳೂ ತೋಯ್ದು ಹೋಗುತ್ತಿದ್ದವು.

ಹೆಣ್ಣಿನ ಕಣ್ಣೀರಿನಲ್ಲಿ ಅಗಾಧವಾದ ಸಾಮರ್ಥ್ಯವಿದೆಯೆಂಬುದೇನೂ ಸುಳ್ಳಲ್ಲ! ಅವಳು ಯಾರೋ ಎಲ್ಲಿಯವಳೋ! ಅವಳಿಗೂ ತನಗೂ ಏನೂ

ಸಂಬಂಧವಿಲ್ಲ. ಈ ಮೊದಲು ಒಂದು ಸಲವೂ ಆಕೆ ತನ್ನ ದೃಷ್ಟಿಗೆ ಬಿದ್ದವಳಲ್ಲ. ತನ್ನ ಜೊತೆಗೆ ಒಂದು ಮಾತನ್ನೂ ಕೂಡ ಆಡಿದವಳಲ್ಲ. ಹೀಗಿದ್ದರೂ ಅವಳ ಕಣ್ಣೀರನ್ನು ಕಂಡೊಡನೆ ನನ್ನ ಕೋಪ ಇಳಿದುಹೋಗಿ ಬಿಟ್ಟಿತಲ್ಲಾ—ಎಂದು ಶಿವಣ್ಣನಿಗೆ ಕೊಂಚ ಅಚ್ಚರಿ ಹುಟ್ಟದಿರಲಿಲ್ಲ.

ಮಾತನ್ನೇನೂ ಆಡದೆ ಆತನು ಹೋದಹಾಗೆ ಹಿಂತಿರುಗಿದ. ಅಂತಹ ಸಂದರ್ಭದಲ್ಲಿ ಪಾರ್ವತಿಯನ್ನು ಕೂಗುವುದೂ ಸರಿಯೆನ್ನಿಸಲಿಲ್ಲ; ತಾನಾಗಿಯೇ ಅವಳು ಎದ್ದು ಬರುವ ಲಕ್ಷಣವೂ ತೋರಲಿಲ್ಲ. ಆ ಹಳ್ಳಿಯವಳ ಕಣ್ಣೀರ ಹೊಳೆಯಲ್ಲಿ ಅವಳೂ ತೇಲಿಹೋಗುತ್ತಿದ್ದ ಹಾಗಿದ್ದಿತು.

ಇನ್ನೇನು ತಾನೆ ಮಾಡುವುದು? ಕಾಫಿಯಂತೂ ಬೇಗನೆ ಸಿದ್ಧವಾಗಬೇಕು. ಎಂದರೆ ತನಗೆ ಬೇಗ ಕೆಲಸಕ್ಕೆ ಹೋಗಲು ಸಾಧ್ಯ. ಪಾರ್ವತಿ ಬರುವವರೆಗೂ ಕಾಯುತ್ತ ಕುಳಿತಿರುವುದೆಂದರೆ ಇಂದು ರಜೆ ತೆಗೆದುಕೊಂಡ ಹಾಗೆಯೇ ಸರಿ. 'ಆಗಲಿ' ಇಂದು ಊದುಗೊಳವೆ ಹಿಡಿಯಬೇಕಾದ ಸಂದರ್ಭ ಹಣೇಲಿ ಬರೆದಂತಿದೆ!' ಎಂದು ಕೊಳ್ಳುತ್ತ ಶಿವಣ್ಣ ಒಲೆಯೆದುರಿಗೆ ಬಂದು ಕುಳಿತುಕೊಂಡ.

ಕಾಫಿಗೆ ಎಸರಿಟ್ಟು ಊದುಗೊಳವೆ ಕೈಗೆತ್ತಿಕೊಂಡ. ಆಗತಾನೆ ಹಾಲು ಕುಡಿದಿದ್ದ ಅಗ್ನಿ ಹಾಯಾಗಿ ಮಲಗಿ ಕೊಂಡಿದ್ದಿತೇನೋ! ಎಷ್ಟು ಊದಿದರೂ ಉರಿ ಏಳಲೇ ಇಲ್ಲ. ನೀರು ಕಾಯುವುದಕ್ಕೆ ಪ್ರತಿಯಾಗಿ ಅವನ ತಲೆ ಕಾಯತೊಡಗಿತು. ಕಣ್ಣುಗಳಿಗೆ ಇದ್ದಲಿಯ ಕಿಡಿಗಳ ಪ್ರಸಾದವೂ ದೊರೆಯಿತು.

'ಇದೇನು ಒಲೆಯೋ ಅದರಪ್ಪನ ತಲೆಯೋ' ಎಂದು ಗೊಣಗಿಕೊಳ್ಳುತ್ತ ಶಿವಣ್ಣ ಊದುಗೊಳವೆಯನ್ನು ಬಿಸುಡಿ ಎದ್ದು ಬಿಟ್ಟ. ಕಣ್ಣುಜ್ಜಿಕೊಳ್ಳುತ್ತ ಕಿಡಿಗಳನ್ನು ಹೊರದೆಗೆಯಲಾರಂಭಿಸಿದ. ಅವನಿಗೆ ತಿಳಿಯದಂತೆಯೆ ಅವನ ನಾಲಗೆ ಗಟ್ಟಿಯಾಗಿ ಕೂಗಿತು.

'ಪಾರೀ s s s'

ಈ ಸಲ ಮಾತ್ರ ಗುಂಡು ಹುಸಿ ಹೋಗಲಿಲ್ಲ. ಪಾರ್ವತಿ ಧಾವಿಸುತ್ತ ಒಳಕ್ಕೆ ಬಂದಳು.

ಕಣ್ಣುಜ್ಜಿ ಕೊಳ್ಳುತ್ತಿದ್ದ ಹಾಗೆ ಶಿವಣ್ಣ ಅವಳ ಕಡೆ ನೋಡಿದ.

ಮಳೆಯನಂತರದ ಮುಗಿಲಿನ ಹಾಗೆ ಅವಳ ಕಣ್ಣು ಆತನಿಗೆ ಕಾಣಿಸಿದುವು. ಆ ಹಳ್ಳಿಯವಳೊಂದಿಗೆ ಈಕೆಯೂ ಕಂಬನಿಗರೆದಿದ್ದಳೇನೋ ತಿಳಿಯದು. ಕೆನ್ನೆಗಳ ಮೇಲೆ ಸೆರಗು ಆಡಿದಂತಿದ್ದರೂ, ಒಂದು ಹನಿ ಮಾತ್ರ ಅದಕ್ಕೆ ಸಿಕ್ಕಿ ಬೀಳದೆ ಇನ್ನೂ ಹಾಗೆಯೆ ಹೊಳೆಯುತ್ತಿತ್ತು.

ಆಕೆ ಅವನ ಕಡೆಗೆ ನೋಡಿದಳು.

ಅವನ ಕಣ್ಣುಗಳೆರಡೂ ಊದಿಕೊಂಡು ಕೆಂಡದಂತಾಗಿದ್ದುವು. ಕಾಫಿಯ ಪಾತ್ರೆಯನ್ನು ಒಲೆಯಮೇಲಿರಿಸುವಾಗ ಕೈಗೆ ಹತ್ತಿ ಕೊಂಡಿದ್ದ ಮಸಿ, ಕಣ್ಣುಜ್ಜಿಕೊಳ್ಳುವಾಗ ಮುಖಕ್ಕೆಲ್ಲ ಬಣ್ಣ ಬಳಿದು ಬಿಟ್ಟಿತ್ತು!

ಬೇರಾವುದಾದರೂ ಸಂದರ್ಭವಾಗಿದ್ದಲ್ಲಿ ಆಕೆ ಕೇಕೆಹಾಕಿ ನಕ್ಕು ಬಿಡಬಹುದಾಗಿತ್ತು. ಆದರೆ ಆಗ ಅವಳಿಗೆ ನಗು ಬರಲಿಲ್ಲ. ಅವಳ ಮುಖದಿಂದ ಒಂದು ಮಾತೂ ಹೊರಡಲಿಲ್ಲ.

ಒಲೆಯ ಬಳಿ ಹೋಗಿ ಕುಳಿತುಕೊಂಡಳು. ಅವಳು ಕೈಯಲ್ಲಿ ಊದುಗೊಳವೆಯನ್ನೆತ್ತಿಕೊಳ್ಳಲೂ ಒಲೆ ಉರಿಯತೊಡಗಿತು.

ಮುಖ ತೊಳೆದುಕೊಂಡು ಶಿವಣ್ಣ ತನ್ನ ಕೊಠಡಿಗೆ ಬಂದು ಕುಳಿತು ಕೊಂಡ. ಮೂರು ನಿಮಿಷಗಳಲ್ಲಿ ಬಿಸಿಬಿಸಿ ಕಾಫಿಯೂ ಬಂದಿತು. ಶಿವಣ್ಣನ ಹೊಟ್ಟೆಯಲ್ಲಿ ಮಾಯವಾದುದೂ ಆಯಿತು.

ಕೈವಸ್ತ್ರದಿಂದ ತುಟಿಗಳನ್ನೊರಸಿಕೊಳ್ಳುತ್ತ ಶಿವಣ್ಣ ಎದ್ದುಬಿಟ್ಟ. ಕೋಟಿನ ತೋಳಿಗೆ ಕೈ ಸಿಲುಕಿಸುತ್ತ ಪತ್ನಿಯಕಡೆ ಹೊರಳಿ ಹೇಳಿದ.

'ಮಧ್ಯಾಹ್ನ ನನಗೆ ಬಿಡುವು ದೊರೆಯಲಾರದು. ನೀನು ನನಗಾಗಿ ಕಾಯಬೇಡ. ಊಟ ಮುಗಿಸಿಕೊಂಡುಬಿಡು. ಬಹುಶಃ ಸಾಯಂಕಾಲ ಆರು ಗಂಟೆಗೆ ಬಂದು ಬಿಡ್ತೇನೆ!"

'ಯಾಕೆ? ಊಟಕ್ಕೇನು ಮಾಡ್ತೀರಿ?' ಎಂಬ ಪ್ರಶ್ನೆ ಅವಳ ನಾಲಗೆಯ ತುದಿಯ ಮೇಲೆಯೆ ಬಂದಿದ್ದಿತು.

ಆದರೆ ಹೊರಕ್ಕೆ ಹೊರಡಲಿಲ್ಲ.

ಚಪ್ಪಲಿಗಳಲ್ಲಿ ಕಾಲು ಸೇರಿಸುತ್ತ ಶಿವಣ್ಣ ಅವಸರದಿಂದ ಹೊರಟು ಹೋದ. ಪಾರ್ವತಿ ನಿಂತಹಾಗೆಯೇ ನಿಂತಿದ್ದಳು.

೨

ಆರು ಗಂಟೆಗೆ ಬರುವುದಾಗಿ ಹೇಳಿದ್ದನಾದರೂ ಶಿವಣ್ಣ ಐದು ಗಂಟೆಗೇ ಮನೆಗೆ ಬಂದುಬಿಟ್ಟ.

ಬಂದು ನೋಡಿದರೆ ಅದೇ–ಆ ಬೆಳಗಿನ ದೃಶ್ಯ!

ಆ ಹಳ್ಳಿಯ ತರುಣಿ–ಅವಳ ಕಂಬನಿದುಂಬಿದ ಕಣ್ಣು–ಕಂಪಿಸುವ ಕಂಠದಲ್ಲಿ ಹೊರಡುತ್ತಿರುವ ಮಾತು– ಹತ್ತಿರದಲ್ಲಿಯೇ ಮೌನವಾಗಿ ಕುಳಿತು ಕೇಳುವ ಪಾರ್ವತಿ !—ಹೌದು ಬೆಳಗಿನ ದೃಶ್ಯದ ಹೊಸ ಆವೃತ್ತಿಯೇ ಅದು. ಸನ್ನಿವೇಶ ಮಾತ್ರ ಬದಲಾಗಿದೆ ಅಷ್ಟೇ. ಬೆಳಿಗ್ಗೆ ಹಿತ್ತಿಲ ಬಾಗಿಲಲ್ಲಿ, ಈಗಲಾದರೋ ಮುಂದಿನ ಬಾಗಿಲಿನಲ್ಲೇ ನಡೆದಿದೆ ಆ ದೃಶ್ಯ!

ಅವನು ಮೆಟ್ಟಿಲುಗಳನ್ನೇರಿ ಬರುತ್ತಲೂ ಆ ಹಳ್ಳಿಯುವಳು ತಟ್ಟನೆ ಎದ್ದು ಬಿಟ್ಟಳು. ಕೆಳಗೆ ಉರುಳಿ ಹೋಗಿದ್ದ ಸೀರೆಯ ಸೆರಗನ್ನು ತಲೆ ತುಂಬಾ ಹೊದೆದುಕೊಂಡು, ಬಾಗಿಲಿನಿಂದ ಸರಿದು ಅವನಿಗೆ ದಾರಿಮಾಡಿ ಕೊಟ್ಟಳು. ಅವಳನ್ನು ನೋಡಿಯೂ ನೋಡದವನಂತೆ ಶಿವಣ್ಣ ನೇರವಾಗಿ ತನ್ನ ಕೊಟಡಿಗೆ ನಡೆದ. ಬೆಳಗಿನಿಂದ ಊಟವಿಲ್ಲದೆ ಅವನ ಹೊಟ್ಟೆ ಹೊಡೆದು ಕೊಳ್ಳುತ್ತಿತ್ತು. ಮಧ್ಯಾಹ್ನ ಕೊಂಚ ತಿಂಡಿ–ಕಾಫಿ ತೆಗೆದು ಕೊಂಡಿದ್ದ ನಾದರೂ ಹಸಿವಿನ ಪೆಡಂಭೂತ ಅಷ್ಟರಿಂದ ಹೇಗೆ ತೃಪ್ತವಾದೀತು? ಮನೆಗೆ ಬರಬೇಕಾದರೆ. ಆತನಿಗೆ ವಿಪರೀತ ಹಸಿವೆಯಾಗಿತ್ತು. ಮನೆಗೆ ಬರುತ್ತಲೂ ಅದು ಇನ್ನೂ ಹೆಚ್ಚಾಯಿತು.

ಕೊಟಡಿಗೆ ಬಂದು ಬಟ್ಟೆ ತೆಗೆದಿರಿಸಿ, ವಿರಾಮ ಕುರ್ಚಿಯಲ್ಲೊರಗಿ ಕೊಂಡ. ಒಂದು ಸಿಗರೇಟು ಹೊತ್ತಿಸಿ, ತುಟಿಗಳ ಮಧ್ಯೆ ಅದನ್ನು ಹಿಡಿದಿದ್ದ ಹಾಗೆಯೆ ಕೂಗಿದ.

'ಪಾರ್ವತೀ ಽ ಽ ಽ'

ಅವನ ಕೂಗಿಗೆ ಮೊದಲೇ ಆಕೆ ಅವನೆದುರಿಗೆ ಪ್ರತ್ಯಕ್ಷವಾಗಿದ್ದಳು.

'ಏನಿದು? ಯಾವಾಗಲೂ ಬಾಗಿಲ ಸಭೆಯೇ ನಡೆದಿರುತ್ತದಲ್ಲ. ನಿಮ್ಮ ಮಾತು-ಕತೆಯಲ್ಲಿ ನಮ್ಮ ಕತೆಯೇನಾದೀತೆಂಬುದೇ ತಿಳಿಯೋದಿಲ್ಲ ನಿಮಗೆ! ಏನಾದರೂ ಕಾಫೀ-ತಿಂಡಿ?........'

ಗೋಡೆಗೆ ಆತುಕೊಂಡು ಮೌನವಾಗಿ ನಿಂತಿದ್ದಳಾಕೆ. ಅವಳ ಎರಡು ಕೈಗಳ ಬೆರಳುಗಳೂ ಸೀರೆಯ ಸೆರಗನ್ನು ಸುಮ್ಮಸುಮ್ಮನೆ ತೀಡುತ್ತಿದ್ದುವು. ಅವಳ ತುಟಿಗಳು ಮೆಲು ಮೆಲನೆ ಚಲನ ವಲನ ಮಾಡುತ್ತಿದ್ದುವು.

ಆತನ ಪ್ರಶ್ನೆಗೆ ನಿರುತ್ತರ.

'ಕಾಫೀ ಮಾಡಲಿಲ್ಲವೆ?'

ಮತ್ತೆ ಮೌನ!

'ನೀನಲ್ಲಿ ಯಾರೋ ತಿರುಕಿಯನ್ನು ಕಟ್ಟಿಕೊಂಡು ಹಾಳು-ಹರಟೆ ಹೊಡಿತಾ ಇರು; ಅವರ ಕಣ್ಣೀರು ಒರಸುವಲ್ಲಿ ತೊಡಗಿರು. ಇಲ್ಲಿ ನಮಗೆ ತಿಂಡಿಸಿಕ್ಕದೆ ಕಣ್ಣೀರು ಹೊರಡುತ್ತಿರಲಿ........' ಶಿವಣ್ಣ ಕೋಪದಿಂದಲೇ ಹೇಳಿದ.

ಆಗ ಮಾತ್ರ ಅವಳ ತುಟಿಗಳು ಬಿಚ್ಚಿಸುವು. ಹೇಳಿದಳು.

'ಆರು ಗಂಟೆಗೆ ಬರುತೇನಂತ ಹೇಳಿ ಐದಕ್ಕೇ ಬಂದು ಬಿಟ್ಟರೆ ಯಾರೇನು ಮಾಡಬೇಕು ಹೇಳಿ! ನೀವು ಬರಲು ಇನ್ನೂ ಒಂದು ಗಂಟೆ ಅವಕಾಶವಿದೆ ಅಂತ ಮಾತನಾಡುತ್ತ ಕೂತಿದ್ದೆ. ಈಗಲೇ ಮಾಡಿದರೆ ಆರಿ ಹೋಗುತ್ತದೆ ಅಂತ...........'

ಮಾತು ಮುಗಿಸಿ ಆಕೆ ನಿಲ್ಲಲೇ ಇಲ್ಲ.

ಹದಿನೈದು ನಿಮಿಷಗಳೊಳಗಾಗಿ ಉಪ್ಪಿಟ್ಟು, ಕಾಫಿ ಸಿದ್ಧವಾಗಿ ಶಿವಣ್ಣನೆದುರಿಗೆ ಬಂದಿತು.

ಉಪ್ಪಿಟ್ಟು ಬಾಯಲ್ಲಿಟ್ಟುಕೊಳ್ಳುತ್ತ ಶಿವಣ್ಣ ಪತ್ನಿಯ ಕಡೆಗೆ ಹೊರಳಿದ. ಆಕೆ ಇನ್ನೂ ನಿಂತುಕೊಂಡೇ ಇದ್ದಳು.

'ಕೂತುಕೋ ಪಾರೂ!' ಎಂದ.

ಅವಳು ಅವನ ಹತ್ತಿರ ಬಂದು ಎದುರಿಗಿದ್ದ ಕುರ್ಚಿಯಲ್ಲಿ ಕುಳಿತು

ಕೊಂಡಳು. ತಿಂಡಿ–ಕಾಫಿ ಮುಗಿಸಿ ಮತ್ತೊಂದು ಸಿಗರೇಟು ಹೊತ್ತಿಸುತ್ತ ಕೇಳಿದ ಶಿವಣ್ಣ.

'ಏನು ಅಷ್ಟೊಂದು ಮಾತು–ಕತೆ ಆ ಹಳ್ಳಿಯವಳ ಜೊತೇಲಿ? ಅವಳು ಯಾರು? ಎಲ್ಲಿಯವಳು? ನಿಮ್ಮೂರಿನವಳೋ ಹೇಗೆ?'

'ಅಲ್ಲ, ವಿಜಾಪುರದ ಕಡೆಯ ಒಂದು ಹಳ್ಳಿಯವಳಂತೆ!'

'ನಿನಗೇನು ಪರಿಚಯ?'

'ಹೆಂಗಸರಿಗೆ ಪರಿಚಯುಗಿರಿಚಯ ಯಾತಕ್ಕೆ ಬೇಕು? ಅವಳು ಬಂದಳು, ತಾನಾಗಿಯೆ ನನ್ನನ್ನು ಮಾತನಾಡಿಸಿದಳು, ಅಷ್ಟೆ!'

'ಈ ಊರಿಗೆ ಏತಕ್ಕಾಗಿ ಬಂದಿದಾಳಂತೆ?'

'ಹೊಟ್ಟೆ ಹೊರೆಯೋದಕ್ಕಾಗಿ'

ಕ್ಷಣಕಾಲ ಮೌನವಾಗಿದ್ದು ಶಿವಣ್ಣ ಪುನಃ ಪ್ರಶ್ನೆ ಮಾಡಿದ.

'ಒಬ್ಬಳೇ ಬಂದಿದ್ದಾಳೆಯೋ?'

'ಊಂ'

ಮತ್ತೆ ಕೊಂಚ ಕಾಲ ಮೌನ.

'ಯಾಕೆ? ಗಂಡನಿಲ್ಲವೋ?'

'ಇಲ್ಲವಂತೆ!'

'ವಿಧವೆಯೋ ಏನು ಪಾಪ?'

'ಹೌದು, ಎರಡು ತಿಂಗಳಾಯಿತು, ಅವಳ ಮಂಗಳ ಸೂತ್ರ ಹರಿದು!'

'ಅಯ್ಯೋ ಪಾಪ! ಏನಾಗಿದ್ದಿತಂತೆ ಅವರಿಗೆ?'

'ಹೊಟ್ಟೆಗೆ ಉಪವಾಸವಾಗಿತ್ತು!'

'ಅಂದರೇನು?'

'ಅಂದರೇನು? ಹೊಟ್ಟೆಗೆ ಕೂಳಿರಲಿಲ್ಲ. ಅವರ ಕಡೆಯಲ್ಲೆಲ್ಲಾ ಭಾರಿ ಬರಗಾಲ. ಹೊಲಗಳಲ್ಲಿ ಬೆಳೆಯೇ ಬರುವಂತಿರಲಿಲ್ಲ. ತಿನ್ನಲು ಕಾಳೆಲ್ಲಿ ಬಂದೀತು? ಆತ ಕೆಲಸ ಹುಡುಕುವುದಕ್ಕಾಗಿ ಯಾವುದೋ ಊರಿಗೆ ಹೊರಟು ಹೋದ. ಅಲ್ಲೂ ಇದೇ ಸ್ಥಿತಿ. ಸರಿ, ಅಲ್ಲಿಯೇ ಒಂದು

ದಿನ ಸತ್ತು ಹೋದ. ಯಾರೋ ಇವಳಿಗೆ ಪತ್ರ ಬರೆದು ತಿಳಿಸಿದರು. ಸರಿ, ಇಲ್ಲಿಗೆ ಬಂದಿದ್ದಾಳೆ!'

ಶಿವಣ್ಣ ಕುಳಿತ ಹಾಗೆಯೆ ಕುಳಿತಿದ್ದ. ಸಿಗರೇಟು ತುಟಿಗಳಲ್ಲಿ ಹಾಗೆಯೆ ಉರಿಯುತ್ತಿತ್ತು. ಅವನ ದೃಷ್ಟಿಯೆದುರಿಗೆ ಆ ಹಳ್ಳಿಯುವಳ ಬಡಕಲು ಶರೀರ ಅಸ್ಪಷ್ಟವಾಗಿ ಕಟ್ಟಿದಂತಿದ್ದಿತು. ಅನ್ನವಿಲ್ಲದೆ ಕಡ್ಡಿಯಂತಾದ ದೇಹ, ಸೀರು–ಸೀರಾದ ಕೈ–ಕಾಲು, ರಕ್ತದ ಅಭಾವದಿಂದ ಬತ್ತಿ ಹೋದ ಕೆನ್ನೆಗಳು, ಕತ್ತಿಯಂತೆ ಮುಂದೆ ಎದ್ದು ಕಾಣುವ ಮೂಗು, ಗುಳಿಬಿದ್ದ ಕಣ್ಣು, ಜೊತೆಗೆ ಒಡೆದು ಹೋದ ಸ್ವರ!—ಬರದ ದೇವಿ ಅವಳ ರೂಪದಲ್ಲಿ ಮೂರ್ತಿವೆತ್ತಹಾಗೆ ತೋರಿತು ಶಿವಣ್ಣನಿಗೆ.

ಕೆಲಕಾಲ ದಂಪತಿಗಳಿಬ್ಬರೂ ಚಿತ್ರದಲ್ಲಿಯ ಆಕೃತಿಗಳಂತೆ ನಿಶ್ಚಲವಾಗಿ ಕುಳಿತಿದ್ದರು. ಒಬ್ಬರ ಮುಖದಿಂದಲೂ ಮಾತು ಹೊರಡುವಂತಿರಲಿಲ್ಲ.

ಇದ್ದುದಿದ್ದ ಹಾಗೆ ಪಾರ್ವತಿ ತಲೆಯೆತ್ತಿ ಹೇಳಿದಳು.

'ಒಂದು ಮಾತು ಹೇಳಲಾ?'

ಶಿವಣ್ಣ ದೃಷ್ಟಿಯನ್ನೆತ್ತದೆ ಕೇಳಿದ.

'ಏನದು?'

"ನೋಡಿ, ನೀವು ಒಪ್ಪುವಂತಿದ್ದರೆ ಹೇಳ್ತೀನೆ'

ಅವಳು ತಡೆ–ತಡೆಯುತ್ತಲೆ ಹೇಳಿದಳು.

'ಆಕೆಗೆ ಪಾಪ! ಎಲ್ಲೂ ಕೆಲಸ ಸಿಗುತ್ತಿಲ್ಲ. ಈ ಊರಿಗೆ ಬಂದು ಎಂಟು ದಿನಗಳಾಯಿತಂತೆ. ಊರಲ್ಲಿಯ ಶ್ರೀಮಂತರ, ಶೆಟ್ಟಿ ಸಾಹುಕಾರರ ಮನೆಗಳನ್ನೆಲ್ಲಾ ಒಂದೂ ಬಿಡದೆ ತಿರುಗಿದಳಂತೆ. ಯಾರೂ ಆಕೆಗೆ ಕೆಲಸವನ್ನು ಕೊಡಲಿಲ್ಲ; ಒಂದು ಕಾಸನ್ನೂ ಸಹಾಯ ಮಾಡಲಿಲ್ಲ. ಅವಳ ಕತೆಯನ್ನೆಲ್ಲ ಕೇಳಿಕೊಂಡು, ಕೆಲವರು ಒಣಮರುಕ ತೋರಿಸಿ 'ಏನು ಮಾಡೋಣಮ್ಮಾ ನಮಗೂ ಭಾರಿ ತಾಪತ್ರಯ; ಇಲ್ಲವಾದರೆ ನಿನಗೇನಾದರೂ ಸಹಾಯ ಮಾಡುತ್ತಿದ್ದೆವು' ಎಂದರಂತೆ ಇನ್ನು ಕೆಲವರು ಅವಳ ಕತೆಯನ್ನು ಸಹ ಪೂರ್ತಿಯಾಗಿ ಕೇಳದೆ ಮನೆಯಿಂದ ಓಡಿಸಿಬಿಟ್ಟರಂತೆ! ................'

‘ ಇಷ್ಟುದಿನ ಹೊಟ್ಟೆಗೇನು ಮಾಡುತ್ತಿದ್ದಳು ? ’

‘ ಬಿಕ್ಷೆ ಬೇಡಲಾರದೆ ಒಂದೆರಡು ದಿನ ಉಪವಾಸವಿದ್ದಳು. ಅನಂತರ ಹೊಟ್ಟೆಯ ಸಂಕಟ ತಾಳಲಾರದೆ ಬಿಕ್ಷೆ ಬೇಡಿ ಅದನ್ನು ಹೇಗೋ ಸಮಾಧಾನಗೊಳಿಸಿದಳು. ಈಗ...........”

ವಾಕ್ಯವನ್ನು ಪೂರ್ತಿ ಮುಗಿಸದೆ ಪಾರ್ವತಿ ನಿಂತುಬಿಟ್ಟಳು. ಅವಳ ಕೊನೆಯ ಶಬ್ದ—‘ ಈಗ ? ’ ಎಂಬುದು ಶಿವಣ್ಣನ ಕಿವಿಗಳಲ್ಲಿ ಮತ್ತೆ ಮತ್ತೆ ಮೊರೆಯತೊಡಗಿತು. ಅವನ ಕಣ್ಣುಗಳೆದುರಿಗೆ ದೊಡ್ಡದೊಂದು ಪ್ರಶ್ನಾರ್ಥಕ ಚಿಹ್ನೆ ಮೂಡಿದಂತಾಯಿತು.

‘ ಈಗ ? ’

— ಆ ಬಡವಿ ಏನು ಮಾಡಬೇಕು ? ಕೆಲಸಮಾಡಿ ಹೊಟ್ಟೆ ಹೊರೆದುಕೊಳ್ಳುವ ಅಪೇಕ್ಷೆಯೇನೋ ಆಕೆಗಿದೆ. ಆದರೆ ಆಕೆಗೆ ಕೆಲಸ ಕೊಡಲು ಯಾರೂ ಸಿದ್ಧರಿಲ್ಲ. ಬೀಸುವುದು-ಕುಟ್ಟುವುದು-ಕಸ-ಮುಸುರೆ-ಅಡಿಗೆ ಕೂಲಿ—ಯಾವುದನ್ನು ಮಾಡಲೂ ಆಕೆ ತಯಾರಾಗಿದ್ದಾಳೆ. ಆದರೆ ಯಾರೂ ಅವಳನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಮನಸ್ಸು ಮಾಡುತ್ತಿಲ್ಲ. ನಿರುಪಾಯವಾಗಿ—ಕೇವಲ ಹೊಟ್ಟೆಯ ಹೋರನ್ನು ತುಂಬಿಸುವುದಕ್ಕಾಗಿ ಇಂದು ಆಕೆ ಬೀದಿಗೆ ಬರಬೇಕಾಗಿದೆ ಭಿಕಾರಿಯಾಗಿ !...........’

ಶಿವಣ್ಣನ ಮನಸ್ಸು ಆತನಿಗೆ ಬಿಟ್ಟು ಬಿಡದೆ ಪ್ರಶ್ನೆ ಮಾಡತೊಡಗಿತು ಆಕೆಯನ್ನು ಹೀಗೆಯೇ ಭಿಕಾರಿಯಾಗಲು ಬಿಡುವೆಯಾ ? ಊರಿನ ಎಲ್ಲ ಜನರಹಾಗೆ ನೀನೂ ಅವಳನ್ನು ನಿನ್ನ ಮನೆಯಿಂದ ಓಡಿಸುವೆಯಾ ? ನಿನ್ನ ನಾಡಿನ ಸ್ತ್ರೀಯೊಬ್ಬಳು ಬರಗಾಲದಿಂದ ಅನಾಥೆಯಾಗಿ ಇಲ್ಲಿಗೆ ಬಂದಿದ್ದಾಳೆ. ನೀನಾದರೂ ಅವಳ ಹೊಟ್ಟೆಗೆ ಹಾಕುವೆಯಾ ? ಇಲ್ಲವೆ ಅವಳನ್ನು ಭಿಕಾರಿಗಳ ತಂಡದಲ್ಲಿ ಸೇರಿಸುವೆಯಾ ?

ಆ ಪ್ರಶ್ನೆಗೆ ಏನು ಉತ್ತರವೀಯಬೇಕೆಂಬುದು ಆತನಿಗೆ ಹೊಳೆಯಲಿಲ್ಲ. ಆ ಪ್ರಶ್ನೆಯನ್ನು ಅಲ್ಲಿಯೆ ಬಿಟ್ಟು ಆತನ ಮನಸ್ಸು ಬರಗಾಲದ ಕಾರಣಗಳೇನೆಂಬುದನ್ನು ಶೋಧಿಸಲು ಹೊರಟಿತು. ಸಕಾಲಕ್ಕೆ ಮಳೆಯಾಗಲಿಲ್ಲ. ಬೆಳೆಗೆ ನೀರು ಸಿಕ್ಕದೆ ಅದು ಸತ್ತು ಹೋಯಿತು. ಅದರೊಂದಿಗೆ

ರೈತರೂ ಸತ್ತು ಹೋಗಬೇಕಾದ ಸಂದರ್ಭ ಬಂತು. ವೃತ್ತಪತ್ರಿಕೆಗಳಲ್ಲಿ ದಿನವೂ ಪ್ರಕಟವಾಗುತ್ತಿದ್ದ ಬರಗಾಲದ ಭೀಕರತೆಯ ಭಯಂಕರ ವೃತ್ತಾಂತಗಳು ಕ್ಷಣಮಾತ್ರದಲ್ಲಿ ಆತನ ನೆನಪಿನ ದೃಷ್ಟಿಯೆದುರಿಗೆ ಹಾಯ್ದುಹೋದುವು. ತಿನ್ನಲು ಅನ್ನವಿಲ್ಲದೆ, ಕುಡಿಯಲು ನೀರಿಲ್ಲದೆ ಪಟಪಟನೆ ಸತ್ತು ಬೀಳುತ್ತಿರುವ ಮಾನವ ಪ್ರಾಣಿಗಳು; ಮೇವು-ನೀರಿಲ್ಲದೆ ಬಿದ್ದುಕೊಂಡಲ್ಲೇ ಅಸ್ಥಿಪಂಜರವಾಗುತ್ತಿರುವ ದನ-ಕರುಗಳು; ಮನೆಯಲ್ಲಿ ಉಳಿದುದನ್ನೆಲ್ಲ ನಾಲ್ಕು ಕಾಸಿಗೆ ಮಾರಿಕೊಂಡು, ಹೆಂಡಿರು–ಮಕ್ಕಳನ್ನು ಕಟ್ಟಿಕೊಂಡು ಊರಿಂದೂರಿಗೆ ಅಲೆಯುತ್ತಿರುವ ದರಿದ್ರ ಜನ! ಆತನ ಎದೆ ಸಂತಾಪದಿಂದ ಕುದಿಯತೊಡಗಿತು. ಇದನ್ನೆಲ್ಲ ನೋಡಿಯೂ ನೋಡದಂತೆ ನೊಣ ಜಾಡಿಸುತ್ತ ಕೂತುಕೊಂಡ ಸರಕಾರ! ಮೊದಲೇ ಕೆರೆ-ಕಾಲುವೆಗಳನ್ನು ನಿರ್ಮಿಸಿ ನೀರಾವರಿ ಯೋಜನೆ ಮಾಡಿದ್ದರೆ, ಇಂತಹ ಭೀಕರ ಪರಿಸ್ಥಿತಿಯುಂಟಾಗುತ್ತಿರಲಿಲ್ಲ! ಆದರೆ ಮಾಡುವವರಾರು?–ಬಡರೈತರ ಗೋಳು ಯಾರಿಗೆ ಬೇಕಿದೆ? ಅವರು ಕೂಳು-ನೀರಿಲ್ಲದೆ ದೇಶಾಂತರ ಹೊರಟರೂ ಶ್ರೀಮಂತರು ಸುಖವಾಗಿ ತಮ್ಮ ವಿಲಾಸದಲ್ಲಿ ಮಗ್ನರಾಗಿದ್ದಾರೆ. ಹೊಟ್ಟೆಗಿಲ್ಲದೆ ಮನೆ ಬಾಗಿಲಿಗೆ ಬಂದವರನ್ನು ಬರಿಗೈಲಿ ಸಾಗಹಾಕಿ ತಾವು ಒಳಗೆ ಕುಳಿತು ಮೃಷ್ಟಾನ್ನ ಹೊಡೆಯುತ್ತಾರೆ!

ಪುನಃ ಅವನ ಅಂತರ್ದೃಷ್ಟಿಯೆದುರಿನಲ್ಲಿ ಆ ಹಳ್ಳಿಯುವಳ ಕರುಣಾಜನಕ ಮೂರ್ತಿ ತಲೆದೋರಿತು.

ಬಾಯಿಯಲ್ಲಿದ್ದ ಸಿಗರೇಟನ್ನು ಬಿಸುಟಬಿಟ್ಟು ಶಿವಣ್ಣ ಪತ್ನಿಯಕಡೆ ಹೊರಳಿದ! ಅವಳೆದುರಿನಲ್ಲಿಯೂ ಅದೇ ಚಿಹ್ನೆ.

ಮಾರನೆಯ ದಿನ ಸಾಯಂಕಾಲ ಶಿವಣ್ಣ ಮನೆಗೆ ಬಂದಾಗಲೂ ಬಾಗಿಲಿನಲ್ಲಿ ಮುನ್ನಾದಿನದ ದೃಶ್ಯವೆ !

ಆತನಿಗೆ ದಾರಿ ಮಾಡಿಕೊಡಲು ಅವಳು ಎದ್ದುಬಿಟ್ಟಾಗ, ಅವಳ ಕಂಕುಳಲ್ಲಿದ್ದ ಮಗುವಿನ ಕಡೆಗೆ ಅವನ ದೃಷ್ಟಿ ಹೋಯಿತು.

'ಮುಳುಗುತ್ತಿರುವವಳಿಗೆ ಭಾರವಾಗಿ ಮಗು ಬೇರೆ ಇದೆಯೆ?' ಎಂದುಕೊಳ್ಳುತ್ತ ಶಿವಣ್ಣ ವಿಷಣ್ಣ ಹೃದಯದಿಂದಲೇ ಒಳಕ್ಕೆ ಹೋದ.

ರಾತ್ರಿ ಊಟವಾದ ಬಳಿಕ ದಂಪತಿಗಳು ಮಲಗಿಕೊಂಡಿದ್ದಾಗಲೂ ಅದೇ ವಿಷಯ ಹೊರಟಿತು.

'ಮಗು ಬೇರೆ ಇದೆಯಲ್ಲ, ಅವಳಿಗೆ? ಅದನ್ನೆಲ್ಲಿ ಇಟ್ಟಿದ್ದಳಂತೆ ಇಷ್ಟುದಿನ?' ಶಿವಣ್ಣ ಕೇಳಿದ.

'ಅವರ ಊರಿನಿಂದ ಬಂದ ನಾಲ್ಕಾರು ಜನ ಸೇರಿ ಊರ ಹೊರಗಡೆ ಒಂದು ಗುಡಿಸಲು ಕಟ್ಟಿಕೊಂಡಿದ್ದಾರಂತೆ. ಅಲ್ಲಿ ಬಿಟ್ಟಿರುತ್ತಿದ್ದಳು.'

'ಅಲ್ಲಿ ಆ ಮಗುವನ್ನು ಯಾರು ನೋಡಿಕೊಳ್ಳುತ್ತಿದ್ದರು?'

'ಒಂದು ಹಣ್ಣು ಹಣ್ಣು ಮುದುಕಿ........'

'ಆ ಪಾಪದ ಮಗುವಿಗೆ ವಯಸ್ಸೆಷ್ಟು?'

'ಇನ್ನೂ ನಾಲ್ಕು ತಿಂಗಳು ತುಂಬಿಲ್ಲ.'

ನಾಲ್ಕು ತಿಂಗಳ ಹಸುಮಗುವೊಂದು ಹಾಳು ಗುಡಿಸಿಲಿನಲ್ಲಿ ಬಿದ್ದುಕೊಂಡಿರುವ ವಿಚಾರ ಶಿವಣ್ಣನ ಕರುಳಿನಲ್ಲಿ ಕಳವಳವನ್ನುಂಟುಮಾಡಿತು. ಅದರ ತಾಯಿ ಹೊಟ್ಟೆಗೆ ಸಂಪಾದಿಸಲು ಇಡೀದಿನವೆಲ್ಲಾ ಮನೆಮನೆ ತಿರುಗುತ್ತಿರುವುದು—ಮುಂದೆ ಯೋಚಿಸಲು ಕೂಡ ಅವನಿಗೆ ಮನಸ್ಸಾಗಲಿಲ್ಲ.

ಪಾರ್ವತಿ ಮೆಲ್ಲನೆ ಮಾತು ತೆಗೆದಳು!

'ಎಷ್ಟುದಿನ ಅವಳ ಕರ್ಮಕಥೆ ಕೇಳಿಕೊಂಡು ಸುಮ್ಮನಿರೋದು ಅಂದ್ರೆ? ನಮ್ಮ ಕೈಲಾದ ಸಹಾಯ ಅವಳಿಗೆ ಮಾಡಿದರೆ........'

ತಲೆದಿಂಬಿನ ಮೇಲೆ ತೋಳುಗಳನ್ನು ಹೊರಳಿಸಿ ಶಿವಣ್ಣ ಅವಳ ದೃಷ್ಟಿಗೆ ದೃಷ್ಟಿ ಸೇರಿಸಿದ.

'ಪಾಪ. ಎಷ್ಟು ಅಲೆದರೂ ಅವಳಿಗೆ ಎಲ್ಲೂ ಕೆಲಸಸಿಕ್ಕುತ್ತಿಲ್ಲ. ಏಕೋ ಏನೋ ತಿಳಿಯದು. ಆ ಬಡವಿಯ ಸಂಕಟ ಯಾರಲ್ಲೂ ಕನಿಕರ ಹುಟ್ಟಿಸಲೊಲ್ಲದು!"

ಅವಳಿಗೆ ಕೆಲಸ ಸಿಕ್ಕದಿರುವುದಕ್ಕೆ ಕಾರಣವೇನೆಂಬುದು ಆತನಿಗೆ ಛಕ್ಕನೆ ಹೊಳೆಯಿತು—ಅವಳಿನ್ನೂ ಹರೆಯದ ಹೆಂಗಸು, ಮನೆಯ ಯಜಮಾನರು ಅವಳಿಗೆ ಮನಸೋತರೇನುಗತಿಯೆಂದು ಯಜಮಾನಿಯರು ಹೆದರು

ತ್ತಿರಬಹುದು. ತಿಳಿದು ತಿಳಿದೂ ಹಾವನ್ನು ಮನೆಯಲ್ಲಿ ಸಾಕುವ ಹುಚ್ಚು ತನ ಕೂಡದೆಂದೇ ಅವರ ಭಾವನೆಯಾಗಿರಬೇಕು.

ಅಂತಹ ಭಾವನೆ ಪಾರ್ವತಿಯಲ್ಲಿಲ್ಲವಲ್ಲಾ–ಎಂದು ಯೋಚಿಸಿದಾಗ ಆತನಿಗೆ ಕೊಂಚ ಸಮಾಧಾನವಾಯಿತು. ಅದರೊಂದಿಗೆ ತನ್ನ ಚಾರಿತ್ರ್ಯ ದಲ್ಲಿ ತನ್ನ ಪತ್ನಿಗಿರುವ ಅಚಲ ವಿಶ್ವಾಸವನ್ನು ಕಂಡು ಕೊಂಚ ಅಭಿಮಾನವೂ ಎನಿಸಿತು. ಪಾರ್ವತಿ ಹೇಳುತ್ತಿದ್ದಳು ;

'ಮನೆಗೆಲಸಗಳನ್ನೆಲ್ಲಾ ನಾನೊಬ್ಬಳೇ ಮಾಡಬಲ್ಲೆ ; ಆದರೆ ಕೇವಲ ಆ ಬಡವಿಗೆ ಸಹಾಯ ಮಾಡುವುದಕ್ಕಾಗಿಯೆಂದು ಆಕೆಯನ್ನು ಏಕೆ ಕೆಲ ಸಕ್ಕೆ ಕರೆದುಕೊಳ್ಳಬಾರದು ? ಕಸ ಮುಸುರೆ, ಬಟ್ಟೆ ತೊಳೆಯುವುದು ಇತ್ಯಾದಿ ಮನೆಗೆಲಸಗಳೆಲ್ಲವನ್ನು ನೋಡಿಕೊಳ್ಳುತ್ತಾಳೆ. ಅವಳಿಗೆ ನಾವು ಸಂಬಳ ವನ್ನು ಕೊಡಬೇಕಾಗಿಲ್ಲ. ಎರಡು ಹೊತ್ತು ಊಟಕ್ಕೆ ಹಾಕಿದರೆ ಸಾಕು. ಬೆಳಗಿನಿಂದ ಸಾಯಂಕಾಲದವರೆಗೂ ದುಡಿಯುವುದಾಗಿ, ಆಕೆ ಹೇಳು ತ್ತಾಳೆ...........'

'ಅದೇನೋಸರಿ ! ಅವಳು ದುಡಿಯಲು ಸಿದ್ಧಳಾಗಿಯೆ ಇದ್ದಾಳೆ. ಆದರೆ–' ಶಿವಣ್ಣನೆದುರಿಗೆ ತನ್ನ ಸ್ವಂತದ ಆರ್ಥಿಕ ಪರಿಸ್ಥಿತಿ ಭೂತದಂತೆ ಬಂದುನಿಂತಿತು. ಬೆಳಗಿನಿಂದ ಸಂಜೆಯವರೆಗೆ ಕೆಲಸ ಮಾಡಿದರೆ, ತಿಂಗ ಳಿಗೆ ದೊರೆಯುವುದು ಬರೀ ಇಪ್ಪತ್ತೈದು ರೂಪಾಯಿ ! ಈ ಇಪ್ಪತ್ತೈದೂ ರೂಪಾಯಿಗಳಲ್ಲಿ ಮನೆಬಾಡಿಗೆ ಊಟ ತಿಂಡಿ ಬಟ್ಟೆ–ಬರೆ ಎಲ್ಲವೂ ಆಗಬೇಕು. ಅದರಲ್ಲೂ ಕಾಳುಕಡ್ಡಿ ವಿಪರೀತ ತುಟ್ಟಿಯಾಗಿರುವ ಈ ಕಾಲದಲ್ಲಿ ಸಂಸಾರವನ್ನು ಸುಲಲಿತವಾಗಿ ಸಾಗಿಸಬೇಕಾದರೆ ಕಣ್ಣೀರು ಕೆನ್ನೆಗಿಳಿಯುವ :ಸ್ಥಿತಿ ! ಹೇಗೋ ಎರಡು ಹೊಟ್ಟೆಗಳು ತುಂಬುತ್ತಿವೆ. ತಮ್ಮಿಬ್ಬರ ಸಂಸಾರ ಇದ್ದುದರಲ್ಲಿಯೇ ಸುಖಮಯವಾಗಿ ಸಾಗುತ್ತಿದೆ. ಅದರಲ್ಲಿ ಮೂರನೆಯವಳೊಬ್ಬಳು ಬಂದು ಸೇರಿದರೆ....?

ಆಕೆಗೆ ಸಂಬಳವೆಂಬ ಹೆಸರಿನಲ್ಲಿ ಹಣ ಕೊಡಬೇಕಾಗಿಲ್ಲ. ಅದೇನೋ ನಿಜ ! ಆದರೆ ಊಟಕ್ಕೆ ವೆಚ್ಚವಂತೂ ಬಂದೇ ಬರುತ್ತದಲ್ಲ. ತೀರಕಡಿಮೆ ಯೆಂದರೂ ಆರೇಳು ರೂಪಾಯಿಗಳಾದರೂ ಆಗುತ್ತದೆ ! ಅದರ ಜೊತೆಗೆ—

ಅಂದು ಸಾಯಂಕಾಲ ಅವಳ ಕಂಕುಳಲ್ಲಿ ಕಂಡ ಆ ಮಗುವಿನ ಮೂರ್ತಿ ಶಿವಣ್ಣನ ದೃಷ್ಟಿಯೆದುರಿಗೆ ತಲೆದೋರಿತು. ಅವಳಿಗೆ ಹೊಟ್ಟೆಗೆ ಹಾಕಿ ಆ ಮಗುವನ್ನು ಹಾಗೆಯೆ ಬಿಡಲಾಗುತ್ತದೆಯೇ? ಅದಕ್ಕೆ ಹಾಲು ಬೇಕು. ಆ ಹಾಲಿಗೆ ಹಣ ಬೇಕು. ಅವಳಿಗೆ ಸಂಬಳ ಕೊಡದಿದ್ದರೆ ಹಣವೆಲ್ಲಿ ಬಂದೀತು? ಹಾಲಿಲ್ಲದೆ ಹೋದರೆ ಮಗು ಹೇಗೆ ಉಳಿದೀತು?

ತನ್ನ ಆರ್ಥಿಕ ದುಃಸ್ಥಿತಿಯ ಚಿತ್ರ ಕಣ್ಣಿನೆದುರು ಕಟ್ಟುತ್ತಲೆ ಆತನಿಗೆ ಸಹಿಸಲಸದಳವಾದ ವೇದನೆಯುಂಟಾಯಿತು. ನೀರಿಲ್ಲದೆ ಬತ್ತಿ ಹೋಗಿರುವ ನದಿಯೂ, ಜೇಬಿನಲ್ಲಿ ಕಾಸಿಲ್ಲದವನ ಸಹಾನುಭೂತಿಯೂ ಒಂದೇ–ಎಂದು ಅವನಿಗೆನ್ನಿಸಿತು. ಅವರೊಂದಿಗೆ ಈ ಬಗೆಯ ದುಃಸ್ಥಿತಿಯುಂಟಾಗಲು ಕಾರಣವಾದ ಸಮಾಜದ ವಿಷಮ ಆರ್ಥಿಕ ರಚನೆಯ ಬಗ್ಗೆ ಅವನ ಎದೆಯಲ್ಲಿ ಜ್ವಾಲಾಮುಖಿ ಉರಿದೆದ್ದಿತು. ಆದರೆ ಈಗ ಆ ಉರಿಯ ಉಪಯೋಗವೇನೂ ಇರಲಿಲ್ಲ. ಸದ್ಯ ತನ್ನೆದುರು ಬಂದು ನಿಂತಿರುವ ಸಮಸ್ಯೆಯನ್ನು ಆತನು ಪರಿಹರಿಸಲೇ ಬೇಕಾಗಿದ್ದಿತು.

ಪಾರ್ವತಿ ಹೇಳುತ್ತಿದ್ದಳು.

‘ನಮ್ಮ ಸ್ಥಿತಿ ಹೇಗಿದೆಯೆಂಬುದು ನನಗೂ ಗೊತ್ತು. ಅದನ್ನು ಮರೆತುಬಿಟ್ಟು ನಾನು ಬೇರೆಯವರಿಗೆ ಸಹಾಯ ಮಾಡಲು ಹೋಗುತ್ತೇನೆಂದು ತಿಳಿಯಬೇಡಿ; ಆದರೆ ಮನಸ್ಸು ತಡೆಯಲಿಲ್ಲ. ನಮ್ಮಲ್ಲಿ ನಾಲ್ಕು ರೊಟ್ಟಿಯಿದ್ದರೆ ಅವಳೂ ಒಂದು ತಿನ್ನಲಿ. ಪಾಪ! ಅವಳ ಸಂಕಟ ನೋಡಿದರೆ ನನಗೆ ಕುತ್ತಿಗೆಯಲ್ಲಿ ಅನ್ನ ಇಳಿಯೋದಿಲ್ಲ. ಅದಕ್ಕಾಗಿ........’

‘ನಮ್ಮಲ್ಲಿ ನಾಲ್ಕು ರೊಟ್ಟಿಯಿದ್ದರೆ ಅವಳು ಒಂದು ತಿನ್ನಲಿ!’

ಅವಳ ಈ ನುಡಿ ಅವನ ಎದೆಯಲ್ಲಿ ಮಿಂಚಿನಂತೆ ಪ್ರವೇಶಿಸಿತು. ಹಠಾತ್ತಾಗಿ, ಅವನಿಗೆ ಟಾಲ್‌ಸ್ಟಾಯಿಯವರ ಅಮೃತ ವಾಣಿಯೊಂದರ ಸ್ಮರಣೆಯಾಯಿತು.

“ಬಡವರ ದುಃಖಗಳನ್ನು ಬಡವರೇ ತಿಳಿಯಬಲ್ಲರು. ನಿಮ್ಮಲ್ಲಿ ನಾಲ್ಕು ಕೋಟು ಇದ್ದರೆ ಅವರಿಗೊಂದು ಕೊಡಿ. ಹೊದೆಯಲು ಕಂಬಳಿ

ಯಿಲ್ಲದೆ ಬಡವರು ಚಳಿಯಲ್ಲಿ ಸಾಯುತ್ತಿದ್ದಾಗ, ನಿಮ್ಮಲ್ಲಿ ನಾಲ್ಕು ಕಂಬಳಿ ಇದ್ದರೆ ಅವರಿಗೊಂದು ಕೊಡಿ.!'

ಶಿವಣ್ಣ ಹೆಚ್ಚು ಮಾತನಾಡಲಿಲ್ಲ.

'ಆಗಲಿ ಪಾರೂ, ನಾಳೆಯಿಂದ ಅವಳಿಗೆ ಬರಹೇಳು!' ಎಂದ.

೪

ನಿಂಗಮ್ಮ ಅವರ ಮನೆಗೆ ಕೆಲಸಕ್ಕೆ ಸೇರಿ ಒಂದು ತಿಂಗಳು ಕಳೆದು ಹೋಗಿದ್ದಿತು. ಅಷ್ಟರಲ್ಲಿಯೆ ಆಕೆ ದಂಪತಿಗಳಿಬ್ಬರಿಗೂ ಅಚ್ಚುಮೆಚ್ಚಿನವಳಾಗಿ ಬಿಟ್ಟಿದ್ದಳು. ಅವಳು ಕೆಲಸದವಳೆಂದು ಅವರು ಭಾವಿಸಿಕೊಂಡಿರಲೇ ಇಲ್ಲ-ಸಂಸಾರದಲ್ಲಿ ಅವಳೂ ಒಬ್ಬ ಪಾಲುಗಾರ್ತಿಯೆಂದೇ ಅವರು ತಿಳಿದಿದ್ದರು.

ಬೆಳಗಿನಲ್ಲಿ ಅವರ ಮನೆಗೆ ಬಂದುಬಿಟ್ಟರೆ ನಿಂಗಮ್ಮ ಎಲ್ಲ ಕೆಲಸಗಳನ್ನೂ ತೀರಿಸಿಕೊಂಡು, ಸಾಯಂಕಾಲ ಊಟಮಾಡಿ ತನ್ನ ಗುಡಿಸಿಲಿಗೆ ಹೋಗುತ್ತಿದ್ದಳು. ಇದುವರೆಗೆ ಮನೆಯಲ್ಲಿ ಒಬ್ಬಳೇ ಆಗಿ ಬೇಜಾರು ಪಟ್ಟು ಕೊಳ್ಳುತ್ತಿದ್ದ ಪಾರ್ವತಿಗೆ ಅವಳ ಜೊತೆ ಸಿಕ್ಕ ಬಳಿಕ, ಪ್ರೀತಿಯ ತಂಗಿಯೊಬ್ಬಳು ಬಂದಷ್ಟು ಸಂತೋಷವಾಯಿತು. ಮಾತುಕತೆ ನಡೆದಿರುವಾಗಲೆ ಮನೆಗೆಲಸವೆಲ್ಲ ಮುಗಿದುಹೋಗುತ್ತಿತ್ತು. ಶಿವಣ್ಣನಿಗೆ ಸಮಯಕ್ಕೆ ಸರಿಯಾಗಿ ಸ್ನಾನಕ್ಕೆ ಬಿಸಿಬಿಸಿ ನೀರು. ಅದಾದೊಡನೆಯೆ ತಿಂಡಿ-ಕಾಫಿ. ಮನೆಗೆ ಬರುತ್ತಲೆ ಬಿಸಿಬಿಸಿ ಊಟ. ಎಲ್ಲವೂ ನಿಯಮಿತವೇಳೆಗೆ ದೊರೆಯತೊಡಗಿತು. ಪಾರ್ವತಿಯ ಸೋಮಾರಿತನಕ್ಕಾಗಿ ಶಿವಣ್ಣ ಆಗಾಗ ರೇಗುವುದೂ ತಪ್ಪಿಹೋಯಿತು. ತರುಣ ದಂಪತಿಗಳ ಜೀವನದಲ್ಲಿ ಒಂದು ನೆಮ್ಮದಿ ಉಂಟಾಯಿತು.

ಆದರೆ ಈ ನೆಮ್ಮದಿ ಬಹುಕಾಲ ಉಳಿಯುವಂತಿರಲಿಲ್ಲವೇನೋ! ಮಧ್ಯೆ ಮಧ್ಯೆ ತೊಂದರೆ, ತಾಪತ್ರಯಗಳೂ ಇಣುಕಿ ಹಾಕಲಾರಂಭಿಸಿದುವು.

ಇಪ್ಪತ್ತು ವರ್ಷ ವಯಸ್ಸಿನ ತರುಣ ಸ್ತ್ರೀಯೊಬ್ಬಳು ಯಾವಾಗಲೂ

ಅವರ ಮನೆಯಲ್ಲಿರುವುದನ್ನು ಆ ಬೀದಿಯ ಸಾಧ್ವಿಯರನೇಕರಿಗೆ ನೋಡ ಲಾಗಲಿಲ್ಲ. ಅವರ ಹರಟೆಗೆ ಬೇರೆ ವಿಷಯಗಳ ಕೊರತೆಯಾದಾಗಲೆಲ್ಲ ಶಿವಣ್ಣನ ಈ ನೂತನ ಕೆಲಸಗಿತ್ತಿಯ ವಿಷಯವೇ ಚರ್ಚಿಸಲ್ಪಡತೊಡಗಿತು. ವಿವಾಹಿತ ಪುರುಷನೊಬ್ಬ ಈ ರೀತಿ ಪ್ರತ್ಯಕ್ಷವಾಗಿಯೇ 'ಅನಾಚಾರ' ನಡೆಯಿಸುವುದನ್ನು, ನೋಡಿಯೂ ನೋಡದವರಂತೆ ಸುಮ್ಮನಿರಲು ಸಮಾಜದ ಆ ಆಧಾರ ಸ್ತಂಭಗಳಿಗಾಗಲಿಲ್ಲ. ಸರಿ. ಬೀದಿಯಲ್ಲೆಲ್ಲಾ ಹುಚ್ಚು ಬೊಬ್ಬೆಗಾರಂಭವಾಯಿತು. ಅವರ ಮನೆಯ ಅಕ್ಕ ಪಕ್ಕದಲ್ಲಿಯ ಸ್ತ್ರೀಯರಂತೂ ಪಾರ್ವತಿಯ ಎದುರಿನಲ್ಲೇ ಪಿಸುಮಾತುಗಳಿಗಾರಂಭಿಸಿದರು. ನಾಲ್ಕು ಮಕ್ಕಳನ್ನು ಹೆತ್ತು ಅನುಭವಶಾಲಿಗಳಾಗಿದ್ದ ಪತಿವ್ರತೆಯರಲ್ಲಿ ಕೆಲವರು, ಅವಳನ್ನು ಗುಟ್ಟಾಗಿ ಕರೆದು ಹಿತವಾದವನ್ನು ಹೇಳಿದರು.

'ತಂಗೀ ನಿನಗೆ ತಿಳಿಯದಮ್ಮಾ; ಎಲ್ಲಿಯಾದರೂ ಉಂಟೇ! ಗಂಡಸರನ್ನು ಎಂದಿಗೂ ನಂಬಬಾರದು ಕಣೇ ತಾಯಿ! ಅದರಲ್ಲೂ ಮನೇಲಿ ತರುಣ ಸ್ತ್ರೀಯೊಬ್ಬಳನ್ನು—ಅದೂ ಗಂಡ-ಗಿಂಡ ಯಾರೂ ಗತಿಯಿಲ್ಲದವಳನ್ನು ಎಂದಿಗೂ ಇಟ್ಟುಕೊಳ್ಳಬಾರದು! ಹೆಣ್ಣು ಹೆಣ್ಣೇ! ಗಂಡು ಗಂಡೇ! ತಿಳಿದು ತಿಳಿದೂ ನೀನು ನಿನ್ನ ಮನೇಲಿ ಭೂತ ಹೊಗಿಸಿಕೊಳ್ಳಬೇಕೇ ಅಮ್ಮಾ?—ಹೊರಗಿನ ದೆವ್ವ ಬಂದು ಮನೆಯ ದೆವ್ವನ್ನ ಓಡಿಸಿತಂತೆ! ಹಾಗಾದೀತು ನಿನ್ನ ಪಾಡು? ಈಗಲೇ ಎಚ್ಚರಾಗಿರು ತಿಳೀತೆ?"

'ತಿಳಿಯಿತು' ಎಂದು ತಲೆ ಅಲುಗಾಡಿಸಿ ಪಾರ್ವತಿ ಮೌನವಾಗಿ ಮನೆಗೆ ಬರುತ್ತಿದ್ದಳು. ಆದರೆ ಅವರು ಈ ರೀತಿ ಏತಕ್ಕಾಗಿ ಆಡುತ್ತಿರುವರೆಂಬುದೇ ಅವಳಿಗೆ ತಿಳಿಯಲಿಲ್ಲ. ಅವರ ಮಾತು ಕೇಳಿದಾಗಲೆಲ್ಲ ಅವಳ ತಲೆ ಕುದಿಯುತ್ತಿತ್ತು. ಪತಿಯ ಚಾರಿತ್ರ್ಯದ ಬಗ್ಗೆ ಅವಳಲ್ಲಿ ಕೊಂಚವೂ ಸಂದೇಹವಿರಲಿಲ್ಲ. ಇಂತಹ ನೂರಾರು ಹೆಂಗಸರು ಸಾವಿರಾರು ಮಾತು ಊದಿದರೂ ಆಕೆ ಅವನ ಬಗ್ಗೆ ಸಂಶಯಪಟ್ಟುಕೊಳ್ಳುವುದು ಸಾಧ್ಯವಿರಲಿಲ್ಲ. ಆದರೆ ಜನರ ಮುಖ ಕಟ್ಟುವುದು ಹೇಗೆಂಬುದೇ ಅವಳಿಗೆ ಸಮಸ್ಯೆಯಾಗಿತ್ತು. ಇದೇರೀತಿ ದಿನವೂ ಬೊಬ್ಬೆಗಾರಂಭವಾದಲ್ಲಿ, ತಾವು ಈ ಮನೆಯಲ್ಲಿ—ಅದೇಕೆ—ಈ ಬೀದಿಯಲ್ಲಿರುವುದೂ ಸಹ ಕಷ್ಟವಾಗುತ್ತದೆ; ಮುಂದೆ?

ನಿಂಗಮ್ಮನ ಕಿವಿಗೂ ಸುಳ್ಳು ಆರೋಪ ಬೀಳದಿರಲಿಲ್ಲ. ತಾನು ಅಪರಾಧಿಯಾಗಿರದಿದ್ದರೂ, ಈ ನಿರುದ್ಯೋಗಿ ಹೆಂಗಸರು ತನ್ನನ್ನು ಮಹಾ ಅಪರಾಧಿನಿಯಾಗಿ ತಿಳಿದು ಅಪಪ್ರಚಾರ ನಡೆಸಿದುದಕ್ಕಾಗಿ, ಆಕೆ ಮನಸ್ಸಿನಲ್ಲೇ ದುಃಖಿಸುತ್ತಿದ್ದಳು. ಹಳ್ಳಿಯಲ್ಲಿ ಈ ಬಗೆಯ ಕುತ್ಸಿತ ಆರೋಪಗಳನ್ನಾಕೆ ಎಂದೂ ಕೇಳಿರಲಿಲ್ಲ. ಪಟ್ಟಣದಲ್ಲಿಯ ಸ್ತ್ರೀಯರಲ್ಲಿ ಇಂತಹ ನೀಚ ಮನೋವೃತ್ತಿಯನ್ನು ನೋಡಿದಾಗ ಅವಳಿಗೆ ಆಶ್ಚರ್ಯವೂ ಆಯಿತು; ಜುಗುಪ್ಸೆಯೂ ಆಯಿತು.

ಅವರ ಕುತ್ಸಿತ ನುಡಿಗಳಿಗೆ ಭಯಪಟ್ಟು ಶಿವಣ್ಣನ ಮನೆಯನ್ನು ಬಿಟ್ಟು ಹೊಗುವಂತಹ ಅಳ್ಳೆದೆಯೂ ಅವಳದಾಗಿರಲಿಲ್ಲ. 'ಜನ ಬೇಕಾದ್ದನ್ನು ಆಡಿಕೊಳ್ಳಲಿ, ನಾವು ಚೆನ್ನಾಗಿದ್ದರಾಯಿತು. ಆಡಿಕೊಳ್ಳುವವರಿಗೇನು? ನಮ್ಮ ಸಂಕಟ ಅವರೇನು ಬಲ್ಲರು? ಇಂದು ನಾನು ಮನೆಯಿಂದ ಹೊರಟು ಬಿಟ್ಟರೆ, ಹತ್ತಿರ ಕರೆದು ಒಂದು ಚೂರು ರೊಟ್ಟಿ ಕೊಡುವವರಾರೂ ಇಲ್ಲ. ಈ ಊರಲ್ಲಿ ಶಿವಣ್ಣನವರು ನಮ್ಮ ಭಾಗದ ದೇವರಂತಿದ್ದಾರೆ. ಅಂಥವರಿಗೆ ಈ ಜನ ಈರೀತಿ ಆಡಿಕೊಳ್ಳುವುದು! ಆನೆಯೊಂದಕ್ಕೆ ನಾಯಿಗಳು ಬೊಗಳಿದ ಹಾಗೆಯೇ ಈ ಜನರ ರೀತಿ!...........' ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡು, ಉಕ್ಕಿ ಬರುವ ವ್ಯಥೆಯನ್ನು ಕೊಂಚ ಕಡಿಮೆ ಮಾಡಿಕೊಳ್ಳುತ್ತಿದ್ದಳು.

ಶಿವಣ್ಣನಿಗೆ ಮಾತ್ರ ಈ ಸಮಾಚಾರವೇನೂ ತಿಳಿಯದು. ಆತನೆದುರಿನಲ್ಲಿ ಈ ರೀತಿ ಮಾತಾಡುವ ಸಾಹಸ ಯಾವ ಸ್ತ್ರೀಗೂ ಇರಲಿಲ್ಲ. ಪಾರ್ವತಿಯೂ ಅವನೆದುರಿಗೆ ಇದಾವುದನ್ನೂ ಹೇಳಬಯಸಲಿಲ್ಲ. 'ಅವರ ಕುತ್ಸಿತ ನುಡಿಗಳಿಂದ ತನಗೆ ಗಾಯವಾದುದೇ ಸಾಕು; ಇನ್ನು ಅವನಿಗೂ ಏಕೆ ವ್ಯರ್ಥವಾಗಿ ನೋವುಂಟುಮಾಡಬೇಕು?' ಎಂದುಕೊಂಡು ಅವಳು ಮೌನವಾಗಿದ್ದಳು.

ಎರಡು ತಿಂಗಳಿಂದ ಬಾರದಿದ್ದ ಮಳೆ ಒಂದು ದಿನ ಅಕಸ್ಮಾತಾಗಿ ಬಂದು ಬಿಟ್ಟಿತು. ಎರಡು ಗಂಟೆಗಳಕಾಲ ಒಂದೇ ಸಮನೆ 'ಧೋ-ಧೋ' ಎಂಬ ಸದ್ದೇಸದ್ದು! ಶಿವಣ್ಣ ಇನ್ನೂ ಮನೆಗೆ ಬಂದಿರಲಿಲ್ಲ. ನಿಂಗಮ್ಮ ಇನ್ನೂ

ತನ್ನ ಗುಡಿಸಿಲಿಗೆ ಹೋಗಿರಲಿಲ್ಲ ಮಳೆಯ ಅಬ್ಬರ ಹೆಚ್ಚಿದಂತೆ ಅವಳ ಎದೆಯ ಹೊಡೆತವೂ ಹೆಚ್ಚತೊಡಗಿತು. ಪಾರ್ವತಿ ಎಷ್ಟುಬಗೆಯಾಗಿ ಸಮಾಧಾನ ಹೇಳಿದರೂ. ಆ ಮಾತೃ ಹೃದಯದ ದುಃಖ ಕಡಿಮೆಯಾಗಲಿಲ್ಲ.

ಮಳೆಯ ಜೋರು ಹೆಚ್ಚುತ್ತಲೂ ಪಾರ್ವತಿಗೂ ಭಯ ಹುಟ್ಟಿಕೊಂಡಿತು. ಇಂತಹ ಭಾರಿ ಮಳೆಗೆ ಆ ಪುಟ್ಟಗುಡಿಸಲು ಎಲ್ಲಿ ತಡೆದೀತು? ಈಗಾಗಲೇ ಕಿತ್ತು ಹೋಗಿಬಿಟ್ಟಿರಬಹುದು ಎಂದೂ ಅವಳಿಗೆನ್ನಿಸದಿರಲಿಲ್ಲ.

ಮಳೆ ನಿಲ್ಲುವ ಲಕ್ಷಣವೇನೋ ಕಾಣಿಸಲಿಲ್ಲ. ಅದಕ್ಕೆ ಪ್ರತಿಯಾಗಿ ಇನ್ನೂ ಜೋರಾಯಿತು. ನಿಂಗಮ್ಮ ನಿಜಕ್ಕೂ ಹೆದರಿದಳು! ಪಾರ್ವತಿ ತಡೆದರೂ ಗಮನಿಸಲಿಲ್ಲ. ಒಂದೇಟಿಗೆ ಮನೆಯಿಂದ ಧಾವಿಸಿದಳು. ಗುಡಿಸಲು ಹಾರಿಹೋಗಿದ್ದರೆ? ನೀರಿನ ಪ್ರವಾಹಕ್ಕೆ ಸಿಕ್ಕಿ ಕೂಸು ಕೊಚ್ಚಿಹೋಗಿದ್ದರೆ?' ಮುಂದೆ ಯೋಚನೆಮಾಡುವುದಕ್ಕೆ ಅವಳಿಗಾಗಲಿಲ್ಲ. ಮಳೆಯಲ್ಲಿ ತೋಯಿಸಿಕೊಳ್ಳುತ್ತ ಉಗಿಬಂಡಿಯಂತೆ ತನ್ನ ಗುಡಿಸಿಲಿನ ಕಡೆ ಧಾವಿಸಿದಳು.

ಒಂದು ತಾಸಿನ ತರುವಾಯ ಮಳೆ ನಿಂತುಹೋಯಿತು.

ಶಿವಣ್ಣ ಮನೆಗೆಬಂದು ನೋಡಿದರೆ, ನಿಂಗಮ್ಮನೂ ಅವಳ ಆ ಪುಟ್ಟ ಮಗುವೂ, ಮೊಗಸಾಲೆಯಲ್ಲಿ ಬಿಡಾರ ಹೂಡಿದಾರೆ! ಆತನಿಗೆ ಕೊಂಚ ದಿಗಿಲಾಗದಿರಲಿಲ್ಲ.

'ಏನುಬಂದೆ ನಿಂಗಮ್ಮಾ, ಈ ಹೊತ್ತಿನಲ್ಲಿ?' ಎಂದ.

ಅವಳು ಉತ್ತರವೀಯುವುದರೊಳಗಾಗಿಯೆ ಪಾರ್ವತಿ ಹೇಳಿದಳು.

'ಮಳೆಗೆ ಸಿಕ್ಕ ಅವರ ಗುಡಿಸಲೆಲ್ಲ ಬಿದ್ದುಹೋಯ್ತು. ಮಗು ನೀರಿನಲ್ಲಿ ನೆನೆದುಹೋಗಿತ್ತು. ನಿಂಗಮ್ಮ ಬೇಗನೆ ಹೋದಳೆಂದು ಕೂಸು ಉಳಿದುಕೊಂಡಿತು. ಇಲ್ಲವಾದರೆ ಅಲ್ಲಿಯೇ........'

'ಸರಿಸರಿ. ಸದ್ಯ ಮಗುವಿಗೇನೂ ಅಪಾಯವಿಲ್ಲ ತಾನೇ?'

'ಕೊಂಚ ಜ್ವರ ಬಂದಿದೆ!'

ಶಿವಣ್ಣ ಮಗುವಿನಬಳಿ ಹೋಗಿ ಅದರ ಎದೆಗೆ ಕೈಯಿರಿಸಿ ನೋಡಿದ. ಜ್ವರ 'ಕೊಂಚ' ಮಾತ್ರವಲ್ಲ. ಚೆನ್ನಾಗಿಯೆ ಏರಿ ಬಂದಿತ್ತು. ಐದು ತಿಂಗಳುಗಳ ಎಳೆಮಗು ಅಂತಹ ಭಾರಿ ಮಳೆಗೆ ಸಿಕ್ಕಿದರೆ ಜ್ವರ ಬಾರದಿದ್ದೀತೆ?

ಶಿವಣ್ಣನೆದುರು ಹೊಸದೊಂದು ಪ್ರಶ್ನೆ ತಲೆದೋರಿತು. ಈಗಲೇ ಆ ಮಗುವಿಗೆ ಔಷಧಿ ಕೊಡಿಸಬೇಕೆಂದರೆ ಹತ್ತಿರ ಹಣವಿಲ್ಲ. ಡಾಕ್ಟರನ್ನು ಕರೆದುಕೊಂಡು ಬಂದರೆ ಅವನ ಭೆಟ್ಟಿಗಾಗಿಯೇ ಮೂರು ರೂಪಾಯಿ ಎಣಿಸಬೇಕು ಮೊದಲು. ಶಿವಣ್ಣನ ಜೇಬು ತೆರವಾಗಿದ್ದಿತು. ನಾಳೆ ಬ್ಯಾಂಕಿನಿಂದ ಹಣ ತೆಗೆಯಿಸಿ. ಡಾಕ್ಟರನ್ನು ಕರೆಯಿಸಬಹುದು. ಔಷಧಿಯನ್ನು ಕೊಡಿಸಬಹುದು ಎಂದುಕೊಂಡು, ಸಮಾಧಾನಮಾಡಿಕೊಂಡು, ಮಗುವನ್ನು ಬೆಚ್ಚಗೆ ಮಲಗಿಸಹೇಳಿ ತನ್ನ ಕೊಟಡಿಗೆ ನಡೆದ.

ಮಾರನೆಯದಿನ ಇನ್ನೂ ಶಿವಣ್ಣ ಹಾಸುಗೆಬಿಟ್ಟು ಎದ್ದಿರಲಿಲ್ಲ ಹೊರಗಡೆ ಏನೋ ವಿಪರೀತ ಸದ್ದಾಗುತ್ತಿತ್ತು. ಅನೇಕ ಜನ ಸ್ತ್ರೀಯರ ಕಂಠಗಳು ಒಂದೇ ಸಲಕ್ಕೆ ಕಿರಿಚಿಕೊಳ್ಳುತ್ತಿದ್ದಹಾಗೆ ಕೇಳಿಸುತ್ತಿತ್ತು.

'ಇದೇನುಬಂತು ಪೀಕಲಾಟ' ಎಂದು ಕೊಳ್ಳುತ್ತ ಶಿವಣ್ಣ ಎದ್ದುಬಿಟ್ಟು ಮೊಗಸಾಲೆಗೆ ಬಂದು ನೋಡಿದರೆ ಪಾರ್ವತಿ ಬಾಗಿಲಲ್ಲಿ ನಿಂತುಕೊಂಡಿದ್ದಾಳೆ! ಹೊರಗಡೆ ನಾಲ್ಕಾರು ಜನ ಸ್ತ್ರೀಯರು ನಿಂತುಕೊಂಡು ಅಕರಾಳ ವಿಕರಾಳವಾಗಿ ಮುಖತಿರುಹಿಸುತ್ತ, ವಿಚಿತ್ರವಾಗಿ ಕೈ ಬೀಸುತ್ತ ಅವಳನ್ನು ಬೈಯುತ್ತಿದ್ದಾರೆ.

ಅವರ ಮಾತುಗಳೆಲ್ಲವೂ ಆತನಿಗೆ ಅರ್ಥವಾಗಲಿಲ್ಲ. ಕೆಲವು ಮುಕ್ತಾಫಲಗಳು ಮಾತ್ರ ಕೇಳಿಸಿದುವು.

'ರಾತ್ರಿಯೆಲ್ಲಾ ಆ ಬಸವಿ ಇಲ್ಲೇ ಇದ್ದಳಲ್ಲವೆ? ನೋಡಿದೆಯಾ ರಾಧಾಬಾಯಿ, ನನಗೆ ಮೊದಲೇ ಇವೆಲ್ಲಾ ಗೊತ್ತಿತ್ತು. ಅಬ್ಬಾ! ನಮ್ಮ ಕಣ್ಣುಗಳೆದುರಿನಲ್ಲಿ! ನಮ್ಮ ಮನೆಯ ಪಕ್ಕದಲ್ಲಿ—ಇಂಥ ಅನಾಚಾರ!—'

ಅವರ ಕಟಾಕ್ಷ ಯಾವ ವಿಷಯದ ಕಡೆಗೆ ಇದೆಯೆಂಬುದು ಹೊಳೆಯುತ್ತಲೂ ಶಿವಣ್ಣನಿಗೆ ನಿಂಗಮ್ಮನ ಸ್ಮರಣೆಯಾಯಿತು. ಮೊಗಸಾಲೆಯಲ್ಲಿ ಮಗುವಿನೊಂದಿಗೆ ಮಲಗಿಕೊಂಡಿದ್ದ ನಿಂಗಮ್ಮ ಅಲ್ಲಿರಲಿಲ್ಲ; ಅವಳ ಮಗುವೂ ಇರಲಿಲ್ಲ. ಅವನ ಎದೆಯ ಹೊಡೆತ ಹಠತ್ತಾಗಿ ನಿಂತುಹೋದ ಹಾಗಾಯಿತು. ಅಂತಹ ಜ್ವರದ ಕೂಸನ್ನು ಕಟ್ಟಿಕೊಂಡು ಇಂತಹ ಬೆಳಗಿನಲ್ಲೇ ಆಕೆ ಹೋದುದಾದರೂ ಎಲ್ಲಿಗೆ? ಈ ನೀಚ ಸ್ತ್ರೀಯರ ಕುತ್ಸಿತ

ಮಾತುಗಳಿಂದ ನೊಂದುಕೊಂಡು ಹೊರಟು ಹೋದಳೋ ಹೇಗೆ?—ಅವನ ಹೃದಯ ಕೋಪ–ತಿರಸ್ಕಾರಗಳಿಂದ ಉರಿಯ ತೊಡಗಿತು ಕೂಗಿದ.

'ಪಾರ್ವತಿ'

ಅವನ ಕೂಗು ಕೇಳಿಸುತ್ತಲೂ ಆ ದುರ್ಗೆಯರೆಲ್ಲ ಅಲ್ಲಿಂದ ಪಲಾಯನ ಹೇಳಿಸಿದರು. ಪಾರ್ವತಿ ಬಾಗಿಲನ್ನು ಬಿಟ್ಟು ಅವಳ ಬಳಿ ಬಂದಳು.

'ಆ ನೀಚ ಹೆಂಗಸರೊಂದಿಗೆ ಜಗಳ ಕಾಯಲು ಬುದ್ಧಿಯಿಲ್ಲವೆ ನಿನಗೆ, ಪಾರಿ?' ಎಂದು ಕೋಪದಿಂದಲೇ ಕೇಳಿದ ಶಿವಣ್ಣ.

ಅವಳ ಕಣ್ಣುಗಳೆರಡೂ ತುಂಬಿಕೊಂಡಿದ್ದುವು. ಗದ್ಗದ ಸ್ವರದಲ್ಲಿ ಹೇಳಿದಳು.

'ನಾನೇನು ಜಗಳಕ್ಕೆ ಹೋಗಲಿಲ್ಲ, ತಾವಾಗಿಯೇ ಬಯ್ದು ಕೊಳ್ಳುತ್ತಾ ಗಲಾಟೆ ಮಾಡಿದರು. ಅದಕ್ಕಾಗಿ........'

'ಸರಿ! ಸರಿ! ಯಾರಿಗಾದರೂ ಏನಾದರೂ ಆಡಿಕೊಳ್ಳೋದಕ್ಕೆ ಅವರಪ್ಪನ ಗಂಟೇನು ಹೋಗುತ್ತದೆ! ನಿಂಗಮ್ಮ ಎಲ್ಲಿ ಹೋದಳು? ಅವಳ ಮಗು?'

ಪಾರ್ವತಿಯ ಮುಖದಿಂದ ಮಾತು ಹೊರಡಲಿಲ್ಲ. ಅದಕ್ಕೆ ಪ್ರತಿಯಾಗಿ ಅವಳ ಕೆನ್ನೆಗಳೆರಡೂ ಕಂಬನಿಗಳೊಂದಿಗೆ ಮಾತನಾಡತೊಡಗಿದುವು.

ಅವಳ ಹತ್ತಿರ ಬಂದು, ಅವಳ ಮುಖವನ್ನು ಎರಡು ಕೈಗಳಲ್ಲಿ ಹಿಡಿದುಕೊಂಡು ಶಿವಣ್ಣ ಕೇಳಿದ.

'ಇದರರ್ಥವೇನು ಪಾರೀ? ಆಕೆ ಎಲ್ಲಿಗೆ ಹೋದಳು?'

ಅವಳು ಬಿಕ್ಕುತ್ತ ಹೇಳಿದಳು.

'ಈ ಹೆಂಗಸರ ಮಾತನ್ನು ಕೇಳುತ್ತಲೆ ಆಕೆ ಇಲ್ಲಿ ನಿಲ್ಲಲಿಲ್ಲ. ತನ್ನಿಂದಾಗಿ ನಿಮ್ಮ ಮೇಲೆ ವ್ಯರ್ಥವಾಗಿ ಆರೋಪ ಬರಬಾರದೆಂದುಕೊಂಡು ಹೋಗಿಬಿಟ್ಟಳು. ನಾನು ಎಷ್ಟೋ ತಡೆದರೆ ಕೇಳಲಿಲ್ಲ. ಮಗುವನ್ನೆತ್ತಿಕೊಂಡು ಹೋಗಿಯೇ ಬಿಟ್ಟಳು.'

ಅವಳ ಮುಖವನ್ನು ಬಿಟ್ಟು ಶಿವಣ್ಣ ಕೊಂಚ ದೂರ ಸರಿದ. ಅವನ ಮುಷ್ಟಿಗಳೆರಡೂ ಕಲ್ಲಿನಂತೆ ಗಂಟಿಕ್ಕಿದುವು. ಕೇಳಿದ;

'ಮಗುವಿಗೆ ಜ್ವರ ಹೇಗಿತ್ತು ?'

'ಬೆಳಗ್ಗೆ ಇನ್ನೂ ವಿಪರೀತವಾಗಿತ್ತು. ಮೈಮುಟ್ಟಿದರೆ ಕೈ ಉರಿಯುವ ಹಾಗಿತ್ತು!'

ಆ ದಿನ ಶಿವಣ್ಣ ಕೆಲಸಕ್ಕೆ ಹೋಗಲಿಲ್ಲ. ಸಿಂಗಮ್ಮನನ್ನು ಶೋಧಿಸುವುದಕ್ಕಾಗಿ ಊರೆಲ್ಲವನ್ನೂ ಸುತ್ತಿದ.

ಸಾಯಂಕಾಲವಾಯಿತು.

ಅವಳು ಸಿಕ್ಕಲಿಲ್ಲ.

ಆ ನಂತರ ಎಂದೂ [illegible] ಅವರ ದೃಷ್ಟಿಗೆ ಬೀಳಲಿಲ್ಲ.

ಬೆಳಗಾಂವಿ ಸೆರೆಮನೆ ಡಿಸೆಂಬರ್ ೧೯೪೨.

# ಮೋಹದ ರಾತ್ರಿ!

'ಹೃದಯ ಒಂದು ; ದೇಹ ಮೂರು!'

ಸ್ವಾಮಿಯ ಆ ಮಾತು ಶಂಕರೂ ಕಿವಿಗಳಲ್ಲಿ ಒಂದೆ ಸಮನೆ ಪ್ರತಿಧ್ವನಿಸುತ್ತಿತ್ತು.

—ಆ ಮಾತು ಆಡುವಾಗ ಸ್ವಾಮಿಯ ಧ್ವನಿಯೊಂದಿಗೆ ಬಂದ ಆ ಕಂಪನ!—ನಾಲಗೆಯಿಂದ ಬಂದ ನುಡಿಯೇ ಅದು?—ಅಲ್ಲ—ಹೃದಯಾಂತರಾಳದಿಂದ ಚಿಮ್ಮಿ ಬಂದದ್ದು! ಸ್ನೇಹಸುಧೆಯೆನ್ನುವರಲ್ಲ ಅದೇ ಏನು ಇದು? ಎಷ್ಟು ಸವಿ! ಎಂಥ ಮಾಧುರಿ! ಸ್ವಾಮಿ ಆ ಮಾತು ಹೇಳಿದಾಗ ಶಂಕರೂ ಶರೀರ ಪುಲಕಿತವಾಗಿತ್ತು. ಹದಿನಾರು ವರ್ಷಗಳ ಕಾಲ ತಾವಿಬ್ಬರೂ ಅಕ್ಕರೆಯಿಂದ ಬೆಳೆಯಿಸಿಕೊಂಡು ಬಂದ ಗೆಳೆತನದ ಬಳ್ಳಿ ಹೂಬಿಟ್ಟು ಘಮಘಮಿಸುತ್ತಿದ್ದಂತೆ ಭಾಸವಾಗಿತ್ತು.

ಬೊಂಬಾಯಿಗೆ ಹೊರಟು ನಿಂತಾಗ ತನ್ನ ಕೈಲಿ ಕೈ ಇರಿಸಿ ಸ್ವಾಮಿ ಅಂದ ಮಾತು. 'ಮರೀಬೇಡ ಶಂಕರೂ, ಮನೇ ಕಡೆ ನೋಡ್ಕೊ. ಒಬ್ಬಳೇ ಇದಾಳೆ ಎನ್ನಲಾರೆ, ನೀನಿದ್ದೀ ಇರುವೆಯಲ್ಲ!.......'

ಚಿಕ್ಕಲಾಲ್‌ಬಾಗಿನವರೆಗೆ ಬಂದು ಕ್ಷಣಕಾಲ ತಡೆದು ನಿಂತ, ಶಂಕರೂ

ಮುಂದೆ ಹೋಗುವುದೇ— ಬೇಡವೇ ?— ಹೋದರೆ ?—ಪ್ರಮಾದವೇನಾದರೂ ಆದರೆ ?—ಏನೋ—ಹೇಗೊ—ಬಲ್ಲವರಾರು ?—ತನ್ನ ಮನಸ್ಸಂತೂ ತನ್ನ ಅಂಕೆಯಲಿಲ್ಲ. ಹುಚ್ಚೆದ್ದ ಜಿಂಕೆಯಂತೆ ಓಡುತ್ತಾ ಇದೆ. ಎಂಥ ಬೆಪ್ಪು ಆ ಸ್ವಾಮಿ! ಎಷ್ಟು ಸ್ನೇಹಿತರಾದರೇನಾಯ್ತು! ಒಂದೇ ಕೊಠಡಿಯಲ್ಲಿ ರಾತ್ರಿಕಾಲದಲ್ಲಿ ಸ್ವಂತ ಹೆಂಡತಿಯನ್ನು ಗೆಳೆಯನೊಂದಿಗೆ ಮಲಗಿಕೊಳ್ಳಲು ಬಿಡುವುದುಂಟೆ! ಅವನಿಗೇನೊ ನನ್ನ ಬಗ್ಗೆ ಪೂರ್ತಿ ನಂಬಿಕೆಯೆ ಇದೆ. ಅಂತಲೇ ನನ್ನನ್ನು ಅವಳ ಬಳಿ ಕಳಿಸಿದ್ದಾನೆ—ಆದರೆ—.

ಶಿಲಾಸನದ ಮೇಲೆ ಕುಳಿತುಕೊಂಡು ಶಂಕರೂ ಮೇಲಕ್ಕೆ ದೃಷ್ಟಿ ಹೊರಳಿಸಿದ.

ಅತಿದೂರದಲ್ಲಿ ತಾರೆಗಳೆರಡು ಜಾಜ್ವಲ್ಯವಾಗಿ ಹೊಳೆಯುತ್ತಿದ್ದುವು. ಪಕ್ಕದಲ್ಲೆ ಸುಂದರ ಚಂದ್ರಕೋರ. ಆ ಚಂದ್ರ—ಆ ತಾರೆ ದೃಷ್ಟಿಗೆ ಬೀಳುತ್ತಲೂ ಶಂಕರೂ ಕಂಗಳೆದುರು ಇನ್ನೊಂದು ಚಂದ್ರ—ಇನ್ನೆರಡು ತಾರೆ ಬಂದು ನಿಂತವು. ಒಂದು ರಾಜಿಯ ಮುಖ ಚಂದ್ರಮ—ಇನ್ನೆರಡು ಅವಳ ನೇತ್ರ ತಾರೆ!—

—ಅಂದು ಸಾಯಂಕಾಲ ಸ್ವಾಮಿ ಬೊಂಬಾಯಿಗೆ ಹೊರಟು ನಿಂತಾಗ ಅವಳು ತನ್ನೆಡೆಗೆ ಬೀರಿದ ಕಟಾಕ್ಷ! 'ಅಕ್ಕಪಕ್ಕದ ಮನೆಗಳಲ್ಲೆಲ್ಲಾ ಪೋಲಿಗಳ ವಾಸ. ಯಾವಾಗ ಏನು ಮಾಡುವರೊ ಭರವಸೆಯಿಲ್ಲ. ರಾಜಿಯೊಬ್ಬಳೆ, ಹೆದರಿಕೆಯಾದೀತು. ನೀನೂ ಒಂದು ವಾರ ಇಲ್ಲಿಯೆ ಮಲಗಿಕೊಂಡಿರು' ಎಂದು ಸ್ವಾಮಿ ಹೇಳಿದಾಗ ಓರೆಗಣ್ಣಿನಿಂದ ಅವಳು ತನ್ನ ಮುಖವನ್ನು ನೋಡಿದ್ದಳು. ವಿದ್ಯುದ್ದೀಪದ ಕೆಳಗಡೆ ಬಾಗಿ ನಿಂತಿದ್ದಳಾಕೆ. ಕಣ್ಣುಗಳ ಮೇಲೆ ತೀಕ್ಷ್ಣ ಬೆಳಕು ಬಿದ್ದು ಬೊಂಬೆಗಳೆರಡೂ ಥಳಥಳ ಹೊಳೆಯುತ್ತಿದ್ದವು. ಕತ್ತು ಕೊಂಚ ಅಲುಗಿದಾಗ ಮೂಗಿನಲ್ಲಿನ ನತ್ತು ಫಳಫಳನೆ ಮಿಂಚುತ್ತಿತ್ತು!

'ಮಲಗುತೀ ತಾನೆ?' ಸ್ವಾಮಿಯ ಪ್ರಶ್ನೆಯಿಂದ ತಾನು ಬೆಚ್ಚಿಬಿದ್ದು ತಲೆಯೆತ್ತಿದ್ದ.

ಎದುರನಲ್ಲಿ ಮುಗುಳುನಗೆಯ ಮಲ್ಲಿಗೆ ಅರಳಿಸುತ್ತ ನಿಂತಿದ್ದಳು

ರಾಜಿ! ಹೌದು! ಸಂಶಯವೇ ಇಲ್ಲ. ತಾನಂ ಅಲ್ಲಿಗೆ ಮಲಗಲು ಹೋದರೆ ಅವಳಿಗೂ ಸಂತೋಷವೇ ಇತ್ತು. ಮಾತನಾಡುತ್ತಿರಲಿಲ್ಲ ಆಕೆ. ನಿಜ. ಆದರವಳ ಆ ಕಣ್ಣು! ಎಷ್ಟೊಂದು ಭಾವ—ಎಷ್ಟೊಂದು ಆನಂದ ಹೊರಸೂಸುತ್ತಿತ್ತು, ಆ ಕಂಗಳಿಂದ! ಅವುಗಳ ಒಂದೊಂದು ಹೊಳಪೂ ತನ್ನನ್ನು ಆಹ್ವಾನಿಸುತ್ತಿತ್ತು—'ಬಾ! ಮರೆಯದೆ ಬಾ ರಾತ್ರಿ ಇಲ್ಲಿಗೆ!' ಎಂದು ಕರೆಯುತ್ತಿತ್ತು!—

ನೆನಪಿನ ಸುರೆಯನ್ನು ಸೇವಿಸಿದ ಹಾಗೆಲ್ಲ ಶಂಕರೂ ಕಣ್ಣುಗಳಲ್ಲಿ ಮದ ತುಂಬಿ ಬಂತು. ಯಾವುದೋ ಒಂದು ಅನಿರ್ವಚನೀಯ ಮಾಧುರಿಯಿಂದ ಅವನ ಸಮಸ್ತ ಶರೀರವೂ ನವಿರೆದ್ದಿತು. ತನ್ನ ಜೀವಮಾನದಲ್ಲೇ ಇಂಥ ಅನುಪಮ ಆನಂದ ದೊರೆವುದಿದೇ ಮೊದಲ ಬಾರಿ! ಎಷ್ಟು ದಿನಗಳಿಂದ ಕಾದಿದ್ದನೋ ಅದಕ್ಕಾಗಿ! ಆ ಒಂದು ಸಂದರ್ಭಕ್ಕಾಗಿ!—ಒಲವಿನಿಂದ ಕರೆವ ಕಣ್ಣು—ಸಂತಸದಿಂದ ಅರಳಿದ ಮುಖ—ಆನಂದದಿಂದ ರಂಗಿಗೇರಿದ ಕೆನ್ನೆ!—ಅದುರುತ್ತಿರುವ ತುಟಿ—ಆಲಿಂಗನಕ್ಕಾಗಿ ಮುಂದಾದ ಎದೆ—ಸಡಿಲುಬಿದ್ದ ಕೇಶರಾಶಿ....ಕೋಮಲಕರಗಳ ಮಾಲೆ—!

—ಓ! ಅದೆಷ್ಟು ದಿನಗಳಿಂದ ಕಾದಿದ್ದ ಆ ಒಂದು ಯೋಗಕ್ಕಾಗಿ! ತಾನು—ತಾರುಣ್ಯದಿಂದ ತುಂಬಿದ ಒಂದು ಹೆಣ್ಣು—ಇನ್ನೇನೂ ಬೇಡ ತನಗೆ! ಅವಳು ಬರೀ ಹತ್ತಿರ ಕುಳಿತಿದ್ದರೆ ಸಾಕು-ಒಂದು ನಗೆ ಹೂ ಅರಳಿಸಿದರೆ ಸಾಕು-ಮೋಹ ತುಂಬಿ ತನ್ನ ಭುಜದ ಮೇಲೆ ಕತ್ತು ಒರಗಿಸಿದರೆ ಸಾಕು—ಕೈಲಿ ತನ್ನ ಕೈ ಸೇರಿಸಿ ಅದನ್ನು ಮೃದುವಾಗಿ ತಬ್ಬಿದರೆ ಸಾಕು-ಅವಳ ಒಂದೇ ಒಂದು ತುಟಿ ತನ್ನ ತುಟಿಗೆ ಸೋಂಕಿದರೆ ಸಾಕು-ಇನ್ನೇನೂ ಬೇಡ ತನಗೆ!-ಎಂದು ಹಾರೈಸುತ್ತಿದ್ದ. ಇಂದು ಬಂದಿದೆ ಆ ಸಂದರ್ಭ, ತಾನೇಕೆ ಅದನ್ನು ಕಳೆದುಕೊಳ್ಳಬೇಕು? ತಾನಾಗಿಯೇ ಕರೆದಿದ್ದಾಳೆ ರಾಜಿ. ಸಂದೇಹವೇ ಇಲ್ಲ ಅದರಲ್ಲಿ! ಅವಳಿಗೂ ತನ್ನ ಬಗ್ಗೆ ಅನುರಾಗವಿದೆ. ಖಂಡಿತವಾಗಿಯೂ ಇದೆ—

—ತಾನು ಅವರ ಮನೆಗೆ ಹೋಗಲಾರಂಭಿಸಿದಂದಿನಿಂದ ರಾಜಿ ತನ್ನೊಂದಿಗೆ ವರ್ತಿಸಿದ ಬಗೆ—! ಅವಳ ಎಲ್ಲ ಚಲನವಲನಗಳಲ್ಲೂ ಎಷ್ಟು

ಸಲುಗೆ! ಎಂಥ ಸ್ವೇಚ್ಛೆ! ಗಂಡನಿಗೂ ಹೆಚ್ಚು ಮಮತೆ ತನ್ನ ಬಗ್ಗೆ! ಸ್ವಾಮಿ. ನಿರುದ್ಯೋಗಿಯಾಗಿದ್ದುದರಿಂದ ಅವರ ಮನೆ ವೆಚ್ಚವನ್ನೆಲ್ಲಾ ತಾನು ವಹಿಸುತ್ತಿದ್ದುದೇನೂ ಅದಕ್ಕೆ ಕಾರಣವಾಗಿರಲಿಲ್ಲ. ಕೃತಜ್ಞತೆಯ ದೃಷ್ಟಿಯೆ ಬೇರೆ—ಒಲವಿನ ದೃಷ್ಟಿಯೇ ಬೇರೆ! ಸೈಕಾಲಜಿ ಓದಿದ ತನಗೆ ಅಷ್ಟೂ ತಿಳಿಯದೆಂದರೆ ಹಾಸ್ಯಾಸ್ಪದವಾದೀತು. ಗಂಡನಿದ್ದಾಗ ಎಷ್ಟು ಸಲುಗೆಯೊ—ಅವನಿಲ್ಲದಾಗಲೂ ಅಷ್ಟೆ. ಅದಕ್ಕೇ ಹೇಳಿದ್ದು ಸ್ವಾಮಿ—'ಹೃದಯ ಒಂದು; ದೇಹ ಮೂರು!' ಎಂದು.

ಆ ಮಾತು ಮತ್ತೆ ನೆನಪಾಗುತ್ತಲೂ ಅವನ ಶರೀರ ನಿಮಿರಿ ನಿಂತಿತು.

—ಎಂಥ ಸರಳ ಹೃದಯದವ ತನ್ನ ಸ್ವಾಮಿ! ಇಷ್ಟು ವಿಶ್ವಾಸದ ಗೆಳೆಯನಿನ್ನೊಬ್ಬ ಸಿಕ್ಕುವುದುಂಟೆ? ಗೆಳೆಯರೊಂದಿಗೆ ತಮ್ಮ ಹೆಂಡಿರು ನಗು ನಗುತ್ತ ಮಾತನಾಡಿದ ಮಾತ್ರಕ್ಕೇ ಸಂಶಯದಿಂದ ಉರಿದು ಬೀಳುವ ಗಂಡಂದಿರಿಲ್ಲವೆ? ಆದರೆ ತನ್ನ ಸ್ವಾಮಿ! ತಮ್ಮ ಗೆಳೆತನದ ಪಾವಿತ್ರ್ಯದ ಬಗ್ಗೆ ಕೊಂಚವೂ ಸಂದೇಹವಿಲ್ಲ ಅವನಲ್ಲಿ! ಇಂಟರ್‌ವ್ಯೂಗಾಗಿ ಕರೆ ಬರುತ್ತಲೂ ಅವಳನ್ನು ತನ್ನವಶಕ್ಕೊಪ್ಪಿಸಿಬಿಟ್ಟು ಹೊರಟುಬಿಟ್ಟ. ಎಷ್ಟು ಧೈರ್ಯಶಾಲಿ! ಎಂಥ ಗಂಡುಸು! ಅವನ ಹೃದಯವಾದರೂ ಎಂಥದು! ಇಂಥ ಗೆಳೆತನದ ಗಂಗೆಯಲ್ಲಿ ಹೊಲಸು ಬೆರೆಸುವುದೇ? ಅನೇಕ ವರ್ಷಗಳಿಂದ ಬೆಳೆದು ಬಂದ ಸ್ನೇಹದ ಬಳ್ಳಿಯನ್ನು ಕಿತ್ತುಬಿಸುಟುವುದೇ?—ಅವನ ಮಡದಿ ತನಗೆ ಸೋದರೀ ಸಮಾನ. ಅವಳ ಬಗ್ಗೆ ಇಂಥ ಹೇಸಿ ವಿಚಾರ! —ಛೀ! ಛೀ! —

ತನ್ನ ಮತ್ತು ಸ್ವಾಮಿಯ ಅನುಪಮ ಸ್ನೇಹದ ದಿನಗಳು ಅವನ ಕಣ್ಣೆದುರಿನಲ್ಲಿ ಸುಳಿದುಹೋದುವು. ತನಗೆ ಬಾಳಿನಲ್ಲಿ ಬೇಸರವುಂಟಾದಾಗ ಒಡಹುಟ್ಟಿದ ಸೋದರನಂತೆ ಉತ್ಸಾಹ ಹುಟ್ಟಿಸಿದ್ದ ಸ್ವಾಮಿ. ತನಗೆ ಮೈ ಕೊಂಚ ಬಿಸಿಯಾದರೂ ಕಣ್ಣೀರು ಕರೆಯುತ್ತಿದ್ದ ಸ್ವಾಮಿ. ತನ್ನೊಂದಿಗೆ ಒಂದೇ ತಟ್ಟೆಯಲ್ಲಿ ಊಟಮಾಡಿ, ಒಂದೇ ಹಾಸುಗೆಯ ಮೇಲೆ—ಒಂದೇ ಶಾಲು ಹೊದ್ದುಕೊಂಡು ನೂರಾರು ರಾತ್ರಿಗಳನ್ನು ಕಳೆದ ಸ್ವಾಮಿ!—ಅಂಥವನೊಂದಿಗೆ ಇಂಥ ಮೋಸ? ಮನುಷ್ಯತ್ವವಾದರೂ ಏನುಳಿಯಿತು?

ರಾಜಿಯೇನೋ ತನ್ನ ಮೇಲೆ ಮನಸ್ಸನ್ನೂ ಇಟ್ಟಿದ್ದಾಳು. ತನ್ನ ಸಹವಾಸ ಕ್ಕಾಗಿ ಆತುರಪಡುತ್ತಲೂ ಇದ್ದಾಳು. ಅವಳು ಕರೆಯುವಳೆಂದು ನಾನು ಹೋಗಬೇಕೇ ? ಬಹಳ ಕೆಟ್ಟದು ಈ ಹೆಣ್ಣು ಜಾತಿ. ಅವರಿಂದಲೇ ದೇಶ ಗಳು ಹಾಳಾಗಿವೆ. ಸಾಮ್ರಾಜ್ಯಗಳು ಮಣ್ಣು ಮುಕ್ಕಿವೆ. ಮಾನವ ದಾನ ವನಾಗಿದಾನೆ. ಎಲ್ಲವನ್ನು ತಿಳಿದೂ ತಾನು........

—' ಸ್ವಾಮೀ, ಒಂದ್ಕಾಸು !—'

ಕೂಗು ಶಂಕರೂವನ್ನು ವಿಚಾರ ಚಕ್ರದಿಂದ ಹೊರಗೆಳೆಯಿತು. ಕಣ್ಣೆತ್ತಿ ನೋಡಿದ. ಭಿಕ್ಷುಕಿಯೊಬ್ಬಳು ಬಲಗೈ ಮುಂದೆ ಮಾಡಿ ನಿಂತಿದ್ದಳು ತರುಣಿಯೆ ?—ಹೌದು. ತರುಣಿಯೇ ಸರಿ ! ಹರಿದ ಸೀರೆಯಾದರೇನು.... —ಹೊಲಸು ಮೈಯಾದರೇನು— ಇನ್ನೂ ಮಾಸಿಲ್ಲ ಆ ಯೌವನ !— —' ಇವಳಹಾಗೆಯೆ ಕೈ ಮುಂದೆ ಚಾಚಿ ನಿನ್ನ ಒಲವಿನ ಭಿಕ್ಷೆಗಾಗಿ ಯಾಚಿ ಸುತ್ತಲಿದಾಳೆ ರಾಜಿ ! ಎಂಥ ಬೆಪ್ಪುತಕ್ಕಡೀನೋ ನೀನು ! ಇಂಥ ಹುಡುಗಿ ತಾನಾಗಿ ಒಲಿದು ಬಂದರೆ ಬಿಡುವಂಥ ಹುಚ್ಚರೂ ಉಂಟೇ ? ಗೆಳೆತನ— ಗಳೆತನ—ಎಲ್ಲಾ ಗೊಡ್ಡು ವೇದಾಂತ ! ಸುಖದ ಬಟ್ಟಲು ನಿನಗಾಗಿ ಕಾದಿದೆ. ಹೋಗಿ ಕುಡೀಬಾರದೇ ಹುಚ್ಚ !' ಎಂದು ಒಂದು ಮನಸ್ಸು ಕೂಗಿ ಹೇಳಿತು.

ಯಾರೋ ಅವನ ಕೈ ಹಿಡಿದು ಎಬ್ಬಿಸಿದ ಹಾಗಾಯಿತು.

ಎದ್ದು ನಿಂತ ಶಂಕರೂ.

—ದೂರವಿಲ್ಲ ಅವಳ ಮನೆ. ಇನ್ನೇನು ಇಲ್ಲೇ ಹತ್ತಿರದಲ್ಲೆ. ಮೂರು ಫರ್ಲಾಂಗು—ಸರಿ. ಬಂದೇ ಬಿಡುತ್ತೆ. ಯಾರದು ಮನೆ ಬಾಗಿ ಲಿನ ಮರೆಗೆ ನಿಂತಿರೋದು ? ಆ ಕೊಟಡಿಯಾದರೂ ಎಂಥದು ! ಒಂದೇ ಒಂದು ಮಹಡಿಗೆಲ್ಲ—ಅಲ್ಲಿ ಏನು ಮಾಡಿದರೂ—ಎಂಥ ಗಲಾಟೆಯಾದರೂ ಯಾರಿಗೂ ತಿಳಿಯುವಂತಿಲ್ಲ—ಎಲ್ಲ ಅನುಕೂಲವೇ ಇದೆ ತನಗೆ—ಅದೋ —ಗಾಳಿಯೊಂದಿಗೆ ಡೌಲಿನಿಂದ ಹಾರಾಡುವ ಆ ಸೆರಗು ಯಾರ ಸೀರೆ ಯದು ? ಆತುರದಿಂದ ಏರಿಳಿದ ಎದೆಯಿಂದಾಗಿ ಓರೆಯಾಗಿದೆಯೇನೋ ಆ ಸೆರಗಿನ ಅಂಚು ! ಅಬ್ಬ ! ಎಷ್ಟು ಆರಕ್ತವಾಗಿದೆ ಆ ಕೆನ್ನೆ ! ಉಸಿರಿಗೂ

ಎಷ್ಟು ವೇಗ! ಸೂಕ್ಷ್ಮ ಕಂಪನದಿಂದ ಬಳುಕುತ್ತಿದೆ ದೇಹಲತೆ! ಕೈಯೊಂದು ಬಾಗಿಲ ಮೇಲಿದೆ. ಒಳಗಿನಿಂದ ಬರುವ ವಿದ್ಯುದ್ದೀಪದ ಕಿರಣಗಳಲ್ಲಿ ಹೇಗೆ ಥಳ ಥಳ ಹೊಳೆಯುತ್ತಿದೆ ಆ ತೋಳು. ತನಗೆ ತಿಳಿಯದಂತೆಯೆ ಯಾರೋ ತನ್ನನ್ನು ಅವಳೆಡೆಗೆ ಸೆಳೆಯುತ್ತಿದ್ದಾರೆ. ಅಷ್ಟು ಎದೆಗಾರಿಕೆ ಯಾರದ್ದು? ಗೆಳೆತನದ ಬಂಧನಗಳನ್ನೆಲ್ಲ ಕಿತ್ತು ಬಿಸುಡಿ ತನ್ನನ್ನು ಅಲ್ಲಿಗೆ ನೂಕುತ್ತಿರುವ ಶಕ್ತಿ ಯಾವುದು? ಇನ್ನಾವುದು? ಅದೇ ಅವರ ಒಲವು! ತನ್ನ ಚೆಲುವೆ ರಾಜಿಯ ಒಲವು!

—ತನ್ನ ರಾಜಿ? ಅಹುದು! ಇನ್ನಾರ ರಾಜಿ? ದೇವರು ಧರ್ಮಗಳೆಂಬ ಸುಳ್ಳು ವಿಷಯಗಳ ಸಾಕ್ಷಿಯಾಗಿ ಸ್ವಾಮಿ ಅವರ ಕೈ ಹಿಡಿದಿದ್ದಾನೆ. ನಿಜ. ಅಂಥ ಗೊಡ್ಡು ಸಾಕ್ಷಿ ಬೇಕಿಲ್ಲ ನಮಗೆ. ನಮ್ಮದು ಹೃದಯದ ಸಾಕ್ಷಿ....ನಮ್ಮದು ಒಲವಿನ ಸಾಕ್ಷಿ....ಸ್ವಾಮಿಯಿಂಥ ವ್ಯಕ್ತಿ ರಾಜಿಯ ಪತಿಯಾಗಲು ಅರ್ಹನೆ?—ಸರ್ವದಾ ಅಲ್ಲ—ಅವಳು ರೂಪಸಿ. ದಂತದಲ್ಲಿ ಕಡೆದಂಥ ಹೆಣ್ಣು. ಇಂಥ ಲಾವಣ್ಯೆಗೆ ಎಂಥ ಗಂಡು! ಸ್ವಾಮಿಯ ಬಣ್ಣ ಕಪ್ಪು....ಮೂಗು ದಪ್ಪ – ಸರಿಯಾಗಿ ಬಟ್ಟೆ ಹಾಕಿಕೊಳ್ಳುವುದರ ಕಡೆಗೂ ಅವನಿಗೆ ಗಮನವಿಲ್ಲ. ತನಗೋ ಕೊಂಚವಾದರೂ ಸೌಂದರ್ಯವಿದೆ—ತೆಳ್ಳಗೆ –ಬೆಳ್ಳಗೆ ಇದ್ದಾನೆ. ಸೂಟುಹಾಕಿ ತಲೆಗೂದಲನ್ನು ಅಂದವಾಗಿ ಬಾಚಿಕೊಳ್ಳುತ್ತಾನೆ. ಹೆಣ್ಣು ಹಕ್ಕಿಯನ್ನು ಬಲೆಗೆ ಹಾಕಿಕೊಳ್ಳಲು ಅವಶ್ಯವಾದ ಗುಣಗಳೂ ಇವೆ. ನಿಜ, ರಾಜಿ ತನ್ನ ಕಂಡು ಮರಳಾದುದರಲ್ಲಿ ಸಂಶಯವೇ ಇಲ್ಲ. ಅವಳ ಕಣ್ಣೇ ಹೇಳುತ್ತವೆ. ಗುಟ್ಟು ರಟ್ಟು ಮಾಡುತ್ತದೆ ಆ ಧ್ವನಿ. ಸಾಲದೆ?—ಇನ್ನೇನು ಬೇಕು?

ಅವನು ಕಲ್ಪಿಸಿಕೊಂಡಿದ್ದ ಹಾಗೆ ಬಾಗಿಲಿನಲ್ಲಿಯೆ ನಿಂತಿದ್ದಳು ರಾಜಮ್ಮ. ಆನಂದ, ಆತುರತೆ, ವಿಲಾಸಲಾಲಸೆಗಳ ಮಧುರ ಭಾವ ಮೂಡಿತ್ತು ಮುಖದ ಮೇಲೆ. ಮೊದಲೇ ಕೆಂಪಗಿದ್ದ ತುಟಿ. ಆಗತಾನೆ ತಾಂಬೂಲ ಸವಿದಿದ್ದಳೇನೋ! ಆರಕ್ತವಾಗಿ ಬಿಟ್ಟಿತ್ತು! ನೀಳವಾದ ಕೇಶರಾಶಿ ದೀಪದ ಬೆಳಕಿನಲ್ಲಿ ಮಿರಮಿರನೆ ಮಿಂಚುತ್ತಿತ್ತು. ಸೊಗಸಾಗಿ ಎದ್ದ ಕತ್ತಿನಲ್ಲಿ ಮೌಕ್ತಿಕ ಮಾಲೆ ತುಂಬ ಅಂದವಾಗಿ ತೋರುತ್ತಿತ್ತು. ಕಣ್ಣು!—

ಎಂಥದೋ ಒಂದು ಅದ್ವಿತೀಯ ನಾಟಗಾಂಕೆ ಅಲ್ಲಿ ತುಂಬಿದ್ದ ಹಾಗೆ ಭಾಸವಾಯಿತು ಅವನಿಗೆ.

ಮೆಟ್ಟಿಲು ಏರುತ್ತ ಏರುತ್ತ ಕೊಂಚ ಕಾಲ ಅಪ್ರತಿಭನಂತೆ ನಿಂತಿದ್ದ ಶಂಕರೂ. ಮುಂದುವರೆಯುವುದೇ–ಬೇಡವೇ?–' ನಡೆ ಮೂರ್ಖ! ಸ್ವರ್ಗ ಸುಂದರಿಯ ಅರಮನೆಯ ಮಹಾದ್ವಾರ ನಿನಗಾಗಿ ಸ್ವಾಗತವೀಯುತ್ತಿದೆ. ಇಂಥ ಸಮಯದಲ್ಲಿ ಓಡಿಹೋಗುವುದುಂಟೇ?' ಎಂದು ಒಂದು ಮನಸ್ಸು ಹೇಳುತ್ತಿತ್ತು. ' ಈ ಮನೇಲಿ ಈಗ ಕಾಲಿಡುವುದೆಂದರೆ ನರಕದ ಬಾಗಿಲಲ್ಲಿ ಕಾಲಿಟ್ಟ ಹಾಗೆಯೆ ಸರಿ. ಓಡು ಹುಡುಗಾ ಇಲ್ಲಿಂದ. ಎಷ್ಟು ಬೇಗ ಓಡಿದರಷ್ಟು ಒಳ್ಳೆಯದು ' ಎಂದು ವಿವೇಕ ಬೋಧಿಸುತ್ತಿತ್ತು.

ಮಧುರ ಮಂದಹಾಸ, ಚಿಮ್ಮಿತು ಆವಳ ಮುಖದಿಂದ. ಆ ಕೋಮಲ ತುಟಿಗಳ ಮೋಹಕ ಚಲನವಲನ ಮಾತ್ರವೆ ಶಂಕರೂವನ್ನು ಹುಚ್ಚನನ್ನಾಗಿ ಮಾಡಲು ಸಾಕಾಗಿತ್ತು. ಜತೆಗೆ ಮುತ್ತು ಉದುರಿದ ಹಾಗೆ ಇನಿಮಾತು. ' ಬರಬಾರದೇ ಒಳಕ್ಕೆ? ಎಷ್ಟು ಹೊತ್ತಾಯಿತಲ್ಲ? '

—ಸರಿ! ಅವಳ ಮಾತಿನಲ್ಲೂ ಎಷ್ಟು ಆತುರತೆ! ' ಹೊತ್ತಾಯಿತಲ್ಲ! ಎಂದು ಹೇಳುತ್ತ ತನ್ನ ಹೃದಯವನ್ನೇ ತೆರೆದಿರಿಸುತ್ತಿದ್ದಾಳೆ ಹುಡುಗಿ! ' ಬರಬಾರದೆ ಬೇಗ? ' ಎಂದು ಆಲಕರೆಯುತ್ತಿದ್ದಾಳೆ. ಇಂಥ ಅಹ್ವಾನ ದೊರೆತರೆ ಸುಮ್ಮನಿದ್ದೀತೇ ಯೌವನದ ಬಿಸಿ ನೆತ್ತರ?

ಒಳಕ್ಕೆ ಅಡಿಯಿರಿಸುತ್ತಲೂ ಮೊದಲು ದೃಷ್ಟಿಗೆ ಬಿದ್ದುದು ಹಾಸುಗೆ. ಹೌದು, ಒಂದೇ ಒಂದು. ಹೆಚ್ಚು ಬಾಡಿಗೆ ತೆರಲು ಶಕ್ತಿಯಿಲ್ಲದ ಒಂದೆ ಕೊಟಡಿಯಲ್ಲಿ ಸಂಸಾರ ಸಾಗಿಸುತ್ತಿದ್ದವರು ಅವರು. ನಿಜ, ಬೇರೊಂದು ಹಾಸುಗೆಯನ್ನಾದರೂ ಸಿದ್ಧಪಡಿಸಬಹುದಾಗಿತ್ತಲ್ಲ; ಶಂಕರೂಗೆ ಸಂಶಯವೆ ಉಳಿಯಲಿಲ್ಲ. ಅವನ ಮುದ ನೆತ್ತಿಗೇರಿತು. ಕಂಪಿಸುವ ಶರೀರದಿಂದ ಅದರ ಮೇಲೊರಗಿಕೊಂಡ. ಕೆನ್ನೆಗೆ ಏನೋ ಮೃದುವಾಗಿ ಸವರಿ ಕೊಂಡಂತಾಯಿತು. ಬಾಗಿನೋಡಿದ. ಅಲ್ಲಲ್ಲಿ ಐದಾರು ಅರಳು ಮಲ್ಲಿಗೆ ರಾಜಿ ಮುಡಿದುದಾಗಿರಬೇಕು ಎಂದು ಒಂದೆರಡು ಕೈಗೆತ್ತಿಕೊಂಡು ತುಟಿ ಗಳಿಗೊತ್ತಿಕೊಂಡ. ಅವಳ ಮುಡಿಯನ್ನಾಲಂಗಿಸಿದ ಹೂ — ಇದರ ಮಾಧು

ರಿಯೆ ಬೇರೆ—ಎಂದುಕೊಂಡ. ಹೃದಯವೇ ದೃಷ್ಟಿಯಲ್ಲಿ ತುಂಬಿ ಬಂದು ರಾಜಿಯನ್ನು ನಿರೀಕ್ಷಿಸಿತು. ಬಾಗಿಲು ಮುಚ್ಚಿ ಎರಡು ಕೈಗಳನ್ನೂ ಹಿಂದೆ ಹೊರಳಿಸಿ ನಿಂತಿದ್ದಳಾಕೆ. ಅವನ ದೃಷ್ಟಿಯೊಂದಿಗೆ ತನ್ನ ದೃಷ್ಟಿ ಬೆರೆಯುತ್ತಲೂ ಅವಳ ಕಣ್ಣೆವೆಗಳು ಒಯ್ಯಾರದಿಂದ ಕೆಳಕ್ಕೆ ಬಾಗಿದುವು ಎವೆಗಳ ಮೇಲಿನ ಆ ಕಾಡಿಗೆ ಬಣ್ಣ ಬೆಳಕಿನಲ್ಲ ಅದೆಷ್ಟು ಅಂದವಾಗಿ ತೋರುತ್ತಿತ್ತು!—

ತಲೆದಿಂಬಿನ ಮೇಲೆ ಎಡಗೈ ಊರಿ ಶಂಕರೂ ಕತ್ತು ಕೊಂಚ ಮೇಲಕ್ಕೆತ್ತಿದ. ಕಂಠದಲ್ಲಿ ಮಾತು ಬಂದಿದ್ದರೂ ನಾಲಗೆ ಅದನ್ನು ಆಡಲೊಲ್ಲದು. ಅದೇನು ಮಾಯೆಯೊ ಯಾರಿಗೆ ಗೊತ್ತು! ‘ಬಾ ನನ್ನ ರಾಜಿ! ನಿಂತು ನಿಂತು ಕಾಲು ನೋತಾವು! ಇಲ್ಲಿ ಬಾ! ನನ್ನ ಎದೆಯ ಮೇಲೊರಗು ಬಾ!’ ಎಂದು ಹೇಳಲು ಮನಸ್ಸು ಹಾತೊರೆಯುತ್ತಿತ್ತು. ಆದರೆ ಆಡುವುದಾದರೂ ಹೇಗೆ? ‘ರಾಜಮ್ಮಾ,’ ಎನ್ನದೆ ಮಾತೇ ಎತ್ತದವ ಇಂದು ‘ರಾಜಿ’ ಎಂದು ಕರೆಯುವುದು ಹೇಗೋ! ಅವನಿಗೆ ಧೈರ್ಯ ಸಾಲದು! ಅವಳೊ-ಲಜ್ಜಾ ಮೂರ್ತಿಯಂತ ನಿಂತಿದ್ದಾಳೆ! ಬರಬೇಕು-ತನ್ನ ಬಳಿ ಕೂತುಕೊಳ್ಳಬೇಕು ಎಂಬ ಮನಸ್ಸಿದ್ದರೂ ತಾನಾಗಿ ಮುಂದುವರಿಯಲಾರಳು. ಗಂಡೇ ಮುಂದಾಗಬೇಕು ಇಂಥ ವಿಷಯಗಳಲ್ಲಿ!—

‘ಕೂತುಕೋ . . . ರಾ . . . ಅಲ್ಲ ರಾ . . . ಜೀ’ ಎಂದು ತೊದಲುತ್ತ ನುಡಿದ.

ಎಂಥ ವೈಯ್ಯಾರಿಯವಳು! ಕೂತುಕೊಳ್ಳುವಂಥ ಸಾಮಾನ್ಯ ವಿಷಯದಲ್ಲೂ ಹೆಣ್ಣು ಅಷ್ಟು ಸೊಗಸು ತುಂಬುವುದನ್ನು ಆತ ಎಂದೂ ಕಂಡಿರಲಿಲ್ಲ. ಗಿಡದ ಆಧಾರ ಬಿಟ್ಟು ಬಳ್ಳಿ ಕೆಳಕ್ಕೆ ಬಾಗುವಂತೆ ಕುಳಿತುಕೊಂಡಳು ರಾಜಿ ಅವನಿಗೆ ಕೊಂಚ ದೂರದಲ್ಲಿ- ಹಾಸುಗೆಯ ಅಂಚಿನ ಮೇಲೆ.

ಅವಳ ಕೈಯನ್ನು ಮೆಲ್ಲಗೆ ಹಿಡಿದು ಶಂಕರೂ ಆಕೆಯನ್ನು ಒರಸೆಳೆದುಕೊಂಡ. ಗಿಡವನ್ನೆಳೆದರೆ ಹೂ ಕೈಗೆ ಬರುವಂತೆ ಅವಳ ಮುಖ ಅವನ ಮುಖದ ಬಳಿ ಬಂತು. ಜಡೆಯಲ್ಲಿ ಮುಡಿದ ಅರಳು ಮಲ್ಲಿಗೆಯ ಮಾದಕ

ಸುಗಂಧ ಅವನ ಅಂಗಾಂಗಗಳಲೆಲ್ಲ ನವಿರು ಹುಟ್ಟಿಸಿತು. ಹೆಣ್ಣಿನ ಸ್ಪರ್ಶವೂ ಒಂದು ಅದ್ವಿತೀಯ ಸುಖವೆ! ಆ ಕೋಮಲ ತನು–ನುಣುಪಾದ ಕೈ ಬೆರಳು–ಬೆಣ್ಣೆಯಂತೆ ಮೃದುವಾದ ತೋಳು—

ಆ ತೋಳುಗಳೆರಡನ್ನೂ ಹಿಡಿದು ಇನ್ನೂ ಹತ್ತಿರ ಸೆಳೆದುಕೊಳ್ಳುತ್ತ ಹೇಳಿದ.

'ಹೀಗೇಕೇ ರಾಜಿ?'

ಅದೇಕೋ ಏನೊ—ಈ ಬಾರಿ ಮಾತ್ರ ಅವಳು ಲಜ್ಜೆಗೆ ಬಾಗಲಿಲ್ಲ. ಅವನ ಕಣ್ಣಲ್ಲಿ ಕಣ್ಣಿರಿಸಿ ಕೇಳಿದಳು.

'ನೀವ್ಯಾಕೆ ಹೀಗೆ?'

ಕೊಂಚ ಕಾಲ ಇಬ್ಬರಿಗೂ ಮಾತು ಬರಲಿಲ್ಲ. ಅವಳ ಭುಜಗಳ ಮೇಲೆ ಮೆಲ್ಲನೆ ಕೈಗಳನ್ನೂರಿ ಅವಳ ಮುಖದ ಬಳಿ ಮುಖವನ್ನು ಒಯ್ದು ಹೇಳಿದ.

'ರಾಜಿ........'

'ಶಂಕರೂ........'

'ಹೀಗಾದೀತೆಂದು ಕನಸಿನಲ್ಲೂ ಎಣಿಸಿರಲಿಲ್ಲ ನಾನು!'

'ಮನಸಿನಲ್ಲಿ?'

'ಸಾವಿರ ಬಾರಿ! ನೀನೂ ಹೀಗೆಯೇ ಕನಸು ಕಂಡಿದ್ದೆಯಾ ನನ್ನ ರಾಜಿ?'

'ನಮ್ಮನೆಗೆ ನೀವು ಬಂದಂದಿನಿಂದ ಎಷ್ಟು ಸರ್ತಿ ಯೋಚಿಸಿದ್ದೆನೋ ಎಣಿಸಿ ಹೇಳಲಾರೆ!'

'ನಿಜಕ್ಕೂ ನನ್ನ ಮೇಲೆ ನಿನಗೆ ಮನಸ್ಸಿದೆಯೇ ರಾಜಿ!'

'ನನ್ನ ಮೇಲೆ ನಿಮಗಿದ್ದರೆ........'

'ಇದ್ದರೆ—ಎಂದು ಸಂಶಯವೇಕೆ ನನ್ನ ಮುದ್ದೇ. ನಿನಗಾಗಿ ಪ್ರಾಣವನ್ನಾದರೂ ಬಿಟ್ಟೇನು!'

'ಅಷ್ಟು ಮಾತ್ರ ಮಾಡಬೇಡಿ ನಿಮ್ಮ ದಮ್ಮಯ್ಯ! ನೀವು ಪ್ರಾಣ ಬಿಟ್ಟರೆ ನನ್ನ ಗತಿಯೇನು?'

'ನಿಜ ಹೇಳು ರಾಜಿ. ಸ್ವಾಮಿಯ ಸಹವಾಸ ನಿನಗಿಷ್ಟವಿಲ್ಲವೆ?'

'ನಿಮ್ಮ ಕೊರಳಾಣೆಗೂ ನಿಜ ಹೇಳ್ತೀನೆ. ಆ ಕೋತಿಯಂಥ ಮುಖ ಕಂಡರೇನೆ ವಾಂತಿಯಾಗುತ್ತೆ ನನಗೆ. ಅವರನ್ನ ಮದುವೆಯಾಗಲು ಕೊಂಚವೂ ಇಷ್ಟವಿರಲಿಲ್ಲ ನನಗೆ. ಏನು ರೂಪ! ಎಂಥ ಕಲರು!—ತಂದೆ ತಾಯಿಗಳ ಬಲವಂತ. ಗಂಡು ಬೇರೆ ಸಿಕ್ಕಲಿಲ್ಲ. ನಂ, ನಿರ್ವಾಹವಿಲ್ಲದೆ ಮದುವೆಯಾದೆ.......'

ಆ ಮಾತಿನಲ್ಲಿ ಕಂಪನವಿದ್ದ ಹಾಗೆ ತೋರಿತು ಶಂಕರೂಗೆ. ಅವನ ಹೃದಯ ಸಹಾನುಭೂತಿಯಿಂದ ತುಂಬಿ ಬಂತು.

'ಅಯ್ಯೋ ನನ್ನ ಚೆಲುವೆ! ಸಂಸಾರದಲ್ಲಿ ಏನೂ ಸುಖವಿಲ್ಲವೇ ನಿನಗೆ?'

'ಇಂಥ ಗಂಡನ್ನ ಕಟ್ಟಿಕೊಂಡು ಏನು ಸುಖ ಉಣ್ಣಬೇಕು? ಬಾಯಿ ಬಾಯಿ ಬಡಿದುಕೋಬೇಕು ಅಷ್ಟೆ........'

'ಹಾಗಾದರೆ. .....'

'ಹಾಗಾದರೆ.......' ಎನ್ನುತ್ತ ತನ್ನ ಕೈಗಳೆರಡನ್ನೂ ಅವನ ಕತ್ತಿನ ಸುತ್ತ ಮಾಲೆ ಹಾಕಿ ಹಾಸುಗೆಯ ಮೇಲೊರಗಿದಳು.

—ಏನು ಸೌಂದರ್ಯ ಇದು, ಶಯ್ಯೆಯಲ್ಲೊರಗಿದ ಜವ್ವನೆಯದು! ಜಗತ್ತಿನಲ್ಲಿನ ಸಮಸ್ತ ಲಾವಣ್ಯವೇ ಅಲ್ಲಿ ತನ್ನೆದುರು ಒರಗಿರಬೇಕೆಂದು ಅವನಿಗನ್ನಿಸಿತು. ಥಳಥಳ ಹೊಳೆವ ಆ ಹಾಲುಗಲ್ಲ!

-ಸಮುದ್ರದ ತೆರೆಗಳಂತೆ ಏರಿ ಇಳಿದ ಎದೆ—ಆತುರ ಉದ್ರೇಕಗಳಿಂದ ಉಬ್ಬಿ ಇಳಿದ ಮೂಗಿನ ಹೊರಳೆ!- ಕ್ಷಣಕಾಲ ಮಂತ್ರಮುಗ್ಧನಂತೆ ಆ ರೂಪರಾಶಿಯನ್ನು ಕಂಗಳಿಂದ ಕುಡಿಯುತ್ತಿದ್ದು ಕೇಳಿದ ಶಂಕರೂ.

'ತಪ್ಪಲ್ಲವೇ ಇದು ರಾಜಿ?'

'ಯಾವುದು?'

'ಇದು........'

'ಅಂದರೆ....?' ಅರೆದೆರೆದ ಕಂಗಳಿಂದ, ಕಟಾಕ್ಷ ಸೂಸುತ್ತ ಅವಳು ಕೇಳಿದಳು. ತುಟಿಗಳಲ್ಲಿ ಮಿಂಚುತ್ತಿತ್ತು ಶೃಂಗಾರ ರಸಭರಿತ ತುಂಟನಗೆ.

'ಅಂದರೆ?....' ಅಪ್ರತಿಭನಾದರೂ ಆತ ಹೇಳಿದ. 'ಅಂದರೆ ನನ್ನ ನಿನ್ನ ಸಂಬಂಧ....'

ಒಮ್ಮೆಲೆ ಎದ್ದು ಕುಳಿತು ಆವೇಶದಿಂದ ಕೇಳಿದಳು ರಾಜಿ.

'ನೀವಿಂಥ ಗುಗ್ಗು ಅಂತ ನಾ ತಿಳಿದಿರಲಿಲ್ಲ....'

'ಹಾಗಲ್ಲ ರಾಜಿ....ಆದರೆ....ನಾನು – ಸ್ವಾಮಿ ಸ್ನೇಹಿತರು....'

'ಸ್ನೇಹಿತರಾದರೆ ಆಯಿತು. ಅದಕ್ಕೂ ಇದಕ್ಕೂ ಏನು ಸಂಬಂಧ? ಅವರೂ ನೀವೂ ಸ್ನೇಹಿತರಾದರೆ ನನಗೂ ನಿಮಗೂ ಏನು ಸಂಬಂಧ?....'

'ಅದು ಸರಿ ರಾಜಿ.... ರೇಗಬೇಡ. ನಿನ್ನ ಪರೀಕ್ಷೆಮಾಡುವುದಕ್ಕೋಸ್ಕರ ಹೀಗೆ ಕೇಳಿದೆ ಅಷ್ಟೆ. ಹೆಣ್ಣಿನ ಮುಂದೆ ಎಲ್ಲಿನ ಸ್ನೇಹ—ಏನು ಕತೆ! ಬಾ ನನ್ನ ರಾಣಿ!' ಎಂದೆನ್ನುತ್ತ ಅವಳನ್ನು ಸೆಳೆದು ಎದೆಗೊತ್ತಿಕೊಂಡ. ಅವಳ ಎದೆಯ ನುಣುಪು ತನ್ನ ಎದೆಗೆ ತಲಪುತ್ತಲೂ ಅವನ ಶರೀರದಲ್ಲಿ ವಿದ್ಯುಲ್ಲಹರಿ ಪಸರಿಸಿದಂತಾಯಿತು. ಅವಳ ಶರೀರವನ್ನು ಬಿಗಿಯಾಗಿ ಹಿಡಿದು ಎರಡು ಕೈಗಳನ್ನೂ ತಲೆಗೆ ಇಟ್ಟು ಮುಖದ ಬಳಿ ಮುಖ ತಂದುಕೊಂಡ....

ಒಂದೇ ಕ್ಷಣ....

ಆ ತುಂಬಿದ ತುಟಿಗಳ ರಸಪಾನ....

ಥಾಡ್ ಡ್ ಡ್ ಡ್

ಕಿಟಕಿಯ ಬಾಗಿಲು ಒಮ್ಮೆಲೆ ತೆರೆಯಿತು.

ಶಂಕರೂ ದಿಗ್ಭ್ರಮೆಬಿದ್ದು ನೋಡಿದ........

ಸ್ವಾಮಿಯ ಮುಖ!

ಸುಖದ ಶಿಖರ ಏರಿತ್ತು ಸವಿಗನಸು. ಕೆಳಕ್ಕುರುಳಿತು. ಒಡೆದು ಚೂರು ಚೂರಾಯಿತು!

ಕೈಗೆ ಬಂದಿತ್ತು ತುತ್ತು! ತುಟಿಗೆ ಬಾರದುಳಿಯಿತು!

ಅವಳನ್ನು ಮುತ್ತಿಡಲು ಮುಂದಾಗಿದ್ದ ತುಟಿ ತಾವಾಗಿಯೆ ಮುಚ್ಚಿಕೊಂಡವು. ಮುಖ ಹಿಂದೆ ಸರಿಯಿತು. ಕೈಗಳು ಕೆಳಕ್ಕುರುಳಿದವು. ನಾಚಿಕೆ, ಜಿಗುಪ್ಸೆ, ಕಳವಳ, ಪಶ್ಚಾತ್ತಾಪಗಳಿಂದ ತಲೆ ಬಾಗಿಕೊಂಡಿತು.

ಸ್ವಾಮಿಯೋ–ತನ್ನ ವಿಶ್ವಾಸ ಘಾತಕ ಕಾರ್ಯವನ್ನು ಕಣ್ಣಾರೆ ಕಂಡಿದಾನೆ. ಮುಂದೇನಾಗುವುದೊ! ರಾಜಿಯ ಗತಿ?–ಬೊಂಬಾಯಿಗೆ ಹೋದುದಾಗಿ ಹೇಳಿದ್ದನಲ್ಲ! ಇಷ್ಟು ಬೇಗ ಹೇಗೆ ಬಂದ? ಏನು ಮಾಡುವನೊ! –ನಾಳಿನ ದಿನ ಪತ್ರಿಕೆಗಳಲ್ಲಿ ಸುದ್ದಿ ಬಂದರೂ ಬಂದೀತು–'ಒಬ್ಬ ತರುಣನ ಅತ್ಯಾಚಾರ. ಹೆಂಡತಿಯನ್ನೂ ಅವಳ ಪ್ರಿಯಕರನನ್ನು ಚೂರಿಯಿಂದಿರಿದು ಕೊಂದ' ಎಂದು. ಅವನ ಮೈ ನಡುಗಿತು. ಏನೂ ಹೊಳೆಯದಾಯಿತು. ಕಣ್ಣಿಗೆ ಕತ್ತಲೆ ಕವಿಯಿತು. ಬೊಂಬೆ ಉರುಳುವಂತೆ–ಅವನ ಶರೀರ ಹಾಸುಗೆಯ ಮೇಲುರುಳಿತು.

೨

ಕಣ್ತೆರೆದು ನೋಡಿದ ಶಂಕರೂ.

ಬೆಳ್ಳಗೆ ಬೆಳಗಾಗಿತ್ತು!

ಕಣ್ಣುಜ್ಜಿಕೊಂಡು ಸುತ್ತಲೂ ದೃಷ್ಟಿ ಹೊರಳಿಸಿದ. ತನ್ನದೇ ಕೊಟಡಿ. ತನ್ನದೇ ಮಂಚ. ತಾನೇನು ಈ ಜಗತ್ತಿನಲ್ಲಿರುವೆನೊ ಇಲ್ಲವೆ ಪರಲೋಕ ಸೇರಿ, ತಾನು ಬಿಟ್ಟುಬಂದ ಕೊಟಡಿಯ ಕನಸು ಕಾಣುತ್ತಿರುವೆನೊ ಎಂದು ದಿಗಿಲಾಯಿತು.

ಹಾಸುಗೆಯ ಮೇಲೆದ್ದು ಕುಳಿತ. ಕಿಟಕಿಯಿಂದ ಕಾಣಿಸಿತು, ಅದೇ ಚಿರಪರಿಚಿತ ಬೀದಿಯ ದೃಶ್ಯ. ಸಿನಿಮಾ ವಾದ್ಯಮೇಳವೊಂದು ಬೊಬ್ಬೆಯಿಡುತ್ತ ಸಾಗಿತ್ತು. ಪರಲೋಕದಲ್ಲಿ ಸಿನಿಮಾ ಇರುವುದುಂಟೇ?–ತಾನು ಈ ಜಗತ್ತಿನಲ್ಲೆ–ತನ್ನ ಕೊಟಡಿಯಲ್ಲೇ ಇರುವುದು ನಿಜ–ಎಂದೆನಿಸಿತು. ಆದರೇನು ಆಶ್ಚರ್ಯ! ಸ್ವಾಮಿಯ ಮನೆಯಲ್ಲಿ ಮೂರ್ಛೆಹೋಗಿದ್ದ ತಾನು ತನ್ನ ಕೊಟಡಿಗೆ ಬಂದುದು ಹೇಗೆ? ಸ್ವಾಮಿಯೇ ತನ್ನನ್ನು ತಂದಿರಿಸಿದನೆನ್ನಬೇಕೇ?–ತೀರಾ ಅಸಾಧ್ಯ. ನಿಜ ಹೇಳುವುದಾದರೆ ಕಡಿದು ತುಂಡು ತುಂಡುಮಾಡಿ, ಹದ್ದುಕಾಗೆಗಳಿಗಿರಿಸಬೇಕು ತನ್ನ! ರಾಜಿ! ಅಯ್ಯೊ ಪಾಪ! ಅವಳನ್ನೆ ಕೊಂದುಹಾಕಿ ತನ್ನನ್ನು ಹಾಗೆಯೆ ಬಿಟ್ಟನೊ

ಏನೊ! ಎಷ್ಟಾದರೂ ಹಳೆಯ ಸ್ನೇಹ. ಆ ಕರುಣಿ ಇಂಥ ಕೆಲಸ ಹೇಗೆ ಮಾಡೀತು? ಸ್ವಾಮಿ! ಅಯ್ಯೋ ಸ್ವಾಮೀ! ಅವನಂಥ ಮಹಾತ್ಮನಿಗೆ ಎಂಥ ದ್ರೋಹ ಬಗೆದ ತಾನು ಪಾಪಿ! —

ತಲೆದಿಂಬಿನ ಮಧ್ಯೆ ತಲೆಯನ್ನಿರಿಸಿ ಬಿಕ್ಕಿಬಿಕ್ಕಿ ಅಳತೊಡಗಿದ. ಶಂಕರೂ ಕೈಗೆ ಏನೋ ತಾಕಿದಂತಾಯಿತು. ಎತ್ತಿಕೊಂಡು ನೋಡಿದ. ಒಂದು ಕಾಗದ.

ಕಂಬನಿದುಂಬಿದ ಕಂಗಳಿಂದ ಅದರ ಮೇಲೆ ದೃಷ್ಟಿಬೀರಿದ. ಸ್ವಾಮಿ ಬರೆದುದೇ? ಹೌದು. ಆತುರತೆಯಿಂದ ಓದತೊಡಗಿದ.

"ಪ್ರಿಯ ಶಂಕರೂ,

ಮಾಡಬಾರದ ಕೆಲಸಮಾಡಿದೆ ನಾನು. ನಿನ್ನ ಗೆಳೆತನದ ಪಾವಿತ್ರ್ಯವನ್ನು ಒರೆಗೆ ಹಚ್ಚಬೇಕೆಂಬ ದುರ್ಬುದ್ಧಿ ನನಗೆ ಯಾವ ಮುಹೂರ್ತದಲ್ಲಿ ಬಂತೋ ತಿಳಿಯದು. ನನ್ನ ಪತ್ನಿಯನ್ನೇ ಆ ಪರೀಕ್ಷೆಯ ಸಾಧನವಾಗಿರಿಸಿದ್ದು ಇನ್ನೂ ಒಂದು ಮಹಾಪ್ರಮಾದ. ಈ ಪರೀಕ್ಷೆಯಲ್ಲಿ ನೀನು ಖಂಡಿತವಾಗಿಯೂ ಉತ್ತೀರ್ಣನಾಗುವೆಯೆಂದು ನಾನೆಣಿಸಿದ್ದೆ. ಆದರದು ತಪ್ಪಾಯಿತು. ನನ್ನ ಕಣ್ಣು ತೆರೆಯಿತು.

ನಾನು ಬೊಂಬಾಯಿಗೆ ಹೋದ ವಿಚಾರ ಬರೀ ಬುರುಡೆ. ನಿನ್ನ ಪರೀಕ್ಷೆಗಾಗಿ ಆ ಪ್ರಯಾಣದ ನಾಟಕ ಆಡಿದೆ ಅಷ್ಟೆ. ನಾನು ರೈಲು ಕೂಡ ಹತ್ತಿರಲಿಲ್ಲ. ನಿನ್ನೆ ಮೊದಲನೆಯ ಆಟಕ್ಕೆ ಸಿನಿಮಾಕ್ಕೆ ಹೋಗಿದ್ದು ಹತ್ತು ಗಂಟೆಗೆ ಮನೆಗೆ ಬಂದೆ. ಆಗ ನೀನೂ ಬಂದೇ ಬರುವಿಯೆಂದು ನಿರೀಕ್ಷಿಸಿದ್ದೆ. ಹಾಗೆಯೇ ಆಗಿತ್ತು. ಕಿಟಕಿಯ ಬಳಿ ನಿಂತುಕೊಂಡಿದ್ದು ಮಾತುಗಳೆಲ್ಲವನ್ನೂ ಹೊಂಚಿ ಕೇಳುತ್ತಿದ್ದೆ. ಇನ್ನು ಪ್ರಮಾದವಾಗುವುದೆಂದು ಅರಿತೊಡನೆ ಒಳಕ್ಕೆ ನುಗ್ಗಿದೆ. ಸಮಯಕ್ಕೆ ಸರಿಯಾಗಿ ನಾನು ಬರದಿದ್ದರೆ ಏನು ಅನರ್ಥವಾಗುತ್ತಿತ್ತೋ! ಬಂದೆ. ಎಲ್ಲವನ್ನೂ ತಡೆದೆ. ನೀನು ಎಚ್ಚರದಪ್ಪಿ ಬೀಳುತ್ತಲೂ ನಿನ್ನನ್ನು ಗಾಡಿಯಲ್ಲಿ ಹಾಕಿಬಿಟ್ಟು ನಿನ್ನ ರೂಮಿಗೆ ತಂದು ಮಲಗಿಸಿದೆ.

ನಡೆದುದರ ಬಗ್ಗೆ ನಾಚಿಕೊಂಡು ಕಳವಳಪಡುವ ಕಾರಣವೇನೂ

ಇಲ್ಲ ಶಂಕರೂ. ನನ್ನ ನಿನ್ನ ಸ್ನೇಹಕ್ಕೆ ಈ ಘಟನೆಯಿಂದ ಕಲ್ಲು ಬಿತ್ತೆಂದು ತಿಳಿಯಬೇಕಾಗಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ತಾರುಣ್ಯಕಾಲದಲ್ಲಿ ಇಂಥ ಮೋಹದ ರಾತ್ರಿ ಬಂದೇ ಬರುತ್ತೆ. ಆದರೆ ಆ ರಾತ್ರಿಯು ಕತ್ತಲೆ ಬಹುಕಾಲ ಉಳಿಯುವುದಿಲ್ಲ. ಅರಿವಿನ ಬೆಳಕೂ ಬಂದೇ ಬರುತ್ತೆ. ಕಾಮನ ಕಾಳ ಸರ್ಪವನ್ನು ಎಂದೂ ಕೆಣಕಬಾರದು. ಕೆಣಕಿದಾಗ ಹೆಡೆಯೆತ್ತಿ ಫೂತ್ಕರಿಸದಿದ್ದೀತೇ? – ಅದರಲ್ಲೂ ಮದುವೆಯಾಗದ ತುಂಬುತರುಣ ನೀನು. ಹೆಣ್ಣು ಒಲಿದು ಬಂದಂತೆ ತೋರಿದಾಗ ಬಿಟ್ಟುಬಿಡಲು ನೀನೇನು ವಿವೇಕಾನಂದರ ಮರಿಯಲ್ಲ. ಈಗ ತಿಳಿಯುತ್ತಿದೆ ನನಗೀ ವಿಚಾರ. ಮೊದಲೇ ತಿಳಿದಿದ್ದರೆ– ಇಂಥ ವಿಷಪರೀಕ್ಷೆ ನಡೆಸುವ ಗೋಜಿಗೇ ಹೋಗುತ್ತಿರಲಿಲ್ಲ.

ಆದುದನ್ನೆಲ್ಲಾ ಮರೆತುಬಿಡು ಶಂಕರೂ! ಇಂಥ ಕ್ಷುಲ್ಲಕ ಘಟನೆಗಳಿಂದಾಗಿ ಅಗಲುವುದಕ್ಕೇನು ನಾವು ಗೆಳೆಯರಾದದ್ದು?

ನಿನ್ನವನೆ,

ಸ್ವಾಮಿ.'

ಓದಿ ಮುಗಿಸಿದ. ಕಂಬನಿ ಆಗಲೆ ಮಾಯವಾಗಿದ್ದುವು. ಮುಖದಲ್ಲಿ ಆನಂದ ಹೊರಸೂಸುತ್ತಿತ್ತು.

—ಎಂಥ ಉದಾತ್ತಹೃದಯದವ ಸ್ವಾಮಿ! ಎಷ್ಟು ಕ್ಷಮಾಶೀಲ! ಪ್ರತ್ಯಕ್ಷ ತನ್ನ ಹೆಂಡತಿಯನ್ನೇ ಬಾಹುಪಾಶದಲ್ಲಿ ಸೆರೆಹಿಡಿದು ಚುಂಬಿಸ ಹೊರಟವನನ್ನೂ ಕ್ಷಮಿಸಿಬಿಡುತ್ತದೆ ಆ ಸ್ನೇಹ! ಆ ಗೆಳೆತನಕ್ಕೆ ಯೋಗ್ಯನೇ ತಾನು! ನೀಚ! ಪಾಪಿ! ಈ ಕಲಂಕಿತ ಮುಖ ಹೊತ್ತುಕೊಂಡು ಸ್ವಾಮಿಯನ್ನು ಮಾತನಾಡಿಸುವುದಾದರೂ ಹೇಗೆ?

ಅವನ ದೃಷ್ಟಿಯೆದುರಿಗೆ ಬಂದು ನಿಂತಿತು ರಾಜಿಯ ಮೂರ್ತಿ. ರಾಜಿ! ಅವಳೆ ಈ ಎಲ್ಲ ಅನರ್ಥಕ್ಕೂ ಕಾರಣಳು. ಅವಳು ಆ ರೀತಿ ಉತ್ತೇಜನವೀಯದಿದ್ದರೆ – ಕೈಹಿಡಿದು – ಮೈಮುಟ್ಟಿ – ಆಲಿಂಗಿಸಿಕೊಳ್ಳಲು ಬರದಿದ್ದರೆ ತಾನು ಖಂಡಿತ ಮುಂದಾಗುತ್ತಿರಲಿಲ್ಲ. ಹೆಣ್ಣು! ಇದಕ್ಕೆಲ್ಲಾ ಕಾರಣ ಆ ಹೆಣ್ಣು! ಅವಳ ಗತಿಯೇನಾಯಿತೊ? ಸ್ವಾಮಿ ಏನೂ ಬರೆದಿಲ್ಲವಲ್ಲಾ!—

ಕುತೂಹಲದಿಂದ ಕಾಗದವನ್ನು ಹೊರಳಿಸಿ ನೋಡಿದ. ಪುಟ್ಟದೊಂದು ಮರೆತ ಮಾತು :

‘ರಾಜಿ ನಿನ್ನ ಕಂಡು ಮೋಹಿತಳಾಗಿದ್ದಳೆಂದು ತಪ್ಪು ತಿಳಿದುಕೊಳ್ಳಬೇಡ ಶಂಕರೂ. ನನ್ನ ಮಾತಿಗೋಸ್ಕರ ನಿನ್ನೊಂದಿಗೆ ಅವಳು ಪ್ರಣಯ ನಾಟಕವಾಡಿದಳು ಅಷ್ಟೆ. ಕೊನೆಯವರೆಗೂ ನಿನ್ನನ್ನು ಪರೀಕ್ಷಿಸಬೇಕೆಂದು ನಾ ಹೇಳಿದ್ದೆ. ನೀನು ಕೈಹಿಡಿದರೂ, ಮೈ ಹಿಡಿದರೂ ಅವಳು ನಿನಗೆ ಉತ್ತೇಜನವಿತ್ತುದು ಅದಕ್ಕಾಗಿಯೆ.

ನಿನ್ನ ಬಗ್ಗೆ ಅವಳಲ್ಲಿ ಯಾವ ದುರ್ಭಾವನೆಯೂ ಉಳಿದಿಲ್ಲ. ಅದುದೆಲ್ಲ ಒಂದು ನಾಟಕ ಅಂತ ತಿಳಿದುಕೊಂಡು ಮೂವರೂ ಮತ್ತೆ ಸ್ನೇಹಿತರಾಗೋಣ. ಮರೀಬೇಡವೋ ಶಂಕರೂ! ಹೃದಯ ಒಂದು; ದೇಹ ಮೂರು!....’

ಆ ಕೊನೆಯ ವಾಕ್ಯ ತನ್ನನ್ನು ಅಣಕವಾಡಿ ನಗುತ್ತಿರುವಂತೆ ಭಾಸವಾಯಿತು ಶಂಕರೂಗೆ. ಎರಡು ಕೈಗಳಿಂದಲೂ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಕಳವಳದಿಂದ ಕೂಗಿದ.

‘ಇಲ್ಲ – ಇಲ್ಲ – ನಾನಿನ್ನು ಅವರಿಗೆ ಮುಖ ತೋರಿಸುವುದು ಕೂಡ ಸಾಧ್ಯವಿಲ್ಲ. ಈ ಊರಿನಲ್ಲಿರುವುದೂ ಸಾಧ್ಯವಿಲ್ಲ. ಆ ಪವಿತ್ರ ಹೃದಯಗಳೊಂದಿಗೆ ಎಂದಿಗೂ ಒಂದಾಗಲಾರದು ಈ ಕೃಷ್ಣಹೃದಯ!’

o o o o

ಮೋಹದ ರಾತ್ರಿಯೇನೋ ಕಳೆದುಹೋಗಿತ್ತು.

ಕತ್ತಲೆ ಮಾತ್ರ ಇನ್ನೂ ಕವಿದಿತ್ತು.

ಬೆಂಗಳೂರು ಮಾರ್ಚಿ ೧೯೪೪

# ಮನಸಿನ ಮಂಜು!

೩೨ನೆಯ ಕೊಟಡಿಯೆಂದರೆ ಹರಟೆಮಲ್ಲರ ಕಚೇರಿಯೆಂಬ ವಿಚಾರ ಕಾಲೇಜು ವಿದ್ಯಾರ್ಥಿನಿಲಯದಲ್ಲಿ ವಾಸಿಸುವವರಿಗೆಲ್ಲ ಚೆನ್ನಾಗಿ ಗೊತ್ತು. ಅಲ್ಲಿನ ಹವೆ ಸೇವಿಸಿದವರೆಲ್ಲ ಪ್ರಖ್ಯಾತ ವಕೀಲರೂ, ಪ್ರೊಫೆಸರರೂ, ರಾಜಕಾರಣಪಟುಗಳೂ ಆಗುವರೆಂದು ಕೆಲವರು ತಮಾಷೆ ಮಾಡುತ್ತಿದ್ದುದೂ ಉಂಟು. ಸಾಯಂಕಾಲದ ಊಟ ಮುಗಿಯುವುದೇ ತಡ—ಆ ಕೊಟಡಿಯು ತುಂಬ ಸಿಗರೇಟಿನ ಮಾದಕ ಸುಗಂಧ-ಜತೆಗೆ ಮಾತಿನ ಮಳೆಯ ಕೋಲಾಹಲ. ರಾತ್ರಿ ಹನ್ನೆರಡು—ಒಂದು—ಎರಡು- ಅದೇಕೆ ಎಷ್ಟೋ ಬಾರಿ ಬೆಳ್ಳಗೆ ಬೆಳಗಾಗುವವರೆಗೂ ಅಲ್ಲಿನ ವಾದವಿವಾದ ಹಾಗೇ ನಡೆಯುತ್ತಿತ್ತು.

ಪಕ್ಕದ ಕೊಟಡಿಗಳಲ್ಲಿದ್ದ ಪುಸ್ತಕಪಿಶಾಚ ವಿದ್ಯಾರ್ಥಿಗಳಿಗೆ ಆ ಕೊಟಡಿಯನ್ನು ಕಂಡರಾಗುತ್ತಿರಲಿಲ್ಲವಾದರೂ, ಅದನ್ನು ಪ್ರೀತಿಸುವವರ ಸಂಖ್ಯೆಯೇನೂ ಅಲ್ಪವಾಗಿರಲಿಲ್ಲ. ಅಲ್ಲಿ ನಡೆಯುವುದೆಲ್ಲಾ ಗೊಡ್ಡು ಹರಟೆಯೆ – ಎಂದು ಅನೇಕರು ಬೀಳುಗಳೆಯುತ್ತಿದ್ದರಾದರೂ ಅವರೆಲ್ಲ ಅದರಲ್ಲಿ ಭಾಗವಹಿಸಿದವರೇ. ಅಲ್ಲಿ ಸೇರುತ್ತಿದ್ದವರೆಲ್ಲ ರಸಿಕರಾದ ತರುಣ ವಿದ್ಯಾರ್ಥಿಗಳು. ಅವರೆಲ್ಲರೂ ಇನ್ನೂ ಇಪ್ಪತ್ತೈದರ ಸೀಮೆ ದಾಟದವರೆಲ್ಲ. ಅವರು ಮಾತನಾಡುವ ವಿಷಯಗಳಾದರೂ ಹೇಗಿರಬೇಕು? ಎಷ್ಟಿರಬೇಕು? – ಅದು ಹೀಗೇ – ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಕಾಲೇಜಿನ ಬೆಡಗಿನ ಹುಡುಗಿಯರ ಒನಪು, ಒಯ್ಯಾರಗಳಿಂದ ಮೊದಲ್ಗೊ

ಮಾಡಿಕೊಂಡು, ಪ್ರೊಫೆಸರುಗಳ ನಕಲಿ–ಲೇವಡಿ, ಫ್ರಾಂಕ್ ಕ್ರಾಪು, ಬರುವಾ ಚಿತ್ರಗಳ ಚರ್ಚೆಗಳವರೆಗೂ ಆ ಹರಟೆ ಸಾಗುತ್ತಿತ್ತು. ಅದೊಂದು ವಿಚಿತ್ರ ಚರ್ಚೆಯೇ! ಅದರಲ್ಲಿ ಚರ್ಚಿಲ್, ಹಿಟ್ಲರ್, ಮುಸಲನಿಗಳೂ ಮೊಗ ಹಾಕುತ್ತಿದ್ದರು. ಲೆನಿನ್, ಟ್ರಾಟ್‌ಸ್ಕಿ, ಜವಹರರೂ ಕಾಣಿಸು ತ್ತಿದ್ದರು. ಸೈಗಲ್, ಕಾನನಬಾಲಾ ಹೆಸರೂ ಸಂಗೀತದ ತಾನದಂತೆ ಆಗಾಗ ಕೇಳಿಬರುತ್ತಿತ್ತು. ಆ ಸಂಗೀತದ ಹಿಂದೆಯೇ ಡೆಮಾಕ್ರಸಿ-ಫ್ಯಾಸಿಜಂ-ಸೋಶಲಿಜಂಗಳ ಗಂಭೀರ ರಾಗವೂ ಹೊರಡುತ್ತಿತ್ತು.

ಆದರೆ ಆ ದಿನ ಮಾತ್ರ ಈ 'ಇಜಂ'ಗಳಾವುವೂ ಅಲ್ಲಿ ತಲೆಹಾಕ ಲಿಲ್ಲ. ಅದಕ್ಕೆ ಪ್ರತಿಯಾಗಿ ಅತ್ಯಂತ ಸೂಕ್ಷ್ಮವಾದ ಹೊಸ ವಿಚಾರವೊಂದು ಎಳೆ ಎಳೆಯಾಗಿ ಹೊರಡತೊಡಗಿತು. ಸೀನಿಯರ್ ಬಿ. ಎ. ವಿದ್ಯಾರ್ಥಿ ವಸಂತ ಕುಲಕರಣಿ ಅದರ ನಾಂದಿಗಾರಂಭಿಸಿದ್ದ.

'ಇಂದು ಮಾನಸಶಾಸ್ತ್ರದ ಪುಸ್ತಕವೊಂದನ್ನು ಓದಿನೋಡಿದೆ. ಮನುಷ್ಯ ಬೆಳೆದು ಎಷ್ಟೇ ದೊಡ್ಡವನಾದರೇನು ಅವನ ಮನಸ್ಸು ಮಾತ್ರ ಮಗುವಿನ ಹಾಗೆಯೆ ಇರುತ್ತದೆಂದು ಅದರ ಲೇಖಕ ಸಿದ್ಧಾಂತ ಮಾಡಿ ದ್ದಾನೆ. ಅವನ ಜ್ಞಾನ ಎಷ್ಟೇ ಬೆಳೆದರೇನು–ಮನಸ್ಸು ಮಾತ್ರ ಇದ್ದ ಹಾಗೇ ಇರುತ್ತದಂತೆ.'

ವಿರಾಮಕುರ್ಚಿಯ ಮೇಲೊರಗಿ ಕುಳಿತಿದ್ದ ನಾಣಿ ಪಾಟೀಸವಾಲಿ ಗಾರಂಭಿಸಿದ.

'ತೆಗೆದ ಸೈಕಾಲಜೀನ! ಅದೊಂದು ಹುಚ್ಚು ಎದ್ದಿದೆ ಈಚೆಗೆ. ಅದೆಲ್ಲ ಶುದ್ಧ ತಲೆಹರಟೆ ಅಷ್ಟೆ! ಮನುಷ್ಯನ ಮನಸ್ಸು ಬೆಳೆಯೋದೇ ಇಲ್ಲ!–ಅಷ್ಟೂ ತಿಳಿಯೋದಿಲ್ಲವೇನು ನಮಗೆ?–ದಿನ ಕಳೆದಂತೆಲ್ಲ ಎಲ್ಲವೂ ಬೆಳೆಯಲೇ ಬೇಕು. ಒಂದು ಬೆಳೆದು ಇನ್ನೊಂದು ಹಾಗೇ ಇರುವದೆಂದರೆ ನಿಸರ್ಗ ನಿಯಮಕ್ಕೆ ವಿರುದ್ಧವೇ ಸರಿ. ಯಾರಿಗೂ ತಿಳಿಯದ ಹಾಗೆ ಒಂದು ಬುರುಡೆ ಹಾರಿಸಿಬಿಟ್ಟರಾಯಿತೇನು? ಎಂಟು ಮಕ್ಕಳನ್ನು ಈ ಭೂಮಿ ಗಿಳಿಸಿ, ತಲೆಯೆಲ್ಲ ಬೆಳ್ಳಗೆ ಮಾಡಿಕೊಂಡ ಮುದುಕನೂ ಮಗುವೇ ಈ ಮಾನಸಶಾಸ್ತ್ರಜ್ಞರ ದೃಷ್ಟಿಯಲ್ಲಿ. ಓ! ಅದು ನಿಜವೇ ಆದರೆ ಮತ್ತೆ

ಮೊದಲಿನಿಂದ ಜೀವನ ಸಾಗಿಸಬಹುದಲ್ಲ! ಮತ್ತೆ ಹುಡುಗನಾಗಬಹುದು-ತರುಣನಾಗಬಹುದು-ಮದುವೆಯಾಗಬಹುದು-ಚೈನಿ ಬಜಾವ್ ಮಾಡಬಹುದು....'

'ಏನೂ ತಿಳಿಯದೆ ಹುಚ್ಚುಚ್ಚು ಹರಟುತ್ತೀಯಲ್ಲೋ ನಾಣಿ! ಮಹಾಮಹಾ ಶಾಸ್ತ್ರಜ್ಞರು ಅನೇಕ ವರ್ಷಗಳ ಸಂಶೋಧನದಿಂದ ಮಾಡಿದ ಸಿದ್ಧಾಂತ ಇದು. ಮನುಷ್ಯನ ಮನಸ್ಸೂ ಮಗುವಿನ ಮನಸ್ಸೂ ಒಂದೇ. ಅನೇಕ ಬಾರಿ ತೀರ ಅಜ್ಞಾನಿಗಳಂತೆ ನಾವು ವರ್ತಿಸುವುದಕ್ಕೂ ಕಾರಣ ಇದೆ' ಎಂದ ವಸಂತ.

'ಹೀಗೆ ನೀನು ಹೇಳೋದಕ್ಕೆ ಆಧಾರ ಏನು?' ಎಂದು ಪ್ರಶ್ನೆ ಹಾಕಿದ ನಾಣಿ.

'ಆಧಾರ?-ಹೇಳಲು ಕೂತರೆ ರಾತ್ರಿಯಾದರೂ ಸಾಲಲಾರದು. ಎಷ್ಟೋ ಬಾರಿ ನಾವೆಲ್ಲರೂ ಮಗುವಿನಂತಾಗುತ್ತೇವೆ. ಆ ಕಾಲದಲ್ಲಿ ನಮ್ಮ ಬುದ್ಧಿ, ನಮ್ಮ ಜ್ಞಾನವಿಕಾಸ, ವಿವೇಕ, ಎಲ್ಲ ಮಾಯವಾಗುತ್ತದೆ. ಕಲ್ಲಿನಂತೆ ಗಟ್ಟಿಯಾಗಿರುವ ಹೃದಯವೇ ಕೆಲ ಸಂದರ್ಭಗಳಲ್ಲಿ ಬೆಣ್ಣೆಯಂತೆ ಮೃದುವಾಗುತ್ತದೆ....'

'ಬೆಣ್ಣೆ-ತುಪ್ಪಗಳ ಮಾತು ಬೇಡ ಮಹರಾಯಾ, ಯಾರ ಬಾಯಲ್ಲಾದರೂ ನೀರೂರೀತು. ಆ ಉಪಮಾಲಂಕಾರಗಳ ಮಾತು ಇಲ್ಲಿ ಬೇಕಿಲ್ಲ. ಪ್ರತ್ಯಕ್ಷ ದೃಷ್ಟಾಂತವೇ ಇಲ್ಲಿ ಪ್ರಮಾಣ. ಅದರ ವಿನಾ....'

ಅವನನ್ನು ನಡುವೆಯೆ ತಡೆದು ವಸಂತ ಹೇಳಿದ.

'ಪ್ರತ್ಯಕ್ಷ ಅನುಭವದಿಂದಲೇ ಈ ಮಾತು ಹೇಳುತ್ತಿದ್ದೇನೆ ಕಣೋ ನಾಣಿ. ಇದೇನೂ ಗಾಳಿಮಾತಲ್ಲ. ನೀವೆಲ್ಲಾ ಕೇಳಲು ಸಿದ್ಧರಿದ್ದರೆ ನಾನು ಹೇಳಲೂ ಸಿದ್ಧನಿದ್ದೇನೆ. ಆದರೆ ಅದೊಂದು ದೊಡ್ಡ ಕತೆ. ಎರಡು ಗಂಟೆಯಾದರೂ ಮುಗಿಯಲಿಕ್ಕಿಲ್ಲ....'

'ಪರವಾಯಿಲ್ಲ-ಹೇಳು. ಹೇಳು' ಎಂದು ಹತ್ತು ಕಂಠಗಳು ಒಮ್ಮೆಲೆ ಕಿರುಚಿಕೊಂಡವು.

ಕುರ್ಚಿಯ ಕೈಗಳ ಮೇಲೆ ಅಸ್ತವ್ಯಸ್ತವಾಗಿ ಕಾಲೂರಿ ಬಿದ್ದು

ಕೊಂಡಿದ್ದ ವಸಂತ ಎದ್ದು ಸರಿಯಾಗಿ ಕೂತುಕೊಂಡ. ಬದಿಯಲ್ಲಿದ್ದ ಪೊಟ್ಟಣದಿಂದ ಸಿಗರೇಟು ತೆಗೆದು ಹೊತ್ತಿಸಿಕೊಂಡ. ಕ್ಷಣಕಾಲ ಹೊಗೆ ಎಳೆಯುತ್ತಿದ್ದು ಮಾತಿಗಾರಂಭಿಸಿದ.

'ಒಂದು ವರ್ಷವಾಗುತ್ತ ಬಂತು ಆ ಘಟನೆ ನಡೆದು. ಆಪ್ತರೊಬ್ಬರನ್ನು ಕಾಣಲು ಬೆಂಗಳೂರಿಗೆ ಹೋಗಿದ್ದವನು ರಾತ್ರಿಯ ರೈಲಿನಿಂದ ಮರಳಿ ಹೊರಟಿದ್ದೆ. ಬೆಂಗಳೂರು ನಿಲ್ದಾಣ ಜನಗಳ ಗಲಾಟೆಯಿಂದ 'ಕಿರ್ರ್ಯೋ' ಎನ್ನುತ್ತಿತ್ತು. ಬಂಡಿಯಲ್ಲಿ ಸ್ಥಳ ಸಿಕ್ಕುವುದೂ ಕಷ್ಟವಾಗಿತ್ತು. ಹೇಗೋ ಏನೊ ಒಂದು ಡಬ್ಬಿಯಲ್ಲಿ ನನಗೂ ನನ್ನ ಸಾಮಾನುಗಳಿಗೂ ಸ್ಥಳ ಸಿಕ್ಕಿತು.

ಕಿಟಕಿಯ ಹತ್ತಿರದ ಸ್ಥಳ ಹಿಡಿದು ಕೂತುಕೊಂಡೆ. ಬಂಡಿ ಬಿಡುವುದಕ್ಕೆ ಇನ್ನೂ ಹದಿನೈದು ನಿಮಿಷ ಅವಕಾಶವಿತ್ತು. ಹಾಯಾಗಿ ಕೂತುಕೊಂಡು ಸಿಗರೇಟು ಹೊತ್ತಿಸುತ್ತ ಒಂದುಬಾರಿ ಡಬ್ಬಿಯಲ್ಲೆಲ್ಲ ದೃಷ್ಟಿ ಓಡಿಸಿದೆ. ಸ್ತ್ರೀ-ಪುರುಷರು, ಹುಡುಗ-ಹುಡುಗಿಯರು, ಮಕ್ಕಳು-ಸಾಮಾನುಗಳ ರಾಶಿ.... ಬೇರೆ ಬೇರೆ ಭಾಷೆ—ಬೇರೆ ಬೇರೆ ಕಂಠ—ತರತರದ ಬಟ್ಟೆಬರೆಗಳು. ಮೂರನೆಯ ವರ್ಗದ ಡಬ್ಬಿ ಎಂದರೆ ಒಂದು ಮಹಾಜಾತ್ರೆಯೆ ಸರಿ—ಎಂದುಕೊಂಡು ಪ್ಲಾಟ್‌ಫಾರ್ಮಿನ ಕಡೆ ದೃಷ್ಟಿ ಹೊರಳಿಸಿದೆ.

ಎರಡನೆಯ ಗಂಟೆ ಬಾರಿಸಿತು. ಇನ್ನು ಎರಡು ನಿಮಿಷಗಳಲ್ಲಿ ಬಂಡಿ ಹೊರಡಬೇಕು. ಅಷ್ಟರಲ್ಲಿ ಹತ್ತಿರದಲ್ಲೇ ಏನೋ ಬೊಬ್ಬೆಗಾರಂಭವಾಯಿತು. ಅದೇನೆಂದು ಅತ್ತ ಹೊರಳಿದೆ.

ದೃಢಕಾಯದ ಮುಹಮ್ಮದೀಯನೊಬ್ಬ ಡಬ್ಬಿಯ ಹಲಗೆಯ ಮೇಲೇರಿ, ಸಲಾಕೆಯನ್ನು ಹಿಡಿದುಕೊಂಡು ಒಳಕ್ಕೆ ಪ್ರವೇಶಿಸಲು ಹೊಡೆದಾಡುತ್ತಿದ್ದ. ಡಬ್ಬಿಯಲ್ಲಿ ಕೊಂಚವೂ ಸ್ಥಳವಿರಲಿಲ್ಲವೊ – ಇಲ್ಲ – ಅವನಿಗೆ ಸ್ಥಳಕೊಡಲು ಜನರಿಗೆ ಇಷ್ಟವಿರಲಿಲ್ಲವೊ—ಅಂತೂ ಎಲ್ಲರಿಂದಲೂ ವಿರೋಧವುಂಟಾಗುತ್ತಿತ್ತು. ಒಳಗಿನವರ ವಿರೋಧ ಹೆಚ್ಚಿದಂತೆಲ್ಲ ಅವನ ಆರ್ಭಟವೂ ಹೆಚ್ಚುತ್ತಿತ್ತು. ವಿಚಿತ್ರವಾದ ಉರ್ದುವಿನಲ್ಲಿ ಬೈಗಳ ಮಳೆಯೇ ಸುರಿಯುತ್ತಿತ್ತು ಅವನ ಮುಖದಿಂದ. ಒಳಗಿದ್ದವರೂ ಅವನಿಗೆ ಕಡಮೆಯವರಾಗಿರ

ಲಿಲ್ಲವೇನೊ! ಹರಕುಮುರುಕು ಹಿಂದಿಯಲ್ಲಿ ಅವರೂ ಬೈಗಳಮಾಲೆ ಅರ್ಪಿಸುತ್ತಿದ್ದರು.

ಆ ಗಲಾಟೆಯನ್ನು ಕಂಡು ರೈಲು ಅಧಿಕಾರಿಯೊಬ್ಬ ಧಾವಿಸಿಬಂದ. ಆ ಮುಹಮ್ಮದೀಯ ಅವನಿಗೂ ಸೊಪ್ಪುಹಾಕಲಿಲ್ಲ. 'ಗಾಡಿ ಯಾರಪ್ಪನದು? – ನಾ ಇಲ್ಲೇ ಹತ್ತುವವ! ಇವರೇನು ಮಾಡುತ್ತಾರೋ ನೋಡುತ್ತೇನೆ' ಎಂದು ಗೊಣಗುಟ್ಟುತ್ತ, ಬಾಗಿಲನ್ನು ನೂಕಿ ಒಳಕ್ಕೆ ಬರಲಾರಂಭಿಸಿದ.

ಆದರೆ ಒಳಗಿನ ಆಸಾಮಿಗಳು ಸುಮ್ಮನಿರಬೇಕಲ್ಲ. ನಾಲ್ಕಾರು ಜನ ಬಾಗಿಲಿಗೆ ಅಡ್ಡವಾಗಿ ನಿಂತುಕೊಂಡು ಬಿಗಿಯಾಗಿ ಅದನ್ನು ಹಿಡಿದುಕೊಂಡು ಅವನನ್ನು ಕೆಳಕ್ಕೆ ದೂಡಲು ಪ್ರಯತ್ನಿಸತೊಡಗಿದರು.

ಗಣಗಣ ಎಂದು ಬಾರಿಸಿತು ಕೊನೇ ಗಂಟೆ. ಗಾರ್ಡಿನ ಸಿಳ್ಳಿನ ಕರ್ಕಶ ಕೂಗು ಪ್ಲಾಟ್‌ಫಾರ್ಮಿನಲ್ಲೆಲ್ಲ ಧಮುಧುಮಿಸಿತು. ಇನ್ನೇನು ಬಂಡಿ ಹೊರಡಬೇಕು. ಅಷ್ಟರಲ್ಲಿ ಡಬ್ಬಿಯಲ್ಲಿನ ಗಲಭೆ ವಿಪರೀತವಾಯಿತು. ಆ ಮುಹಮ್ಮದೀಯನ ಆರ್ಭಟೆಯೂ ಹೆಚ್ಚತೊಡಗಿತು.

ಅದೇಕೊ ಏನೊ ತಿಳಿಯದು. ಅಂತೂ ಆ ಅನ್ಯಾಯ ನನಗೆ ಸರಿಯೆನ್ನಿಸಲಿಲ್ಲ. ತಕ್ಷಣ ಎದ್ದು ಬಾಗಿಲಿನ ಬಳಿ ಹೋಗಿ 'ಬರಲಿ ಬಿಡಿ ಪಾಪ! ಗಾಡಿಯೂ ಹೊರಟಿತು!' ಎಂದು ಹೇಳಿ ಜನರನ್ನು ಆಚೆ ಸರಿಸಿ ಆತನನ್ನು ಒಳಕ್ಕೆಳೆದುಕೊಂಡೆ.

ಆ ಮನುಷ್ಯ ಒಳಕ್ಕೆ ಬಂದವನೆ ಕೃತಜ್ಞತೆ ತುಂಬಿದ್ದ ದೃಷ್ಟಿಯನ್ನು ನನ್ನ ಕಡೆ ಹೊರಳಿಸಿದ. ಡಬ್ಬಿಯಲ್ಲಿದ್ದ ಮುಖಗಳೆಲ್ಲ ಅವನನ್ನು ವಿರೋಧ ಭಾವದಿಂದ ನಿರೀಕ್ಷಿಸುತ್ತಿದ್ದುವು.. ಸಹಾನುಭೂತಿಯ ದೃಷ್ಟಿ ನನ್ನದೊಂದೇ ಒಂದು. ಆತನನ್ನು ಒಳಕ್ಕೆ ಕರೆದುಕೊಂಡುದೇನೊ ಆಯಿತು. ಆದರೆ ಸ್ಥಳ ಸಂಪಾದಿಸಿ ಕೊಡಬೇಕಲ್ಲ! ಮೊದಲೇ ಕಿಕ್ಕಿರಿದು ತುಂಬಿದ್ದ ಡಬ್ಬಿಯಲ್ಲಿ ಇನ್ನೊಂದು ಶರೀರಕ್ಕೆ ಸ್ಥಳವೆಲ್ಲಿ? 'ಬೇಡ ಬೇಡ ಅಂದ್ರೆ ಈ ಮುಟ್ಠಾಳನನ್ನು ಕರೆದುಕೊಂಡಿರಿ. ಇನ್ನು ನಿಮ್ಮ ಜಾಗವನ್ನೇ ಅವನಿಗೆ ಕೊಡಿ' ಎಂದು ಹತ್ತಿರದ ಪ್ರವಾಸಿಯೊಬ್ಬ ವ್ಯಂಗ್ಯಸ್ವರದಲ್ಲಿ ಹೇಳಿದ.

'ಹಾಗೇ ಆಗಲಿ' ಎಂದುಕೊಂಡು ಆತನಿಗೆ ನನ್ನ ಸ್ಥಳದಲ್ಲಿ ಕೂತಿರ ಹೇಳಿ ನಾನು ನಿಂತುಕೊಂಡುಬಿಟ್ಟೆ.

ಆತ ಕೂತುಕೊಳ್ಳಲಿಲ್ಲ. 'ಆಪ್ ಕ್ಯೋಂ ಖಡೇ ರಹೇಂಗೆ? ಬೈಠಿಯೆ. ಮೈ ಭಿ ಖಡಾ ರಹತಾ ಹೂಂ'. ಎಂದು ಹೇಳುತ್ತಾ ನನ್ನನ್ನು ಕೂತುಕೊಳ್ಳುವಂತೆ ಒತ್ತಾಯಪಡಿಸಿದ- ಇನ್ನೇನು ಮಾಡುವುದು? ಹಾಸುಗೆಯ ಸುರುಳಿಯನ್ನು ಕೂಡಿಗೆಳೆದುಕೊಂಡು ಅದರ ಮೇಲೆ ಕುಳಿತುಕೊಂಡೆ.

ಮಾತುಕತೆಗಾರಂಭವಾಗಲು ಇಷ್ಟು ಪ್ರಸ್ತಾವನೆ ಸಾಕಾಗಿತ್ತು. ತನ್ನ ಉದ್ದವಾದ ಕೋಟಿನ ಜೇಬಿನಿಂದ ಸಿಗರೇಟು ಡಬ್ಬಿ ತೆಗೆದು ಆ ಗೃಹಸ್ಥ 'ಲೀಜಿಯೆ' ಎಂದು ನನಗೊಂದು ಕೊಟ್ಟ. ತಾನೊಂದು ಹೊತ್ತಿಸುತ್ತ ಪ್ರಾರಂಭಿಸಿದ- ಅರ್ಥಾತ್ ಹಿಂದೂಸ್ತಾನಿಯಲ್ಲೇ.

'ಎಲ್ಲಿಗೆ ಪ್ರಯಾಣ?'

'ಹುಬ್ಬಳ್ಳಿಗೆ' ಎಂದು ಉತ್ತರವಿತ್ತು ಒಂದು ಬಾರಿ ಆತನನ್ನು ತಲೆಯಿಂದ ಕಾಲಿನವರೆಗೆ ದಿಟ್ಟಿಸಿ ನೋಡಿದೆ.

ಮಧ್ಯಮ ವರ್ಗದ ಮಹಮ್ಮದೀಯರ ವೇಷ. ಕಂದು ಬಣ್ಣದ ಉದ್ದ ಕೋಟಿನ ಕೆಳಗಡೆ ಸಡಿಲಾದ ಪಾಯಿಜಾಮೆ. ಕಾಲಿಗೆ ಪಂಪ್ ಶೂಸು. ತಲೆಯ ಮೇಲೆ ಇರಾಣಿ ಟೋಪಿ. ಉಗ್ರವಾಗಿ ತೋರುವ ಮುಖ. ತೀಕ್ಷ್ಣವಾದ ದೃಷ್ಟಿ. ಡಬ್ಬಿಯಲ್ಲಿನ ವಿದ್ಯುದ್ದೀಪಗಳ ಕಿರಣಗಳಿಂದಾಗಿ ಆ ದೃಷ್ಟಿಯ ತೀಕ್ಷ್ಣತೆ ಇನ್ನೂ ಹೆಚ್ಚುತ್ತಿತ್ತು.

ನನ್ನ ದೃಷ್ಟಿ ಮತ್ತೊಂದು ಬಾರಿ ಡಬ್ಬಿಯಲ್ಲೆಲ್ಲ ಸುತ್ತುವರೆಯಿತು. ಆ ವ್ಯಕ್ತಿಯ ಆಗಮನದಿಂದ ಅನೇಕರು ಕೊಂಚ ದಿಗಿಲುಗೊಂಡ ಹಾಗೆಯೆ ಕಾಣುತ್ತಿತ್ತು. ಆ ಮನುಷ್ಯ ಏನು ಮಾಡುವನೊ—ಎಲ್ಲಿ ಗಲಾಟೆಮಾಡಿ ಅನಾಹುತ ನಡೆಸುವನೋ ಎಂದು ಎಲ್ಲರಲ್ಲೂ ಸಂದೇಹ ಸುಳಿಯುತ್ತಿದ್ದುದು ಕಾಣಿಸಿತು.

ಆ ಭೀತಿ, ಆ ಸಂದೇಹಗಳನ್ನು ಕಂಡು ಮನಸ್ಸಿನಲ್ಲೇ ನಕ್ಕುಬಿಟ್ಟು ನಾನು ಆತನ ಕಡೆ ಹೊರಳಿದೆ. ಆಷ್ಟರಲ್ಲಿ ಕೈಲಿದ್ದ ಸಿಗರೇಟು ಬಿಸಾಡಿ ಇನ್ನೊಂದಕ್ಕೆ ಬೆಂಕಿ ಹಚ್ಚಿಸುತ್ತಿದ್ದನಾತ.

'ತಾವು ಎಲ್ಲಿಗೆ?' ಎಂದೆ.

'ಬೊಂಬಾಯಿಗೆ! ಹುಬ್ಬಳ್ಳಿಯವರಿಗಾದರೂ ತಮ್ಮಂಥವರೊಬ್ಬರ ಜೊತೆ ಸಿಕ್ಕಿತಲ್ಲಾ ಅಂತ ಸಂತೋಷ ನನಗೆ. ಈ ನಮ್ಮ ಕೆಟ್ಟ ದೇಶದಲ್ಲಿ ತಮ್ಮಂಥ ಸಹಾನುಭೂತಿಯ ಜನ ತೀರ ಕಡಿಮೆ ಸಾರ್. ಈಗಲೇ ನೀವೇ ನೋಡಿದಿರಲ್ಲ! ಡಬ್ಬಿಯಲ್ಲಿ ಸ್ಥಳಕೊಡಲು ಸಹ ಸಿದ್ಧರಿರಲಿಲ್ಲ ಈ ಜನ. ಅದೂ ಅವರಪ್ಪನ ಗಾಡಿಯಲ್ಲ! ನಾನೂ ಟಿಕೆಟ್ ಕೊಂಡುಕೊಂಡು ಬಂದಿರುವವ. ಆದರೂ ಜನರ ವಿರೋಧವೆ! ಇನ್ನು ತಮ್ಮ ಮನೇಲಿ ಕರೆದುಕೊಳ್ಳುವ ಪ್ರಸಂಗ ಬಂದರೇನು ಮಾಡುವರೊ! ಕತ್ತು ಹಿಡಿದು ದಬ್ಬುವ ಜನರೇ ಸರಿ!' ಎಂದು ಹೇಳುತ್ತಾ ಆತ ಒಂದು ಬಾರಿ ಡಬ್ಬಿಯಲ್ಲಿನ ಜನರನ್ನೆಲ್ಲ ಕ್ರೂರ ದೃಷ್ಟಿಯಿಂದ ನಿಟ್ಟಿಸಿ ನೋಡಿದ. ಆ ದೃಷ್ಟಿಯಿಂದ ಎಷ್ಟು ಜನರ ಎದೆಯ ಹೊಡೆತ ಹೆಚ್ಚಿತೋ ತಿಳಿಯದು.

'ಹೋಗಲಿ ಬಿಡಿ ಜನಾಬ್! ರೈಲಿನಲ್ಲೂ, ಸಿನಿಮಾದಲ್ಲೂ ಜನರ ವರ್ತನೆಯೇ ಹೀಗೆ!' ಎಂದು ಹೇಳಿ ಆತನನ್ನು ಸಮಾಧಾನಪಡಿಸಲು ಪ್ರಯತ್ನಿಸಿದೆ.

ಸಮಾಧಾನವಾಗಲಿಲ್ಲ ಆತನಿಗೆ! ರೋಷ ಇನ್ನೂ ಹೆಚ್ಚಾಯಿತು. ತಿರಸ್ಕಾರದಿಂದ ಹೇಳಿದ.

'ಹಿಂದೂಸ್ಥಾನ ಸಾರ್ — ಇದು ಹಿಂದೂಸ್ಥಾನ್! ಅದೇ ಇಂಗ್ಲಂಡಿನಲ್ಲಿ ನೋಡಬೇಕು. ರೈಲಿನಲ್ಲೇ ಆಗಲಿ, ಸಿನಿಮಾನಲ್ಲೇ ಆಗಲಿ, ಜನ ಎಷ್ಟು ಶಾಂತವಾಗಿ, ಸುವ್ಯವಸ್ಥಿತವಾಗಿ ವರ್ತಿಸುತ್ತಾರೆ! ಬೇರೆಯವರು ಬಂದರೆ ತಮ್ಮ ಸ್ಥಳ ಬಿಟ್ಟುಕೊಡುವರೇ ವಿನಾ ಕಲಹಕ್ಕೆ ನಿಲ್ಲುವುದಿಲ್ಲ. ನಾನು ಲಂಡನ್ನಿಗೆ ಹೋಗಿದ್ದಾಗ ಆ ಶಿಸ್ತು, ಶಿಷ್ಟಾಚಾರ, ಸುವ್ಯವಸ್ಥೆ ಕಂಡು ಬಾಯಲ್ಲಿ ಬೆರಳಿಟ್ಟುಕೊಂಡೆ!'

'ಓಹೋ! ಇಂಗ್ಲಂಡಿಗೂ ಹೋಗಿದ್ದರೇನು ನೀವು?' ಎಂದು ವಿಸ್ಮಯದಿಂದ ಕೇಳಿದೆ.

'ಮೂರು ಬಾರಿ ಹೋಗಿದ್ದೆ. ಗಿರಣಿಗೆ ಯಂತ್ರ ಕೊಳ್ಳುವ ನಿಮಿತ್ತವಾಗಿ ಲಂಡನ್, ಪ್ಯಾರಿಸ್ ಎಲ್ಲ ಸುತ್ತಿಕೊಂಡು ಬಂದೆ!'

'ಗಿರಣಿ? ಎಲ್ಲಿದೆ ಅದು?'

'ಬೊಂಬಾಯಲ್ಲಿದೆ. ಹದಿನೈದು ಸಾವಿರ ಜನ ಅಲ್ಲಿ ಕೆಲಸಮಾಡುತ್ತಿದಾರೆ' ಎಂದು ಹೇಳುತ್ತ ಆತ ಹೆಸರಿನ ಚೀಟಿಯೊಂದನ್ನು ತೆಗೆದು ನನ್ನ ಕೈಗಿತ್ತ.

'ಇಸ್ಮಾಯಿಲ್ ಸೇಟ್,
ಪ್ರೊಪ್ರೈಟರ್,
ಅಜಾದ್ ಮಿಲ್ಸ್, ಬೊಂಭಾಯಿ.

—ನನ್ನ ಹತ್ತಿರ ಕುಳಿತ ಈ ವ್ಯಕ್ತಿ ಭಾರಿ ಗಿರಣಿಯೊಂದರ ಒಡೆಯ! ಸರಿ! ಅವನ ಬಗ್ಗೆ ನನ್ನಲ್ಲುಂಟಾಗಿದ್ದ ಆಸಕ್ತಿ ಇನ್ನೂ ಹೆಚ್ಚಾಯಿತು. ಮಿಂಚು ಹೊಳೆದಾಗ ಕಣ್ಣು ಕುಕ್ಕಿಹೋಗಿ ನನಗೇನೂ ಕಾಣಿಸದಂತಾಗುವುದಿಲ್ಲವೆ?– ಆಗಲೂ ಹಾಗೇ ಆಯಿತು. ಇಂಥ ದೊಡ್ಡ ಗೃಹಸ್ಥನೊಬ್ಬನ ಸ್ನೇಹ ದೊರೆಯಿತಲ್ಲಾ ಎಂದು ನನಗೆ ಸಂತೋಷವೂ ಆಯಿತು.

'ಆದರೆ– ಈಗ ಆ ಗಿರಣಿ ನನ್ನದಾಗಿಲ್ಲ, ಅದು ಸಾಲದಲ್ಲಿ ಹರಾಜಿಗೆ ಹೋಗಿ ಬೇರೆಯವರ ಪಾಲಾಗಿ ಇಂದಿಗೆ ಆರು ವರ್ಷವಾಯಿತು' ಎಂದು ಇಸ್ಮಾಯಿಲ್ ಬಾಂಬು ಹಾಕಿದ.

ಸಹಾನುಭೂತಿಯಿಂದ ನಾನಾತನ ಕಡೆ ನೋಡಿದೆ. ಆ ಕಣ್ಣುಗಳಲ್ಲಿ ವಿಷಾದದ ಛಾಯ ಮೂಡಿದ ಹಾಗೆ ಕಾಣಿಸುತ್ತಿತ್ತು.

'ಅಂತೆಯೆ ನಾನೀಗ ಥರ್ಡ್ ಕ್ಲಾಸಿನಲ್ಲಿ ಪ್ರವಾಸ ಮಾಡಬೇಕಾಗಿದೆ. ಗಿರಣಿಯೊಡೆಯನಾಗಿದ್ದಾಗ, 'ಫಸ್ಟ್‌ಕ್ಲಾಸಿಗಿಂತ ಹೆಚ್ಚಿನದಾದ ಒಂದು ಕ್ಲಾಸ್ ಇದ್ದರೆ!' ಎಂದುಕೊಳ್ಳುತ್ತಿದ್ದ ನನಗೆ ಇಂದು ಈ ಸ್ಥಿತಿ ಬಂದಿದೆ. ಖುದಾಕೀ ಮರ್ಜೀ!' ಎಂದು ಹೇಳಿ ಇಸ್ಮಾಯಿಲ್ ನಿಟ್ಟುಸಿರು ಹಾಕಿದ.

ಇಷ್ಟರಲ್ಲಿ ತುಮಕೂರು ಬಂತು. ಡಬ್ಬಿಯಲ್ಲಿದ್ದ ಮುಕ್ಕಾಲುಪಾಲು ಜನರೆಲ್ಲ ಅಲ್ಲಿಯೆ ಇಳಿದುಬಿಟ್ಟರು.

'ಚೆನ್ನಾಯಿತು ಬಿಡಿ. ಆ ಪೀಡೆಗಳೆಲ್ಲ ತೊಲಗಿದುವು. ಇನ್ನು ನಾವಿಬ್ಬರೂ ನಿಸ್ಸಂಕೋಚವಾಗಿ ಮಾತನಾಡಿಕೊಂಡು ಹೋಗಬಹುದು' ಎಂದ ಇಸ್ಮಾಯಿಲ್.

ಬಂಡಿ ಮತ್ತೆ ವೇಗದಿಂದ ಧಾವಿಸತೊಡಗಿತು. ಅದರೊಂದಿಗೆ ಇಸ್ಮಾಯಿಲನ ವಾಣಿಯೂ ಧಾವಿಸತೊಡಗಿತು.

'ಅರಸನಾಗಿದ್ದ ಮನುಷ್ಯ ಒಂದು ಕ್ಷಣದಲ್ಲೇ ತಿರುಕನಾಗಿ ಬಿಡುತ್ತಾನೆ ಎನ್ನುವುದಿಲ್ಲವೆ? – ಹಾಗಾಯಿತು ನನ್ನ ಪಾಡು. ಸುಖದ ಶಿಖರಕ್ಕೇರಿದ್ದ ನಾನು ಅರೆನಿಮಿಷದಲ್ಲೇ ದುಃಖದ ಅಧೋಪಾತಾಳಕ್ಕುರುಳಿಬಿದ್ದೆ. ಬಿದ್ದು ಚೆನ್ನಾಗಿ ಏಟುಬಿದ್ದಾಗ ನನಗೆಚ್ಚರವಾಯಿತು. ಅದುವರೆಗೂ ಎಚ್ಚರವೇ ಇರಲಿಲ್ಲ ನನಗೆ. ನಾನೀ ಜಗತ್ತಿನಲ್ಲಿರುವನೆಂದೇ ಅನ್ನಿಸುತ್ತಿರಲಿಲ್ಲ. ಕೆಳಕ್ಕೆ ಬಿದ್ದುಬಿಟ್ಟಾಗ ಮೊದಲಬಾರಿ ಆಯಿತು ಆ ಅರಿವು. ಎದ್ದು ಕಣ್ಣುಜ್ಜಿಕೊಂಡು ಸುತ್ತಲೂ ನೋಡಿದೆ. 'ಎಂಥಾ ವಿಚಿತ್ರ ಸೃಷ್ಟಿ ಇದು!' ಎಂದು ಆಶ್ಚರ್ಯವಾಯಿತು ನನಗೆ. ಇದುವರೆಗೂ ಸಂಪತ್ತು ನನ್ನ ಮನೆಯ ಆಳಾಗಿತ್ತು. ಈಗಲಾದರೊ – ನಾನೇ ಬೇರೆಯವರ ಆಳಾಗಬೇಕಾದ ಸಂದರ್ಭ ಬಂತು....'

ಸಹಾನುಭೂತಿಯಿಂದ ನಾನಾತನ ಮಾತು ಕೇಳುತ್ತ ಕುಳಿತಿದ್ದೆ. ನಡುಗುತ್ತ ನಡುಗುತ್ತ ಹೊರಡುತ್ತಿತ್ತು ಆ ಧ್ವನಿ.

'ನಿಮ್ಮ ಜೀವನದಲ್ಲಿ ಇಂಥ ದೊಡ್ಡ ಬದಲಾವಣೆಯಾಗಲು ಏನು ಕಾರಣವಾಯಿತು?' ಎಂದು ಕೇಳಿದೆ.

'ಧನಿಕರು ದಿವಾಳಿ ತೆಗೆಯೋದೇತಕ್ಕಾಗಿ ಎಂಬುದು ಗೊತ್ತಿರಬೇಕು ನಿಮಗೆ. ಸಟ್ಟಾ, ಲಾಟ್ರಿ, ರೇಸು ಇದ್ದೇ ಇರುತ್ತವಲ್ಲ! ಜೊತೆಗೆ ಮದಿರಾದೇವಿಯ ಮೋಹವೂ ನಮ್ಮನ್ನು ಮೂಢರನ್ನಾಗಿ ಮಾಡಿರುತ್ತದೆ. ಭೂತಕಾಲ – ಭವಿಷತ್ ಕಾಲಗಳ ಕಲ್ಪನೆಯೇ ಆಗ ನಮಗಿರುವುದಿಲ್ಲ. ವರ್ತಮಾನಕಾಲದ ಮೋಹಿನಿ ನಮ್ಮ ಕಣ್ಣಿನ ಮೇಲೆ ಪರದೆಯೆಳೆದು ನಮ್ಮನ್ನು ಅಂಧರನ್ನಾಗಿ ಮಾಡಿರುತ್ತಾಳೆ. ಚಟ! ಚಟ! ಚಟ! ಮನುಷ್ಯ ತನ್ನ ಮನುಷ್ಯತ್ವವನ್ನು ಕಳೆದುಕೊಂಡು ಪಶುವಿಗಿಂತ ಕೀಳಾಗಿ ವರ್ತಿಸುವುದಕ್ಕೆ, ಸುತ್ತುಮುತ್ತಲು ಬಡವರ ರೋದನ ಸ್ವರ ಕೇಳಿಸುತ್ತಿದ್ದರೂ ಅದಕ್ಕೆ ಕಿವಿಗೊಡದೆ ಶ್ರೀಮಂತರು ತಮ್ಮ ಲೀಲಾವಿಲಾಸಗಳಲ್ಲೇ ಮಗ್ನರಾಗಿರುವುದಕ್ಕೆ ಈ ಕೆಟ್ಟ ಚಟಗಳೇ ಕಾರಣ. ಕುಡಿತದ ಚಟವೊಂದೇ ಸಾಲದೆ – ಸಟ್ಟಾ,

ಲಾಟ್ರಿ, ಜೂಜುಗಳೂ ನನ್ನನ್ನು ಕುರುಡನನ್ನಾಗಿ ಮಾಡಿಬಿಟ್ಟವು. ರೇಸಿನಲ್ಲಂತೂ ನನ್ನ ರಾಶಿ ರಾಶಿ ಹಣ ಸೂರೆಯಾಯಿತು. ಹತ್ತಿರ ಇದ್ದ ಹಣವೆಲ್ಲ ಹಾಳಾಯಿತು. ಜೊತೆಯಲ್ಲೇ ಸಾಲಕ್ಕೂ ಪ್ರಾರಂಭವಾಯಿತು. ಆಗಲಾದರೂ ತೆರೆಯಬೇಕಿತ್ತು ನನ್ನ ಕಣ್ಣು. ಇಲ್ಲ. ತೆರೆಯಲಿಲ್ಲ! ನನ್ನ ಸರ್ವಸ್ವವೆಲ್ಲ ನಾಶವಾಗಿ, ಸಾಲದಲ್ಲಿ ಗಿರಣಿ ಹರಾಜಿಗೆ ಹೋಗಿ – ನಾನು ನನ್ನ ಹೆಂಡಿರು ಮಕ್ಕಳೊಂದಿಗೆ ಬೀದಿಯ ಭಿಕಾರಿಯಾದಾಗ ನನ್ನ ಕಣ್ಣು ನಿಚ್ಚಳವಾಗಿ ತೆರೆದುವು. ಜೀವನವೂ ಒಂದು ಜೂಜು ಎಂದು ಅದುವರೆಗೂ ನಾನು ಭಾವಿಸಿದ್ದೆ. ಹೆಂಡಿರು ಮಕ್ಕಳೊಂದಿಗೆ ಫುಟ್‌ಪಾತ್ ಮೇಲೆ ಬಂದು ಬಿದ್ದಾಗ ಮಾತ್ರ ಜೀವನವೊಂದು ಯುದ್ಧ – ಎಂಬ ಅರಿವಾಯಿತು....'

ಆತನ ವಿಪತ್ತುಗಳ ಕತೆ ಕೇಳಿ ನನ್ನ ಹೃದಯ ಕರಗಿಹೋಗಿತ್ತು. ಅವನ ಹೆಂಡಿರು ಮಕ್ಕಳ ಕರುಣಾಜನಕ ಸ್ಥಿತಿಯನ್ನು ನೆನೆದುಕೊಂಡಾಗ ಕಳವಳ ತುಂಬಿ ಬಂದಿತು.

'ಈಗ ಎಲ್ಲಿದ್ದೀರಿ? ಏನು ಕೆಲಸ ಮಾಡುತ್ತಿದ್ದೀರಿ?' ಎಂದು ಕೇಳಿದೆ.

'ಅಲ್ಲಾನ ಕೃಪೆಯಿಂದ ಮತ್ತೆ ನನ್ನ ಪರಿಸ್ಥಿತಿ ಸುಧಾರಿಸಿದೆ. ಫುಟ್‌ಪಾತ್ ನಮ್ಮ ಶಿಬಿರವಾಗಿದ್ದುದು ತಪ್ಪಿ ಈಗ ಮತ್ತೆ ಪುಟ್ಟದಾದರೂ ಅನುಕೂಲವಾದ ಬಂಗಲೆ ದೊರೆತಿದೆ – ಬೊಂಬಾಯಲ್ಲಿ. ಬೇರೆ ಒಂದು ಗಿರಣಿಯಲ್ಲಿ ಮ್ಯಾನೇಜರ್ ಕೆಲಸವೂ ದೊರೆತಿದೆ. ಸಂಸಾರ ಸುಖವಾಗಿಯೇ ನಡೆದಿದೆ.'

ಮಾತು ಮುಗಿಯಬೇಕಾದರೆ ಮಧ್ಯರಾತ್ರಿಯಾಗಿ ಹೋಗಿತ್ತು. ಅರಸೀಕೆರೆ ಸ್ಟೇಷನ್ನಿಗೆ ಬಂದು ಬಂಡಿ ನಿಂತುಕೊಂಡಿತು. ನೊಂದ ಹೃದಯಗಳನ್ನು ಕಾಫಿಯಿಂದ ಕೊಂಚ ಶಾಂತಗೊಳಿಸೋಣವೆಂದುಕೊಂಡು ಇಸ್ಮಾಯಿಲನೊಂದಿಗೆ ಡಬ್ಬಿಯಿಂದಿಳಿದೆ, ಪ್ಲಾಟ್‌ಫಾರ್ಮಿನ ಮೇಲಿನ ಉಪಾಹಾರ ಗೃಹದಲ್ಲಿ ತಿಂಡಿ ತಿಂದು, ಕಾಫಿ ಕುಡಿದೆವು.

ದುಡ್ಡು ಕೊಡುವುದಕ್ಕಾಗಿ ಹಣದ ಚೀಲ ತೆಗೆದೆ. ನೋಡಿದರೆ ಕೊಂಚವಾದರೂ ಚಿಲ್ಲರೆಯಿರಬೇಡವೆ! ಬರೀ ಐದು ರೂಪಾಯಿನ ನೋಟುಗಳೇ! ಬೆಂಗಳೂರು ಸ್ಟೇಷನ್ನಿನಲ್ಲಿ ಟಿಕೆಟ್ ತೆಗಿಸಿದ ಬಳಿಕ ಉಳಿದ

ಚಿಲ್ಲರೆಯನ್ನೆಲ್ಲ ಸಿಗರೇಟು ಕೊಳ್ಳಲು ವೆಚ್ಚಮಾಡಿದುದರ ನೆನಪಾಯಿತು. ಕಾಫಿ ಅಂಗಡಿಯವರಲ್ಲೂ ಚಿಲ್ಲರೆಯಿರಲಿಲ್ಲ. ಈ ತೊಡಕು ನೋಡುತ್ತ ನಿಂತಿದ್ದ ಇಸ್ಮಾಯಿಲ್ ನಾನು ಬೇಡ ಬೇಡ ಅನ್ನುತ್ತಿದ್ದರೂ ತಾನೇ ಹಣ ಕೊಟ್ಟುಬಿಟ್ಟ.

ಇಬ್ಬರೂ ಮತ್ತೆ ಡಬ್ಬಿಯನ್ನೇರಿದೆವು. ಮಧ್ಯರಾತ್ರಿ ಮೀರಿ ಹೋಗಿದ್ದುದರಿಂದ ನನಗೆ ತೂಕಡಿಸುವುದಕ್ಕೆ ಮೊದಲಾಯಿತು. ಸ್ಥಳವೂ ಸಾಕಷ್ಟಿತ್ತು. ಹಾಸಿಗೆ ಸುರುಳಿಯನ್ನು ಬಿಚ್ಚಿ ಹಾಸಿ ಹಾಯಾಗಿ ಅದರ ಮೇಲೊರಗಿಕೊಂಡೆ. ಪಕ್ಕದ ಬೆಂಚಿನ ಮೇಲೆ ಇಸ್ಮಾಯಿಲನೂ ಮಲಗಿಕೊಂಡ.

ಕತ್ತಲೆಯನ್ನು ಭೇದಿಸಿಕೊಂಡು ಬಂಡಿ ಭರದಿಂದ ಮುಂದುವರೆಯುತ್ತಿತ್ತು. ಆದರ ಆ ಕರ್ಣಕಠೋರ ಸದ್ದಿನ ಮಧ್ಯೆ ನಿದ್ರೆಯ ರಾಣಿ ನನ್ನ ಮೇಲೆ ಯಾವಾಗ ಕೈ ಆಡಿಸಿದಳೋ ತಿಳಿಯಲಿಲ್ಲ.

ಹಾಗೆ ಎಷ್ಟುಹೊತ್ತು ನಿದ್ರೆಹೋಗಿದ್ದೆನೋ ತಿಳಿಯದು. ಜನಗಳ ಕರ್ಕಶ ಕೂಗಿನಿಂದ ಒಮ್ಮೆಲೆ ಎಚ್ಚರವಾಯಿತು.

ಕಣ್ಣುಜ್ಜಿಕೊಳ್ಳುತ್ತ ಎದ್ದು ಕುಳಿತೆ. ಹರಿಹರ ನಿಲ್ದಾಣದ ಶಿಲಾಪಟ ಎದುರಿಗೇ ಕಾಣಿಸುತ್ತಿತ್ತು.

ಚೆನ್ನಾಗಿ ಬೆಳಗಾಗಿತ್ತು. ಗೂಡಿಗೆ ಸೇರುವ ಇರುವೆಗಳ ಹಾಗೆ ಜನ ಡಬ್ಬಿಯಲ್ಲಿ ನುಗ್ಗುತ್ತಿದ್ದರು.

ಇಸ್ಮಾಯಿಲನನ್ನೆಬ್ಬಿಸೋಣವೆಂದು ಪಕ್ಕದ ಬೆಂಚಿನ ಕಡೆ ದೃಷ್ಟಿ ಹೊರಳಿಸಿದೆ. ಅಲ್ಲಿ ಆತನಿರಲಿಲ್ಲ. ಪ್ರಾತರ್ವಿಧಿ ತೀರಿಸಿಕೊಳ್ಳಲು ಹೋಗಿದ್ದಾನು ಎಂದುಕೊಂಡು ಕೆಳಕ್ಕಿಳಿದು ಹೋಗಿ ಮುಖ ತೊಳೆದುಕೊಂಡೆ. ಶೌಚದ ಡಬ್ಬಿಗೆ ಹೋಗಿದ್ದ ಇಸ್ಮಾಯಿಲ್ ಈಗ ಬಂದಾನು - ಇನ್ನೊಂದು ನಿಮಿಷಕ್ಕೆ ಬಂದಾನು ಎಂದು ಕಾಯುತ್ತ ನಿಂತೆ.

ಎಷ್ಟು ಹೊತ್ತಾದರೂ ಆತ ಹೊರಕ್ಕೆ ಬರಲಿಲ್ಲ. ಕಾದು ಕಾದು ಬೇಸರವಾಗಲು ಮತ್ತೆ ಡಬ್ಬಿಗೆ ಬಂದೆ. ಶೌಚದ ಡಬ್ಬಿ ತೆರೆದು ನೋಡಿದೆ. ಅಲ್ಲೂ ಇರಲಿಲ್ಲ ಇಸ್ಮಾಯಿಲ್.

ಎಲ್ಲಿ ಹೋದನೋ ಈ ವಿಲಕ್ಷಣ ಮನುಷ್ಯ ಎಂದು ಗೊಣಗುಟ್ಟುತ್ತ ನನ್ನ ಜಾಗಕ್ಕೆ ಬಂದು ಕೂತುಕೊಳ್ಳುವುದರಲ್ಲಿದ್ದೆ. ಅಷ್ಟರಲ್ಲಿ ಪೋಲೀಸು ಅಧಿಕಾರಿಯೊಬ್ಬ ಹಠಾತ್ತಾಗಿ ಡಬ್ಬಿಯಲ್ಲಿ ಬಂದ. ಕುಳಿತಿದ್ದವರನ್ನೆಲ್ಲ ಒಂದು ಬಾರಿ ತೀಕ್ಷ್ಣದೃಷ್ಟಿಯಿಂದ ನಿಟ್ಟಿಸಿನೋಡಿ ಕೇಳಿದ.

'ಈ ಡಬ್ಬಿಯಲ್ಲಿದ್ದ ಮುಸಲ್ಮಾನ್ ಬದ್ಮಾಷನೊಬ್ಬ ಎಲ್ಲಿದ್ದಾನೆ ನಿಮಗೆ ಗೊತ್ತೇ?'

ಮುಸಲ್ಮಾನ್ ಬದ್ಮಾಷ್! ಅಂದರೆ ಯಾರೊ? ಇಸ್ಮಾಯಿಲನೊ ಏನು-- ಎಂದುಕೊಳ್ಳುತ್ತ ಆ ಅಧಿಕಾರಿಯನ್ನು ವಿಚಾರಿಸಿದೆ.

'ಯಾಕೆ? ಆತನ ವಿಚಾರ ಏನು?'

'ಮಹಾಕಳ್ಳ ಆತ. ಬೆಂಗಳೂರಿನಲ್ಲಿ ಐದುಸಾವಿರ ರೂಪಾಯಿ ಕಳವುಮಾಡಿ ಫರಾರಿಯಾಗಿದ್ದಾನೆ. ರಾತ್ರಿ ನನಗೆ ಸುದ್ದಿಬಂತು. ದಾವಣಗೆರೆಯಲ್ಲಿ ಹಿಡಿಯೋಣ ಎಂದರೆ ಸಾಧ್ಯವಾಗಲಿಲ್ಲ. ಈ ಡಬ್ಬಿಯಲ್ಲಿ ಆತನ ಮುಖವೂ ಕಾಣಿಸಿದ ಹಾಗೆ ಭಾಸವಾಗಿತ್ತು. ಹರಿಹರದಲ್ಲಿ ಅರೆಸ್ಟ್ ಮಾಡೋಣವೆಂದು ಹೊಂಚುಹಾಕಿದ್ದೆ. ಆ ಬದ್ಮಾಷನಿಗೆ ಅದರ ಸುಳಿವು ಹೇಗೆ ಗೊತ್ತಾಯಿತೋ ತಿಳಿಯದು. ಇಷ್ಟರಲ್ಲೇ ಫರಾರಿಯಾಗಿಬಿಟ್ಟಿದ್ದಾನೆ! ನಿಮಗೇನಾದರೂ ಗೊತ್ತೋ?' ಎಂದರು.

'ಇಲ್ಲ ಸಾರ್. ನಾನು ಅರಸೀಕೆರೆಯಲ್ಲಿ ಮಲಗಿಕೊಂಡಿದ್ದವ. ಈಗ ತಾನೆ ಎಚ್ಚತ್ತೆ. ನೀವು ಹೇಳಿದಾಗ ಇದೆಲ್ಲಾ ಗೊತ್ತಾದದ್ದು ನನಗೆ' ಎಂದು ಹೇಳಿ ಮೂಢನಂತೆ ಕುಳಿತುಬಿಟ್ಟೆ.

'ನಿಮ್ಮ ಜೊತೆಯಲ್ಲೇ ಬಂದನೇನು ಆತ ಬೆಂಗಳೂರಿನಿಂದ?'

'ಹೌದು. ಇಲ್ಲೇ ಈ ಪಕ್ಕದ ಬೆಂಚಿನ ಮೇಲೇ ಮಲಗಿಕೊಂಡಿದ್ದ'

'ನನ್ನ ಕಣ್ಣು ತಪ್ಪಿಸಿ ಆತ ಪಾರಾದುದು ಹೇಗೆ ಎಂಬುದೇ ಸಮಸ್ಯೆಯಾಗಿದೆ ನನಗೆ. ಬಹಳಮಾಡಿ ಬಟ್ಟೆ ಬದಲಾಯಿಸಿಕೊಂಡು ಫರಾರಿಯಾಗಿರಬೇಕೆಂದೂ ಅನ್ನಿಸುತ್ತೆ. ನಿಮ್ಮ ಬಟ್ಟೆಗಳೇನಾದರೂ ಹೋಗಿವೆಯೇನು ನೋಡಿಕೊಳ್ಳಿ.' ಬೆಂಚಿನ ಕೆಳಗಡೆ ಇದ್ದ ಸೂಟ್‌ಕೇಸ್ ನೋಡುತ್ತೇನೆ – ತೆರೆದಿತ್ತು ಅದರ ಬೀಗ!

ಪೋಲೀಸು ಅಧಿಕಾರಿಯ ತರ್ಕದಂತೇ ಆಗಿತ್ತು. ಅದರಲ್ಲಿದ್ದ ನನ್ನ ಶರ್ಟು, ಕೋಟು, ಪಂಚೆ ಮಾಯವಾಗಿದ್ದವು. ಇಸ್ಮಾಯಿಲ್ ಮಲಗಿದ್ದ ಬೆಂಚಿನ ಕೆಳಗಡೆ ಬಿದ್ದಿತ್ತು ಅವನ ಉಡುಗೆ-ತೊಡುಗೆ.......

ಅಧಿಕಾರಿ ಆ ಉದ್ದಕೋಟನ್ನೆತ್ತಿಕೊಂಡು ಪರೀಕ್ಷಿಸಿ ನೋಡಿದರು. ರಾತ್ರಿಯಲ್ಲಿ ತುಂಬಿ ಉಬ್ಬಿಕೊಂಡಿದ್ದ ಆ ಜೇಬುಗಳೆಲ್ಲ ಈಗ ಬರಿದಾಗಿದ್ದುವು.

ನನ್ನ ವಿಸ್ಮಯ ಮುಖದ ಮೇಲೆ ಮೂಡಿರಬೇಕು. ಅಧಿಕಾರಿ ಒಮ್ಮೆಲೆ ಕೇಳಿದರು.

‘ನಿಮ್ಮ ದುಡ್ಡುಗಿಡ್ಡು ಏನಾದರೂ ಹೋಗಿದೆಯೋ ನೋಡಿಕೊಳ್ಳಿ.’

ಇದುವರೆಗೂ ನನ್ನ ದುಡ್ಡಿನ ವಿಚಾರವೇ ಬಂದಿರಲಿಲ್ಲ ನನಗೆ. ಕೋಟಿನ ಒಳಜೇಬಿನಲ್ಲಿ ಕೈಹಾಕಿ ನೋಡಿಕೊಂಡೆ.

—ನನ್ನ ಕಣ್ಣುಗಳೆದುರಿಗೆ ಕತ್ತಲೆ ಕವಿದಂತಾಯಿತು.

ಮಾಯವಾಗಿತ್ತು ಹಣದ ಚೀಲ! - ಅದರಲ್ಲಿದ್ದ ಐದು ರೂಪಾಯಿನ ಇಪ್ಪತ್ತೈದು ನೋಟುಗಳು!

ಕೊನೆಗೂ ಆತನು ತನ್ನ ಸವಿಮಾತುಗಳಿಂದ ಮೋಸಗೊಳಿಸಿ, ಸಭ್ಯ ಗೃಹಸ್ಥನೆಂಬ ಭಾವನೆ ಹುಟ್ಟಿಸಿ ನನಗೆ ಚಕ್ಕರ್ ಕೊಟ್ಟು ಹೋಗಿದ್ದ. ಆತನು ಇಂಥ ಪಟಾಯಿಕ ಕಳ್ಳನೆಂಬುದು ಮೊದಲೇ ಗೊತ್ತಿದ್ದರೆ ನಾನು ಹಾಗೆ ಆತನ ಹತ್ತಿರವೆ ನಿಶ್ಚಿಂತೆಯಿಂದ ಮಲಗಿಕೊಳ್ಳುತ್ತಿರಲಿಲ್ಲ.

‘ಪಕ್ಕಾ ದರೋಡೆಗಾರ ಅವ. ಈ ಮೊದಲು ಐದಾರುಬಾರಿ ಜೈಲಿನ ಹವೆ ತಿಂದು ಬಂದಿದ್ದರೂ ಇನ್ನೂ ತನ್ನ ಕಾಯಕ ಬಿಟ್ಟಿಲ್ಲ.’

‘ಆತನೊಂದು ಗಿರಣಿಯ ಒಡೆಯನಾಗಿದ್ದನಂತೆ-- ಈಗ ಬೊಂಬಾಯಲ್ಲಿ ಇನ್ನೊಂದು ಗಿರಣಿಗೆ ಮ್ಯಾನೇಜರ್ ಆಗಿದ್ದಾನಂತೆ. ಇಂಗ್ಲೆಂಡಿಗೂ ಹೋಗಿ ಬಂದಿದ್ದನಂತೆ. ಇಸ್ಮಾಯಿಲ್ ಶೇಟ್ ಅಂತೆ ಅವನ ಹೆಸರು!’

ಇಸ್ಮಾಯಿಲ್ ಶೇಟ್ ಎಂಬ ಹೆಸರು ಕೇಳುತ್ತಲೂ ಅಧಿಕಾರಿ ಗಹಗಹಿಸಿ ನಕ್ಕುಬಿಟ್ಟರು. ‘ಎಲ್ಲಾ ಒಂದನೇ ನಂಬರಿನ ಬುರುಡ! ಅವನ

ಹೆಸರು ಮುಹಮ್ಮದ್ ಖಾನ್. 'ಮೈಸೂರು ಪೋಲೀಸರಿಗೆಲ್ಲ ಅವನು ಚಿರ ಪರಿಚಿತ. ಅವನ ಇಂಗ್ಲೆಂಡ್ ಅಂದರೆ ಸೆಂಟ್ರಲ್ ಜೈಲೇ ಸರಿ! ಗಿರಣಿ ಪರಣಿ ಎಲ್ಲ ಶುದ್ಧ ಸುಳ್ಳು. ಜನರ ಕಣ್ಣಿಗೆ ಮಂಕುಬೂದಿ ಎರಚಿಬಿಟ್ಟು ಮೋಸಮಾಡುವ ಸಾಧನ ಅದೆಲ್ಲ!' ಎಂದರು.

ಹೌದು. ನನ್ನ ಕಣ್ಣಿಗೂ ಮಂಕುಬೂದಿ ಎರಚಿದ್ದ ಆ ಮುಹಮ್ಮದ್! ಅದೆಂಥ ಮಂಕುಬೂದಿ ಅದು! ನನ್ನ ಬುದ್ಧಿ ಆ ಮಂಕಿನ ಮಂಜಿಗೆ ಸಿಕ್ಕು ಬಿದ್ದು - ನನ್ನ ಸಾರಾಸಾರ ವಿಚಾರಶಕ್ತಿಯೆಲ್ಲ ಮಾಯವಾಗಿತ್ತು. ಅಂತೆಯೆ ನನ್ನಂಥ ಸುಶಿಕ್ಷಿತ ಕಾಲೇಜ್ ವಿದ್ಯಾರ್ಥಿಯೂ ಮೋಸಹೋಗ ಬೇಕಾಯಿತು.'

ಮಾತು ಮುಗಿಸಿದ ವಸಂತ.

'ಈಗ ಹೇಳಿ. ಮನುಷ್ಯನ ಮನಸ್ಸೂ, ಮಗುವಿನ ಮನಸ್ಸೂ ಒಂದೇ ಹೌದೋ ಅಲ್ಲವೋ? - ಆತನ ಮನಸ್ಸಿಗೆ ಮಂಜು ಕವಿಯುತ್ತೋ ಇಲ್ಲವೋ?' ಎಂದು ಆತನೂ ಪ್ರಶ್ನೆಮಾಡಲಿಲ್ಲ.

ಗೆಳೆಯರೂ ಮಾತನಾಡಲಿಲ್ಲ.

ಕೈಗಡಿಯಾರದ ಮುಳ್ಳಿನ ಕಡೆ ವಸಂತನ ದೃಷ್ಟಿ ಹೋಯಿತು.

ಗಂಟೆಯ ಮುಳ್ಳು, ಎರಡರ ಅಂಕೆಯನ್ನು ದಾಟಿಹೋಗಿತ್ತು.

ಸಿಗರೇಟಿನ ಪೊಟ್ಟಣದ ಕಡೆ ಅವನ ಕೈ ಬಾಗಿತು.

—ಅದು ಬರಿದಾಗಿತ್ತು!

# ಎರಡನೆಯ ತಾಯಿ!

ಮೇ ತಿಂಗಳಿನ ಬಿಡುವು ದೊರೆಯುತ್ತಲೆ ಕಾಲೇಜು ವಿದ್ಯಾರ್ಥಿ
ಗಳಿಗೆಲ್ಲ ಸ್ವರಾಜ್ಯ ಸಿಕ್ಕಿದಷ್ಟು ಸಂತೋಷವುಂಟಾಗುವುದು. ನನಗಂತೂ
ಗವಿಯ ವಾಸ ತ್ಯಜಿಸಿ ಬಯಲು ಹವೆಯ ಸುಂದರ ಪ್ರದೇಶದಲ್ಲಿ ಪ್ರವೇಶಿಸಿ
ದಂತೆ ಭಾಸವಾಗುತ್ತದೆ. ಆ ಕಾಲೇಜು, ಅಲ್ಲಿನ ಕೆಮಿಸ್ಟ್ರಿ, ಜೂಆಲಜಿ,
ಪ್ರೊಫೆಸರುಗಳ ನೀರಸ ಲೆಕ್ಚರು ಎಲ್ಲವುಗಳಿಂದ ಬಿಡುಗಡೆಹೊಂದಿ ಒಂದು-
ಒಂದೂವರೆ ತಿಂಗಳಿನ ಕಾಲ ಹಾಯಾಗಿ ಕಾಲ ಕಳೆಯಬಹುದಲ್ಲ. ಎಂದು
ಕೊಂಡು ನಿಶ್ಚಿಂತೆಯ ಉಸಿರು ಹಾಕುತ್ತೇನೆ!

ಸುಂದರ ಸುಂದರ ಯುವತಿಯರ ಸಹವಾಸ ಯೋಗ ಸಿಕ್ಕಬೇಕೆಂದೇ
ಕಾಲೇಜಿಗೆ ಬಂದಿರುವ ಸಿರಿವಂತ ಯುವಕರಿಗೇನೋ ಈ ಬಿಡುವು ರಾಹು
ಕಾಲದಂತೆ ಭಾಸವಾಗಬಹುದು. ಆದರೆ ಅಂತಹವರ ಮಾಲಿಕೆಯಲ್ಲಿ
ಸೇರುವಷ್ಟು ಭಾಗ್ಯ ನನಗಿಲ್ಲ. ಅದೂ ನನ್ನ ಸುದೈವವೇ ಸರಿ! ಯಾವಾಗ
ಈ ಖೋಡಿ ಬಿಡುವು ಕಳೆದು ಮತ್ತೆ ಕಾಲೇಜು ಕುಮಾರಿಯರ ದರ್ಶನ
ಸುಖ ಲಭಿಸುವುದೋ ಎಂದು ಚಡಪಡಿಸಬೇಕಾದ ತಾಪತ್ರಯವೂ ನನ
ಗಿಲ್ಲ. ಅಂತೆಯೆ ಬಿಡುವು ಬಂದೊಡನೆ ಬಡವನಿಗೊಂದು ಭಾಗ್ಯನಿಧಿ
ದೊರೆತಷ್ಟು ಸಂತೋಷವುಂಟಾಗುತ್ತೆ ನನಗೆ.

ಆ ದಿನ ಗಂಟುಮೂಟೆ ಕಟ್ಟಿ ಊರಿಗೆ ಹೊರಡಲು ಸಿದ್ಧನಾಗುತ್ತಿದ್ದೆ.
ಇನ್ನೇನು ರೈಲು ಹತ್ತುವುದೊಂದೇ ಉಳಿದಿತ್ತು. ಒಂದೂವರೆ ತಿಂಗಳಿನ

ಕಾಲ ಮೋಜೇ ಮೋಜು; ನನ್ನನ್ನು ತಡೆಯುವರದಾರು? ಎಂದು ಸಂತಸ ದಿಂದ ತಣಿಯುತ್ತಿದ್ದೆ. ಆದರೆ ಮುಗಿಲಿನಲ್ಲಿ ಮೋಡ ಕವಿದರೂ ಮಳೆ ಬಂದೇ ತೀರುವುದೆಂಬ ನಿಯಮವೆಲ್ಲಿದೆ? ನನ್ನ ಪ್ರಯಾಣದ ಗತಿಯೂ ಹಾಗೆಯೆ ಆಯಿತು!

ಇದ್ದುದಿದ್ದ ಹಾಗೆ ಕೊಟಡಿಯ ಬಾಗಿಲನ್ನು ನೂಕಿ ಶೇಖರ ಒಳಕ್ಕೆ ಬಂದ. ಬಂದವನೆ ನನ್ನ ಗಂಟು ಮೂಟೆಗಳನ್ನೆತ್ತಿಕೊಂಡು 'ಹೂಂ! ಹೊರಡು ಬೇಗನೆ! ಹೊರಗೆ ಟಾಂಗಾವಾಲ ಕಾಯುತ್ತಿದಾನೆ' ಎಂದು ಹೇಳುತ್ತಾ ನನ್ನನ್ನು ತಳ್ಳಿಕೊಂಡೇ ಹೊರಕ್ಕೆ ಕರೆದುತಂದ.

'ಎಲ್ಲಿ ಓಡಿಸಿಕೊಂಡೊಯ್ಯುತ್ತೀಯೋ ನನ್ನ? ಕೊಂಚ ತಡೆ. ಎಲ್ಲಿಗೆ ಹೇಳು' ಎಂದು ನಾನು ಬೊಬ್ಬೆಯಿಡುತ್ತಿದ್ದರೂ ಉತ್ತರವೀಯುವ ಗೊಡವೆಗೆ ಬೀಳದೆ ಬಲವಂತಮಾಡಿ ನನ್ನನ್ನು ಟಾಂಗಾಕ್ಕೆ ಏರಿಸಿಯೇ ಬಿಟ್ಟ. ಕೊಟಡಿಯ ಬಾಗಿಲಿಗೆ ತಾನೇ ಬೀಗಮುದ್ರೆ ಹಾಕಿಬಿಟ್ಟು ಹತ್ತಿರ ಬಂದು ಕೂತುಕೊಂಡ.

ನಾನೇನನ್ನು ಮಾಡುವುದಕ್ಕೂ ಸಾಧ್ಯವಿರಲಿಲ್ಲ. ನಾಲ್ಕು ವರ್ಷ ಗಳಿಂದಲೂ ಆತನ ಸಹವಾಸದಲ್ಲಿದ್ದ ನನಗೆ ಆತನ ಸ್ವಭಾವದ ಪರಿಚಯ ವನ್ನು ಯಾರೂ ಹೊಸದಾಗಿ ಮಾಡಿಕೊಡಬೇಕಾಗಿರಲಿಲ್ಲ. ಅವನು 'ಹೊರಡು' ಎಂದ ಮಾತ್ರಕ್ಕೆ ತೆಪ್ಪಗೆ ಹೊರಟುಬಿಡಬೇಕು. 'ಒಲ್ಲೆ ದಮ್ಮಯ್ಯ' ಎಂದರೂ ಆ ಆಸಾಮಿಯೇನೂ ಬಿಡುವಂತಿರಲಿಲ್ಲ.

ರೈಲು ಹತ್ತಿದಬಳಿಕ ಸಿಗರೇಟಿನ ಹೊಗೆ ಹೊರಡಲಾರಂಭಿಸಿದ ತರು ವಾಯ ಶೇಖರನ ಮೌನವ್ರತಾಚರಣೆ ಭಂಗವಾಯಿತು.

'ಲೋ ಗುಗ್ಗೂ, ಹೇಗೆ ಸತಾಯಿಸಿದೆ ನಿನ್ನ? ಈಗ ನಾವು ಎಲ್ಲಿಗೆ ಹೋಗುವುದು ಗೊತ್ತೋ?'

'ಎಲ್ಲೋ ಸುಡುಗಾಡಿಗೆ! ನಿನ್ನ ಸಹವಾಸ ಅಂದರೆ ರಾವಣಾಸುರನ ಸಹವಾಸಕ್ಕಿಂತಲೂ ಕೆಟ್ಟದ್ದು. ಊರಿಗೆ ಹೊರಡಬೇಕೆಂದು ಸಿದ್ಧನಾಗಿದ್ದವ ನನ್ನನ್ನು ಈಕಡೆ ಎಳೆದುಕೊಂಡು ಬಂದೆ. ಅಲ್ಲಿ ನಮ್ಮ ಸಂಡಿತಾಯಿ ಎಲ್ಲಾ ದಾರಿ ಕಾಯುತ್ತಿರುತ್ತಾರೆ ಅವರ ಗೋಳಾಟದ ಪಾಪ ನಿನ್ನ ತಲೇ ಮೇಲೆ ಬರುತ್ತೆ!'

'ಬರಲಿ! ಬರಲಿ! ಎಷ್ಟಾದರೂ ತಂದೆತಾಯಿಗಳ ಗೋಳಾಟ ತಾನೆ? ಹೆತ್ತವರ ಶಾಪಕ್ಕಿಂತಲೂ ಹೃದಯೇಶ್ವರಿಯ ತಾಪದಿಂದ ಹೆಚ್ಚು ಪಾಪ ಬರುತ್ತೆ! ಅಂತಹ ಭಯವೇನೂ ಇಲ್ಲವಲ್ಲ! ಇರಲಿ ಬಾ! ನಮ್ಮೂರಿಗೆ ಹೋಗುವ ಈ ಸಲ!'

'ಸರಿಯಪ್ಪ! ಅಂತೂ ನಿನ್ನ ಹಟವನ್ನೇ ಸಾಧಿಸಿಬಿಟ್ಟೆ. ಎಲ್ಲಿ ಬಂದೆಯೋ ನೀನು ಇಂದು ಶನಿ ಬಂದ ಹಾಗೆ?'

'ಶನಿ, ಮಂಗಳ ಎಲ್ಲಾ ಬೆಂಕಿಗೆ ಬಿತ್ತು! ಕಳೆದವರ್ಷ ಮೆತ್ತಗೆ ಮಾತು ತೆಗೆದು 'ಬಾರೋ' ಎಂದು ಅಂಗಲಾಚಿ ಬೇಡಿಕೊಂಡರೂ ಬರಲಿಲ್ಲ ನೀನು. ಅದಕ್ಕೇ ಈ ಸಲ ಹೀಗೆ ಸೇಡು ತೀರಿಸಿಕೊಂಡದ್ದು. ನೀನೇನು ಹಾಗೆಯೇ ಸೌಮ್ಯವಾತಿಗೆ ಬರುತ್ತಿದ್ದೆಯೋ?'

'ನಿನಗೇನಪ್ಪ! ಈ ಸಲ ಎಂ.ಎ. ಬಂದು ಮುಗಿದುಬಿಟ್ಟಿತು ಅಂದರೆ ಎಲ್ಲಾದರೂ ಪ್ರೊಫೆಸರ್ ಆಗಿಬಿಡುತ್ತೀಯ! ನಾನಿನ್ನೂ ಈ ಬಿ.ಎ. ಬಾಲ ತಂದುಕೊಳ್ಳಬೇಕಲ್ಲ! ಅದಕ್ಕಾಗಿ ಒದ್ದಾಡುತಾ ಇದ್ದೇನೆ. ಈ ಸಲ ಹಳ್ಳಿಯಲ್ಲಿ ತುಂಬಾ ಓದಬೇಕೂಂತ ಲೆಕ್ಕಹಾಕಿದ್ದೆ. ಸರಿ. ನಾನು ಬಿ.ಎ. ಆಗಬೇಕಂದ್ರೆ ನಿನಗೆ ಹೊಟ್ಟೆ ಉರಿ ಅಲ್ವೆ?'

'ಸುಮ್ಮನಿರೋ! ಮಹಾ ಓದುವವ ನೀನು! ನಿನ್ನ ವ್ಯಾಸಂಗ ಪ್ರಿಯತೆ ನನಗೆ ತಿಳಿದೇ ಇದೆ! ಹಳ್ಳಿಯಲ್ಲಿ ಏನಾದರೂ ಹಕ್ಕಿ ಹೊಡೆಯುವ ಯೋಚನೆ ಮಾಡಿಟ್ಟುಕೊಂಡಿರಬಹುದು. ಅದು ತಪ್ಪಿಹೋಯಿತು ಅಂತ ನನ್ನ ಮೇಲೆ ರೇಗುತಾ ಇದ್ದೀ ಅಷ್ಟೆ.'

ಶೇಖರನ ಈ ಮಾತು ನನ್ನ ಮುಖವನ್ನೇ ಕಟ್ಟಿಬಿಟ್ಟಿತು. ಇನ್ನು ಅವನೊಂದಿಗೆ ಜಗಳ ಕಾಯುವುದರಲ್ಲಿ ಅರ್ಥವಿಲ್ಲ ಎಂದುಕೊಂಡು ಬೇರೆ ವಿಷಯ ಪ್ರಸ್ತಾಪಿಸಿದೆ.

'ನಮ್ಮೂರು ನಮ್ಮೂರು ಅಂತ ಕಿರುಚಿಕೊಳ್ಳುತ್ತೀಯೆ! ಎಷ್ಟು ಲಕ್ಷ ಜನರಿದ್ದಾರೆಯೊ ನಿಮ್ಮೂರಿನಲ್ಲಿ? ಎಷ್ಟು ಸಾವಿರ ಮನೆಗಳಿವೆ? ಎಷ್ಟು ಜನ ಸ್ತ್ರೀಯರು, ಪುರುಷರು, ಎಷ್ಟು ಸ್ಕೂಲುಗಳು, ಕಾಲೇಜುಗಳು? ಎಷ್ಟು ದೇವದೇವಿಯರ ಗುಡಿಗಳು?

ಶೇಖರ ನನ್ನನ್ನು ತಡೆಯದಿದ್ದಲ್ಲಿ ನನ್ನ ಪ್ರಶ್ನಮಾಲಿಕೆ ಅಲ್ಲಿಗೇ ಮುಗಿಯುತ್ತಿರಲಿಲ್ಲ. ಉರಿಯುತ್ತಿದ್ದ ಸಿಗರೇಟನ್ನು ನನ್ನ ಕಾಲಿಗೆ ಸೋಂಕಿಸಿ ಶೇಖರ ನನ್ನನ್ನು ನಿಲ್ಲಿಸಿಬಿಟ್ಟ.

'ಅಯ್ಯೋ ಶನಿ! ಸುಟ್ಟುಬಿಟ್ಟೆಯೋ ನನ್ನ ಕಾಲನ್ನ!' ಎನ್ನುತ್ತ ಅವನ ಕಡೆ ನೋಡಿದೆ.

ಇದುವರೆಗೆ ತುಂಟನಗುವಿನಿಂದ ತುಂಬಿಕೊಂಡಿದ್ದ ಶೇಖರನ ಮುಖ ಒಂದು ಕ್ಷಣದಲ್ಲಿಯೆ ಸ್ತಬ್ಧಸಾಗರದಂತೆ ಗಂಭೀರವಾಗಿದ್ದಿತು.

ಸಿಗರೇಟನ್ನು ಕಿಟಕಿಯೊಳಗಿನಿಂದ ಹೊರಕ್ಕೆ ಬಿಸುಟುಬಿಟ್ಟು ಶೇಖರ ಹೇಳಿದ.

'ಅಲ್ಲಿ ಲಕ್ಷ ಜನರೂ ಇಲ್ಲ. ಸಾವಿರ ಮನೆಗಳೂ ಇಲ್ಲ. ನಲವತ್ತು ಮನೆಗಳಿವೆ. ನೂರು ಜನರಿದ್ದಾರೆ. ಸ್ಕೂಲು ಕಾಲೇಜುಗಳಂತೂ ಇಲ್ಲವೇ ಇಲ್ಲ. ದೇವದೇವಿಯರ ಗುಡಿಗಳೂ ಇಲ್ಲ. ಆದರೆ ಈ ಎಲ್ಲ ದೇವಿಯರಿಗಿಂತಲೂ ಮಿಗಿಲಾದ ಮಾದೇವಿಯೊಬ್ಬಳ ಮಂದಿರವಿದೆ.... ಮತ್ತು....'

ಮುಂದೆ ಆತನ ಮುಖದಿಂದ ಮಾತು ಹೊರಡಲಿಲ್ಲ. ಅವನ ನಾಲಗೆ ಬಚ್ಚಿಟ್ಟ ವಿಷಯವನ್ನು ಕಣ್ಣುಗಳು ಬಿಚ್ಚಿತೋರಿಸಲು ಪ್ರಯತ್ನಿಸುತ್ತಿದ್ದುವು. ಹೃದಯವೇದನೆಯನ್ನು ಹೊರಪಡಿಸಲಾರದೆ ಚಡಪಡಿಸುತ್ತಿದ್ದಹಾಗೆ ಆತನ ತುಟಿಗಳೆರಡೂ ಕಂಪಿಸುತ್ತಿದ್ದುವು.

ಕ್ಷಣಕ್ಷಣಕ್ಕೆ ಬಗೆಬಗೆಯ ರೂಪ ತಳೆಯುತ್ತಿದ್ದ ಶೇಖರನ ಮುಖವನ್ನೆ ನಿಟ್ಟಿಸುತ್ತ ಮೌನವಾಗಿ ಕೂತುಕೊಂಡೆ. ಆತನ ಸ್ವಭಾವವನ್ನರಿತವನಾದುದರಿಂದ ಅಂತಹ ಸ್ಥಿತಿಯಲ್ಲಿ ಆತನನ್ನು ಕೆಣಕುವ ಇಷ್ಟವೂ ನನಗಿರಲಿಲ್ಲ.

ರೈಲು ಓಡುತ್ತಿತ್ತು. ಒಂದಾದ ಬಳಿಕ ಒಂದರಂತೆ ಕಣ್ಣೆದುರಿಗೆ ಬಂದು ಹಿಂದುಳಿಯುವ ತಂತಿಯ ಕಂಬಗಳಂತೆ ವಿಚಾರಗಳು ನನ್ನೆದೆಯಲ್ಲಿ ಮೂಡಿ ಮಾಯವಾಗತೊಡಗಿದುವು.

—ಶೇಖರ ಈ ರೀತಿ ಒಮ್ಮೆಲೆ ಗಂಭೀರವಾಗುವುದಕ್ಕೇನು ಕಾರಣ ವಿರಬಹುದು! ಮಾದೇವಿ! ಮಾದೇವಿಯ ಮಂದಿರ! ಎಲ್ಲ ದೇವತೆಗಿಂ

ಯರಿಗಿಂತಲೂ ಮಿಗಿಲಾದ ದೇವಿ! ಇದೇನು ರಹಸ್ಯ! ಅಂತೂ ಶೇಖರನ ಊರಿಗೆ ಹೋಗುವುದರಿಂದ ಆತನ ಗುಟ್ಟಿನ ಪುಸ್ತಕದಲ್ಲಿನದೊಂದು ಕತೆ ಕೇಳುವ ಲಾಭವಾದರೂ ದೊರೆಯುವುದಲ್ಲಾ ಎನ್ನಿಸಿತು.

ಇದುವರೆಗೆ ಶೇಖರ ಈ ಮಾದೇವಿಯ ವಿಚಾರವಾಗಿ ಯಾವ ಸ್ನೇಹಿತರೆದುರಿಗೂ ಒಂದು ಶಬ್ದವನ್ನೂ ಆಡಿರಲಿಲ್ಲ. ಅವನ ಹಾಗೆ ಮನ ಬಿಚ್ಚಿ ಮಾತನಾಡುವ ಸ್ನೇಹಿತರಿನ್ನಾರೂ ನನಗಿರಲಿಲ್ಲ. ಅವನ ಎಲ್ಲ ರಹಸ್ಯ ಗಳ ಭಾಂಡಾರದ ಬೀಗದಕೈ ನನ್ನಲ್ಲಿದೆಯೆಂದು ನನಗೆನ್ನಿಸಿತ್ತು. ಅವನ ಜೀವನದಲ್ಲಿ ನಡೆದ ಎಲ್ಲ ಘಟನೆಗಳೂ ನನಗೆ ತಿಳಿದಿವೆಯೆಂದು ನನ್ನ ಭಾವನೆಯಾಗಿತ್ತು. ಆದರೆ—

ಈ 'ಮಾದೇವಿ' ನನ್ನ ಆ ಭಾವನೆಯನ್ನು ಒಂದೇಟಿಗೇ ಉರುಳಿಸಿ ಬಿಟ್ಟಳು!

ಸರಿ! ಒಡ್ಡು ಒಡೆದ ಬಳಿಕ ಹರಿಯುವ ನೀರಿನ ಹಾಗೆ ನನ್ನ ವಿಚಾರ ಧಾರೆ ವೇಗವಾಗಿ ಹರಿಯತೊಡಗಿತು. ಈ ಮಾದೇವಿ ಶೇಖರನ ಪ್ರಣಯಿನಿ ಯೇನಾದರೂ ಆಗಿರಬಹುದೇ? ಬಾಲ್ಯದಲ್ಲಿ ಅವರಿಬ್ಬರೂ ಪರಸ್ಪರರನ್ನು ಪ್ರೀತಿಸಿರಬಹುದೇ? ದೇವದಾಸನಿಗೆ ಪಾರ್ವತಿ ಸಿಕ್ಕದೆ ಹೋದ ಹಾಗೆ ಶೇಖರನಿಗೆ ಅವಳು ಸಿಕ್ಕಿರಲಿಕ್ಕಿಲ್ಲವೆ? ಇದ್ದರೂ ಇರಬಹುದು. ಇಲ್ಲ ವಾದರೆ ಅವಳ ಹೆಸರಿನೊಂದಿಗೆ ಶೇಖರನ ಮೊಗ ಇಷ್ಟು ಗಂಭೀರವಾಗಲು ಕಾರಣವೇನಿತ್ತು?—

ಕಿಟಕಿಯೊಳಗಿನಿಂದ ಇಣುಕಿ ಅನಂತ ಆಕಾಶದೊಂದಿಗೆ ದೃಷ್ಟಿ ಯನ್ನು ತೇಲಿಬಿಟ್ಟು ಕೂತಿದ್ದ ಶೇಖರನ ಮುಖ ಹೆಚ್ಚು ಹೆಚ್ಚು ಗಂಭೀರ ವಾಗುತ್ತ ಹೋದಹಾಗೆ ನನ್ನ ಸಂಶಯವೂ ಹೆಚ್ಚು ಹೆಚ್ಚಾಗತೊಡಗಿತು

[೨]

ಶೇಖರನ ಊರಿಗೆ ಬಂದು ಒಂದೆರಡು ವಾರಗಳು ಕಳೆದುಹೋಗಿ ದ್ದುವು.

ಪುಟ್ಟದಾಗಿದ್ದರೂ ಹಳ್ಳಿ ತುಂಬ ಸೊಗಸಾಗಿತ್ತು. ಪಟ್ಟಣದ ಗಲಭೆಯಿಂದ ಸಂತ್ರಸ್ತನಾಗಿದ್ದ ನನಗೆ ಆ ಹಳ್ಳಿಯ ನಿತಾಂತ ಸುಂದರ ಸರಳ ಜೀವನ ತುಂಬಾ ಸವಿಯಾದುದೆನ್ನಿಸಿತು.

ಹಳ್ಳಿಯ ನಾಲ್ಕು ಸಿಟ್ಟುಗಳಲ್ಲೂ ಮುಗಿಲಿನುದ್ದಕ್ಕೆ ಮೊಗಮಾಡಿ ನಿಂತ ಪರ್ವತಶ್ರೇಣಿಗಳು. ಒಂದು ಮೂಲೆಯಲ್ಲಿ ಪುಟ್ಟ ಹಳ್ಳವೊಂದು ಜುಳುಜುಳು ಗೀತ ಹೇಳುತ್ತ ಹರಿಯುತ್ತಿತ್ತು.

ಹಳ್ಳದ ದಡದಲ್ಲಿನ ಮಳಲ ಹಾಸುಗೆಯ ಮೇಲೊರಗಿಕೊಂಡು ನಾವಿಬ್ಬರೂ ಗಂಟೆಗಂಟೆಗಳ ಕಾಲ ಮಾತನಾಡುತ್ತಿದ್ದೆವು. ಗುಡ್ಡಗಳನ್ನು ಸುತ್ತಿ ಬೇಜಾದರೆ ಹೊಲಗಳಲ್ಲಿನ ಗಿಡದ ನೆರಳಿನಲ್ಲಿ ಮಲಗಿ ವಿಶ್ರಮಿಸುತ್ತಿದ್ದೆವು. ಮನಸ್ಸು ಬಂದಾಗ ಬಾವಿಯಲ್ಲಿ ಮನದಣಿಯೆ ಈಜಾಡುತ್ತಿದ್ದೆವು. ಇಂತಹವರಲ್ಲಿ ದಿನಗಳು ಹೇಗೆ ಕಳೆಯುತ್ತಿವೆಯೆಂಬುದು ನಮಗೆ ತಿಳಿಯದಿದ್ದರೆ ಆಶ್ಚರ್ಯ ಏನು ಬಂತು?

ಈ ಮಧ್ಯೆ ಆ 'ಮಾದೇವಿ'ಯ ಸಂಶಯದ ಸುಳಿಗೆ ನಾನು ಆಕಸ್ಮಾತ್ತಾಗಿ ಸಿಕ್ಕಿಬೀಳುತ್ತಿದ್ದೆನಾದರೂ ಮಾತುಗಳ ಮಳೆಯಲ್ಲಿ ಅದು ಎಲ್ಲೋ ತೇಲಿಹೋಗಿಬಿಡುತ್ತಿತ್ತು. ಆ ಮಾದೇವಿಯನ್ನು ನೋಡಬೇಕು, ಅವಳ ರಹಸ್ಯವನ್ನರಿಯಬೇಕು ಎಂಬ ಅಪೇಕ್ಷೆಯೇನೊ ಹಟಮಾರಿ ಹುಡುಗನಂತೆ ಮುಂದೆ ಬರುತ್ತಿದ್ದಿತಾದರೂ ಶೇಖರ ಆ ಬಗ್ಗೆ ಬಾಯಿ ಬಿಡುತ್ತಿರಲಿಲ್ಲವಾದುದರಿಂದ ಮತ್ತೆ ಸುಮ್ಮನೆ ಬಿದ್ದುಕೊಂಡಿರುತ್ತಿದ್ದಿತು.

ಹದಿನೇಳನೆಯ ದಿನ ಸಾಯಂಕಾಲ!

ಅದೆಂತಹ ಸಂಜೆ ಅದು! ನನ್ನ ಜೀವಮಾನದಲ್ಲಿ ಸಾವಿರಾರು ಸಂಜೆಗಳು ಸಂದರ್ಶನವಿತ್ತು ಸುಸುಳಿವೆಯಾದರೂ ಆ ಸಂಜೆಯ ನೆನಪು ಮಾತ್ರ ನನ್ನಲ್ಲಿ ಇನ್ನೂ ಅಚ್ಚಳಿಯದಂತಿದೆ!

ಹಳ್ಳದ ಮೇಲಿನ ಹೊಲಗಳಲ್ಲಿ ಶೇಖರ – ನಾನು ಸುತ್ತುತ್ತಿದ್ದೆವು. ಹೊರಳಿ ಹೊರಳಿ ನೋಡುತ್ತ ಮೆಲ್ಲನೆ ಮುಂದುವರೆಯುತ್ತಿದ್ದ ಹಳ್ಳದ ಹೊಂಬಣ್ಣದ ನೀರು ಸೂರ್ಯಾಸ್ತ ಸಮಯವನ್ನು ಸೂಚಿಸುತ್ತಿತ್ತು. ಬೆಟ್ಟದ ಮೇಲಿನಿಂದ ಬೀಸಿ ಬರುತ್ತಿದ್ದ ತಂಗಾಳಿ ಅದೊಂದು ಬಗೆಯ

ಅನುಪಮ ವಾತಾವರಣವನ್ನು ನಿರ್ಮಿಸುತ್ತಿತ್ತು. ಆ ಸಂಜೆಯಂತೆಯೆ ಸವಿಸ್ಮಾರ್ವರ ಮನಸ್ಸುಗಳೂ ಶಾಂತವಾಗಿದ್ದುವು; ಸ್ವಪ್ನಲೀನವಾಗಿದ್ದುವು

ಇದ್ದುಬಿದ್ದ ಹಾಗೆ ಶೇಖರ ತಡೆದು ನಿಂತ.

‘ಅದೊ! ಅಲ್ಲಿ ನೋಡಿದೆಯಾ? ಆ ಬಿಳಿಯ ಕಟ್ಟೆ?’

ನಾನು ಕುತೂಹಲದಿಂದ ಆ ಕಡೆ ಕಣ್ಣು ಹೊರಳಿಸಿದೆ.

‘ಯಾವುದೋ ಒಂದು ಸಮಾಧಿಯಂತೆ ತೋರುತ್ತೆ. ಅಹುದೇ? ನಿಮ್ಮೂರಿನ ಸ್ಮಶಾನವೇನೋ ಇದು?’

ಶೇಖರ ಮಾತನಾಡಲಿಲ್ಲ. ಸುಮ್ಮನೆ ಕತ್ತು ಕೊಡಹಿ ಮೌನವಾಗಿ ಮುಂದುವರಿದ. ಬಿರುಗಾಳಿಗೆ ಸಿಕ್ಕಿಬಿದ್ದ ಸಮುದ್ರದಂತೆ ಆತನ ಮುಖ ಚಲವಿಚಲವಾಯಿತು.

ಸ್ಮಶಾನದಲ್ಲಿ ಇವನಿಗೇನು ಕೆಲಸ ಎಂದು ಆಶ್ಚರ್ಯಪಟ್ಟುಕೊಳ್ಳುತ್ತಿದ್ದರೂ ನಾನೂ ಆತನನ್ನು ಮೌನವಾಗಿ ಹಿಂಬಾಲಿಸಿಕೊಂಡು ಹೋದೆ.

ಸಣ್ಣ ದಿಗಿಲು ಇನ್ನೂ ಹೆಚ್ಚಾಯಿತು. ನಾನು ತಡೆದು ಹಿಡಿಯುತ್ತಿದ್ದರೂ ಶೇಖರ ಆ ಶ್ವೇತಸಮಾಧಿಯ ಅಡಿಯಲ್ಲಿ ದೊಪ್ಪನೆ ಬಿದ್ದುಬಿಟ್ಟ.

ಮೆಲ್ಲನೆ ಆತನ ತಲೆಯನ್ನು ಮೇಲಕ್ಕೆತ್ತಿ ಮುಖಕ್ಕೆ ಮುಖವಿಟ್ಟು ನೋಡಿದೆ.

ಆತನ ಎರಡು ಕಣ್ಣುಗಳಿಂದಲೂ ನೀರು ಧಾರೆಧಾರೆಯಾಗಿ ಸುರಿಯುತ್ತಿತ್ತು.

‘ಏನು ಶೇಖರಾ, ನಿನಗೇನು ಹುಚ್ಚೇ? ಈ ಸ್ಮಶಾನದಲ್ಲಿ ಇಂತಹ ಸಮಯದಲ್ಲಿ — ಈ ಸಮಾಧಿಯ ಬಳಿ? ಇದೇನು ಬಂತು? ನಡೆ. ಮನೆಗೆ ಹೋಗುವ’ ಎಂದು ಹೇಳಿ ಆತನನ್ನು ಮೇಲಕ್ಕೆಬ್ಬಿಸಲು ಪ್ರಯತ್ನಿಸಿದೆ.

ಆತನು ಏಳಲಿಲ್ಲ. ನನ್ನ ಕೈ ಕೊಸರಿಕೊಂಡು ತನ್ನ ಎರಡು ಕೈಗಳಿಂದಲೂ ಆ ಸಮಾಧಿಯ ಅಡಿಯನ್ನು ನೇವರಿಸುತ್ತ ಬಿಕ್ಕತೊಡಗಿದ. ಆತನ ಮುಖದಿಂದ ಅಸ್ಪಷ್ಟವಾಗಿ ಮಾತು ಕೇಳಿಬಂತು.

‘ಮಾದೇವೀ....ಮಾದೇವೀ....’ ಎಂದು!

ಬಡಿದೆಬ್ಬಿಸಿದ ಚಿಗರಿಯಂತೆ ನನ್ನ ಕುತೂಹಲ ಜಾಗ್ರತವಾಯಿತು

ಮಾದೇವಿ! ಅಂತೂ ಆ ರಹಸ್ಯ ಪರಿಹಾರವಾಗುವ ಕಾಲ ಬಂತು ಎನ್ನ ಬೇಕು! ಆದರೆ ಮಾದೇವಿಗೂ ಈ ಸಮಾಧಿಗೂ ಏನು ಸಂಬಂಧ?—

ತರ್ಕವಿತರ್ಕ ಮಾಡುತ್ತ ಕೂತಿರುವ ಸಮಯವೂ ಅದಾಗಿರಲಿಲ್ಲ. ಶೇಖರನನ್ನು ಆ ಸಮಾಧಿಯಿಂದ—ಆ ಸ್ಮಶಾನದಿಂದ ಮನೆಗೆ ಕರೆದೊಯ್ಯು ವುದೇ ಆಗ ಮುಖ್ಯ ಕಾರ್ಯವಾಗಿದ್ದಿತು.

ಆ ರಾತ್ರಿಯೆಲ್ಲ ಇಬ್ಬರಿಗೂ ನಿದ್ರೆ ಬರಲಿಲ್ಲ. ಆತನಿಗೂ ವಿಚಾರ! ನನಗೂ ವಿಚಾರ! ಮಧ್ಯೆ ಕೊಂಚ ಜೊಂಪು ಹತ್ತಿದ ಹಾಗಾಗುತ್ತಿತ್ತು ಆದರೆ ಆ ಜೊಂಪಿನಲ್ಲೂ ಸಹ ಆ ಶ್ವೇತ ಸಮಾಧಿ ಕಣ್ಣೆದುರಿಗೆ ಕಟ್ಟಿದ ಹಾಗಾಗುತ್ತಿತ್ತು. ಬೆಚ್ಚಿಬಿದ್ದು ಕಣ್ಣು ತೆರೆಯುತ್ತಿದ್ದೆ. ಮತ್ತೆ ಮಾದೇವಿ! ಆ ಶ್ವೇತಸಮಾಧಿ!

[ ೩ ]

ಮಾರನೆಯ ದಿನವೂ ಇದೇ ವಿಚಾರ! ಈ ಅವಧಿಯಲ್ಲಿ ನನ್ನ ತರ್ಕದ ಕುದುರೆ ಗಾವುದ ಗಾವುದ ದಾರಿ ಅಲೆದು ಬಂದಿತು. —ಮಾದೇವಿ ಶೇಖರನ ಪ್ರಣಯಿನಿ ಎಂಬುದೇ ನಿಜ. ಯಾವ ಕಾರಣದಿಂದಲೋ ಆಕೆ ಸತ್ತುಹೋಗಿರಬಹುದು. ಇಲ್ಲವೆ ಶೇಖರನೊಂದಿಗೆ ವಿವಾಹ ಸಾಧ್ಯವಿಲ್ಲ ವೆಂದು ಆತ್ಮಹತ್ಯೆ ಮಾಡಿಕೊಂಡಿರಬಹುದು—

ತರ್ಕವಿತರ್ಕಗಳ ಈ ಮರ್ಕಟ ಆಟ ಇನ್ನೂ ಎಲ್ಲಿಯವರೆಗೆ ನಡೆಯು ತ್ತಿದ್ದಿತೊ! ಅಷ್ಟರಲ್ಲಿ ಅದೆಲ್ಲಕ್ಕೂ ತಡೆಬಿದ್ದಿತೆಂದು ಚೆನ್ನಾಯಿತು.

ಮಧ್ಯಾಹ್ನ ಊಟವಾದ ಬಳಿಕ ನಾವಿಬ್ಬರೂ ಶೇಖರನ ಹೊಲದಲ್ಲಿನ ಮಾವಿನ ಗಿಡದ ನೆರಳಿನಲ್ಲಿ ಒರಗಿಕೊಂಡಿದ್ದೆವು. ಅಲ್ಲಿಂದ ನೇರವಾಗಿ ನೋಡಿದರೆ ಸ್ಮಶಾನವೂ, ಅದರಲ್ಲಿ ಎದ್ದು ಕಾಣಿಸುತ್ತಿದ್ದ ಆ ಶ್ವೇತಸಮಾ ಧಿಯೂ ದೃಷ್ಟಿಗೆ ಬೀಳುತ್ತಿತ್ತು.

ಇದೇ ಸಮಯವೆಂದುಕೊಂಡು ನಾನು ಮೆಲ್ಲನೆ ಮಾತಿಗಾರಂಭಿಸಿದೆ.

'ಆ ಸಮಾಧಿಯ ವಿಚಾರ ಏನು ಶೇಖರಾ? ಆ ಮಾದೇವಿ ಯಾರು? ನಿನ್ನೆಯ ದಿನ ನೀನು ಅಲ್ಲಿ ಹಾಗೆ ಕಣ್ಣೀರು ಹಾಕಲಿಕ್ಕೇನು ಕಾರಣ?'

ಕಳವಳ ತುಂಬಿದ ಕಣ್ಣುಗಳನ್ನು ನನ್ನ ಕಡೆ ಹೊರಳಿಸಿದ ಶೇಖರ. ಕಳ್ಳ ಚೆನ್ನಾಗಿ ಸಿಕ್ಕಿಬಿದ್ದ ಭಾವನೆಯಿಂದ ನಾನಾತನನ್ನು ನೋಡುತ್ತ ಹೇಳಿದೆ.

'ಹೂಂ! ಸಾಗಲಿ ನಿನ್ನ ಪ್ರಣಯ ಕತೆ! ಇದುವರೆಗೂ ನನಗೆ ಆ ಬಗ್ಗೆ ಚಕಾರವನ್ನೂ ತಿಳಿಸದೆ ಬಚ್ಚಿಟ್ಟುಕೊಂಡಿದ್ದೆಯಲ್ಲವೆ ಕಳ್ಳಾ! ಸರಿ! ಈ ಹಳ್ಳಿಯ ದೇವದಾಸ್ ಸಿನೀಮಾ ಈಗಲಾದರೂ ನೋಡಲು ದೊರೆಯಲಿ ನನಗೆ. ಹೇಳು. ಆ ಮಾದೇವಿ ಯಾರು? ನಿನ್ನ ಪ್ರೇಯಸಿ ತಾನೆ?'

ಹುಚ್ಚನ ಹಾಗೆ ನಾನು ಇನ್ನೂ ಏನೇನನ್ನು ಬಡಬಡಿಸುತ್ತಿದ್ದೆನೋ ತಿಳಿಯದು. ಅಷ್ಟರಲ್ಲಿ ಶೇಖರ ನನ್ನ ಕೈಗಳೆರಡನ್ನೂ ಹಿಡಿದು ಬಲವಾಗಿ ಅಮುಕಿ ಹೇಳಿದ.

'ಸಾಕುಮಾಡು' ಎಷ್ಟು ತಪ್ಪುತಪ್ಪಾಗಿ ಮಾತನಾಡುತ್ತೀಯಾ! ಅವಳು ಪ್ರೇಯಸಿಯೆ ನನಗೆ? ಅವಳೊಬ್ಬ ಮಾತಾಯಿ! ಅವಳೊಬ್ಬ ದೇವತೆ!

ಅವನ ಮಾತುಗಳಿಗಿಂತಲೂ ಅವನ ಸ್ವರದಲ್ಲಿ ತುಂಬಿ ಬಂದಿದ್ದ ಕಂಪನವೇ ನನ್ನನ್ನು ತೆಪ್ಪನಾಗಿರಿಸಿತು. ಅಂತೂ ಮಾದೇವಿ ಅವನ ಪ್ರೇಯಸಿಯಲ್ಲ ಹಾಗಾದರೆ!

'ಮಾತಾಯಿಯೇ ಆಗಲಿ! ದೇವತೆಯೇ ಆಗಲಿ! ನಿನಗೂ ಅವಳಿಗೂ ಏನು ಸಂಬಂಧ? ಅವಳ ಸಮಾಧಿಗೂ ನಿನ್ನ ಕಂಬನಿಗೂ ಏನು ಸಂಬಂಧ?'

ಕೊಂಚ ಕಾಲ ತಡೆದು ಕೈ ಬೆರಳುಗಳಿಂದ ಹುಲ್ಲಿನ ಕುಡಿಗಳನ್ನು ಕೀಳುತ್ತ ಶೇಖರ ಹೇಳತೊಡಗಿದ.

'ಚಿಕ್ಕತನದಿಂದಲೂ ನಾನು ಅವಳನ್ನು ಬಲ್ಲೆ. ನಾನು ಮಗುವಾಗಿದ್ದ ದಿನದಿಂದ ಆಕೆ ನನ್ನ ಮೇಲೆ ವಾತ್ಸಲ್ಯದ ಮಳೆಗರೆದಿದ್ದಾಳೆ. ತನಗೊಬ್ಬಳು ಮಗಳಿದ್ದರೂ ಅವಳನ್ನು ಬದಿಗಿರಿಸಿ ನನ್ನನ್ನು ಎತ್ತಿಕೊಂಡು

ಲಾಲನೆ ಮಾಡಿದಾಳೆ. ನಾನಿನ್ನೂ ಮೂರು ವರ್ಷದ ಮಗುವಿದ್ದಾಗಲೇ ಮಾತೃವಿಹೀನನಾದೆ. ಆದರೆ ಮಾದೇವಿಯ ಕಂಕುಳಲ್ಲಿ ಬೆಳೆದು ಬಂದ ನನಗೆ ತಾಯಿಯನ್ನು ಕಳೆದುಕೊಂಡಂತೆ ತೋರುತ್ತಿರಲೇ ಇಲ್ಲ. ಮಾದೇವಿ ನಮ್ಮ ಜಾತಿಯವಳಲ್ಲವಾದರೂ ನನ್ನ ಮೇಲೆ ಅವಳಿಗಿದ್ದ ಮಮತೆಯನ್ನು ಕಂಡವರೆಲ್ಲ ಅವಳೇ ನನ್ನ ತಾಯಿಯೆಂದು ಹೇಳಬಹುದಾಗಿತ್ತು.

'ಅವಳ ಮಗಳು—ಚಂದ್ರಾ ಎಂದು ಹೆಸರು ಅವಳಿಗೆ. ನನಗಿಂತಲೂ ಎರಡು ವರ್ಷಕ್ಕೆ ಕಿರಿಯಳು ಆಷ್ಟೆ. ನಾನು ಆರು ವರ್ಷದವನಾಗುವ ವರೆವಿಗೂ ನಾವಿಬ್ಬರೂ ಕೂಡಿಯೆ ಇರುತ್ತಿದ್ದೆವು.'

'ಮುಂದೆ ನಾನು ತಂದೆಯೊಂದಿಗೆ ಪಟ್ಟಣಕ್ಕೆ ಹೋಗಬೇಕಾಯಿತು. ಅಲ್ಲಿಯೆ ನನ್ನ ವ್ಯಾಸಂಗಕ್ಕಾರಂಭವಾಯಿತು. ಈ ಮಧ್ಯೆ ಹನ್ನೊಂದು ಹನ್ನೆರಡು ವರ್ಷಗಳಲ್ಲಿ ನಾನು ಹಳ್ಳಿಗೆ ಬರುವುದಕ್ಕಾಗಲಿಲ್ಲ. ಬಾಲ್ಯದ ಬಣ್ಣ ಬಣ್ಣದ ಬಾಳು ಆಗಾಗ ನೆನಪಿಗೆ ಬರುತ್ತಿದ್ದಿತಾದರೂ ಚಂದ್ರಾ, ಮಾದೇವಿ ಎಲ್ಲರೂ ಹಳೆಯ ಚಿತ್ರಗಳಂತೆ ಮುಸುಕು ಮುಸುಕಾಗಿ ಕಾಣುತ್ತಿದ್ದರು ಅಷ್ಟೆ.

'ಆದರೆ ಈಗ ಆರು ವರ್ಷಗಳಿಗೆ ಹಿಂದೆ—ನಾನು ಮ್ಯಾಟ್ರಿಕ್ ಪರೀಕ್ಷೆಗೆ ಕಟ್ಟಿದಾಗ—ಹಳ್ಳಿಗೆ ಬಂದಿದ್ದ ತಂದೆ ಅಕಸ್ಮಾತ್ತಾಗಿ ಇಲ್ಲಿಯೆ ಕಾಲವಾದರು. ಅದಕ್ಕಾಗಿ ನಾನು ಹಳ್ಳಿಗೆ ಬರಬೇಕಾಯಿತು.

'ಹನ್ನೆರಡು ವರ್ಷಗಳ ದೀರ್ಘ ಕಾಲಾವಧಿ ಹಳ್ಳಿಯ ಜೀವನದಲ್ಲಿ ಅದೆಷ್ಟೋ ಮಾರ್ಪಾಟುಗಳನ್ನುಂಟುಮಾಡಿತ್ತು. ಕೆಲ ದಿನಗಳವರೆಗೆ ಅದಾವುದರ ಕಡೆಗೂ ನನ್ನ ಗಮನ ಹೊರಳಲಿಲ್ಲ. ತಾನೇ ತಂದೆಯಾಗಿ, ತಾಯಿಯಾಗಿ ನನ್ನನ್ನು ಬೆಳೆಸಿಕೊಂಡು ಬಂದಿದ್ದ ಏಕಮಾತ್ರ ಆಧಾರವೇ ಕಳಚಿ ಹೋಗಿದ್ದುದರಿಂದ ನನಗೆ ಜಗತ್ತೆಲ್ಲವೂ ಶೂನ್ಯವಾಗಿ ತೋರತೊಡಗಿದ್ದಿತು.

'ಆದರೆ ಆ ಶೂನ್ಯ ಸೃಷ್ಟಿ ಬಹುಕಾಲ ಉಳಿಯಲಿಲ್ಲ.

'ಆಗ ಶ್ರಾವಣಮಾಸ! ನಾಗರಪಂಚಮಿಯ ಹಬ್ಬ ನವವಧುಗಳನ್ನು ತವರುಮನೆಗೆ ಸ್ವಾಗತಿಸುತ್ತಿದ್ದಿತು. ಪತಿಗೃಹಕ್ಕೆ ಹೋಗಿದ್ದ ಹಳ್ಳಿಯ ಹುಡುಗಿಯರೆಲ್ಲ ಊರಿಗೆ ಬಂದಿದ್ದರು. ಜೋಕಾಲಿಗಳ ಜೀಕಾಟದಿಂದ ಹಳ್ಳಿಯಲ್ಲಿ ಹೊಸ ಜೀವಕಳೆ ಬಂದಹಾಗೆ ತೋರುತ್ತಿತ್ತು.

'ಒಂದು ದಿನ ಗೆಳೆಯನೊಬ್ಬನ ಬಲವಂತದಿಂದ ಮನೆಬಿಟ್ಟು ಹೊರ ಹೊರಟಿದ್ದೆ. ಊರಲ್ಲೆಲ್ಲ ಉಕ್ಕಿ ಹರಿಯುತ್ತಿದ್ದ ಉತ್ಸಾಹ ನನ್ನನ್ನೂ ಛಳಿ ಎಳೆಯಾಗಿ ಎಳೆದುಕೊಳ್ಳಲಾರಂಭಿಸಿತು. ಒಂದು ಕಡೆ ಗಿಡಕ್ಕೆ ಕಟ್ಟಿದ್ದ ಜೋಕಾಲಿಯ ಮೇಲೆ ಹರೆಯದ ಹುಡುಗಿಯರಿಬ್ಬರು ಹುರುಪಿನಿಂದ ಜೀಕ ಮಾಡುತ್ತಿದ್ದರು. ಅವರ ಉತ್ಸಾಹ ನನ್ನನ್ನೂ ಜೋಕಾಲಿಯ ಕಡೆ ಸೆಳೆಯತೊಡಗಿತು.

'ನಾವಿಬ್ಬರೂ ಒಂದು ಕಡೆ ನಿಂತುಕೊಂಡು ನಮ್ಮ ಸರದಿ ಬರುವ ದಾರಿ ಕಾಯತೊಡಗಿದೆವು.

'ಇಬ್ಬರು ಹುಡುಗಿಯರು ಎದುರು ಬದುರಾಗಿ ನಿಂತು ಜೋಕಾಲಿಯಾಡುತ್ತಿದ್ದರು. ಮುಖ ಮೇಲಕ್ಕೆ ಮಾಡಿ ನಾನು ಆ ಕಡೆ ದೃಷ್ಟಿ ಹೊರಳಿಸಿದೆ. ನನಗೆದುರಾಗಿದ್ದ ಹುಡುಗಿಯ ಮುಖ ಕಣ್ಣಿಗೆ ಬೀಳುತ್ತಲೆ ಏಕೊ ಏನೊ ನನ್ನೆದೆ ಬಲವಾಗಿ ಹೊಡೆದುಕೊಳ್ಳಲಾರಂಭಿಸಿತು. ಯಾವುದೋ ಒಂದು ಬಗೆಯ ಅನಿರ್ವಚನೀಯ ಆಕರ್ಷಣೆಯುಂಟಾಗಿ ನನ್ನ ಕಣ್ಣು ಮತ್ತೆ ಮತ್ತೆ ಅವಳನ್ನೆ ದೃಷ್ಟಿಸತೊಡಗಿದುವು.

'ಆಗ ತಾನೆ ಹರೆಯದ ಹೊಸತಿಲಿನಲ್ಲಿ ಕಾಲಿರಿಸಿದ್ದಳು ಆ ಹುಡುಗಿ! ದುಂಡುದುಂಡಾದ ಮಾಟವಾದ ದೇಹಲತೆ! ಕೆಂಪಗೆ ತುಂಬಿಬಂದ ಕೆನ್ನೆಗಳ ಮೇಲೆ ರಸಸ್ಫುರಿಸುವ ತುಂಬುಗಣ್ಣು. ಒಪ್ಪಕ್ಕಾಗಿ ಅವಳುಟ್ಟಿದ್ದ ಹಸಿರುಸೀರೆಯ ಸೆರಗು ಗಾಳಿಯೊಂದಿಗೆ ಕಣ್ಣುಮುಚ್ಚಾಲೆಯಾಡುತ್ತಿದ್ದಿತು. ಅವಳ ಆ ಚಂಚಲ ದೃಷ್ಟಿಯೊ! ಒಂದು ಕ್ಷಣವೂ ಒಂದೆಡೆ ನಿಲ್ಲುತ್ತಿರಲಿಲ್ಲ! ಒಂದೇಸಮನೆ ಅಲ್ಲಿ ಇಲ್ಲಿ ಸುಮ್ಮನೆ ಓಡಿಯಾಡುತ್ತಿತ್ತು!

'ಸರಿ! ಪಿತೃನಿಧನದ ಶೋಕ ಎಲ್ಲೋ ಮಾಯವಾಯಿತು. ಆ ಚೆಲುವೆಯ ಮಾಯೆ ನನ್ನನ್ನಾವರಿಸಿಕೊಂಡಿತು!

'ಅವಳೆಷ್ಟು ದಿಟ್ಟ ಹುಡುಗಿ! ನನ್ನನ್ನು ಒಂದೇ ಒಂದು ಕ್ಷಣದಲ್ಲಿ ಬಲೆಗೆ ಹಾಕಿಕೊಂಡುದು ಸಾಕಾಗಲಿಲ್ಲವೇನೊ! ಜೋಕಾಲಿ ಮೇಲಕ್ಕೇರಿದಂತಾಗಲು ಸೆಳೆವ ಕಂಗಳಿಂದ ನನ್ನನ್ನು ನೋಡುತ್ತ 'ಸ್ವಲ್ಪ ತೂಗಿರಲ್ಲ ಜೋಕಾಲಿಯನ್ನ!' ಎಂದು ಹೇಳಿಬಿಡಬೇಕೇ?' ನೆರೆದಿದ್ದ ಹುಡುಗ

ಹುಡುಗಿಯರೆಲ್ಲ ನೋಡುತ್ತಿರುವಾಗ ಅವಳನ್ನು ತೂಗಲು ನನಗೆ ನಾಚಿಕೆಯಾಗುತ್ತಿದ್ದಿತಾದರೂ—ಆಕೆಗೆ—ಆ ಬಜಾರಿ ಹುಡುಗಿಗೆ ಕೊಂಚವಾದರೂ ಲಜ್ಜೆ? ಇಲ್ಲ! ಇಲ್ಲ! ಅವಳ ಕಣ್ಣು, ಅವಳ ಹುಬ್ಬು, ಅವಳ ನಿಲುವು, ಅವಳ ಚೆಲುವು ಎಲ್ಲವೂ ನನ್ನನ್ನು ಬಿಟ್ಟುಬಿಡದೆ ಆಹ್ವಾನಿಸುತ್ತಿದ್ದುವು.

'ಸರಿ. ಆಗ ಸುಮ್ಮನಿರಲಿಕ್ಕಾಗುತ್ತೆಯೆ? ಅವಳನ್ನು ತೂಗಲೇ ಬೇಕಾಯಿತು. ಎಂತಹ' ನಿರ್ಲಜ್ಜ ಹುಡುಗಿ! ಸುಮ್ಮನಿರಬಾರದೇ? ನಾನು ತೂಗಿಯಾದ ಬಳಿಕ ಕಣ್ಣು ಮಿಟುಕಿಸಿ ಕಿಲಕಿಲನೆ ತುಂಟನಗೆ ಬೀರಿದಳು. ಅವಳ ಆ ಸ್ವಚ್ಛಂದ ವರ್ತನೆ ನನಗೆ ಕೊಂಚ ನೋವನ್ನುಂಟು ಮಾಡಿದರೂ ಆ ನೋವಿನಲ್ಲೂ ಒಂದು ಅನುಪಮ ಆನಂದವಿತ್ತು!

ಜೋಕಾಲಿ ಮುಗಿದ ಬಳಿಕ ಜೊತೆಗಿದ್ದ ಗೆಳೆಯನನ್ನು ಅವಳ ಬಗ್ಗೆ ವಿಚಾರಿಸಿದೆ. ಅವಳು ಬೇರಾವ ಹುಡುಗಿಯೂ ಆಗಿರಲಿಲ್ಲ. ನನ್ನ ಚಿಕ್ಕತನದ ಜೊತೆಗಾತಿ ಚಂದ್ರಾ! ಆಗ ತಾನೆ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದವಳು ಹಬ್ಬಕ್ಕಾಗಿ ಹಳ್ಳಿಗೆ ಬಂದಿದ್ದಳು!

'ಚಂದ್ರಳನ್ನು ಜೋಕಾಲಿಯ ಮೇಲೆ ಕಂಡಾಗ ನನಗೆ ಅತೀವ ಆಕರ್ಷಣೆಯುಂಟಾದುದರ ಕಾರಣ ನನಗಾಗ ತಿಳಿದುಬಂತು. ಇಬ್ಬರೂ ಬಾಲ್ಯದಲ್ಲಿ ಮದುವೆಯಾಟವಾಡಿದವರು; ಆಟವಲ್ಲೇ ಏಕಾಗಲೊಲ್ಲದು—ನಲ್ಲನಲ್ಲೆಯರಾಗಿ ಮೋಜು ಮಾಡಿದವರು. ಈಗ ಅವಳು ಸುಂದರಿಯಾದ ಯುವತಿಯಾಗಿ ಬೆಳೆದಿದಾಳೆ. ಮದುವೆಯೂ ಆಗಿದೆ. ಹೀಗಿದ್ದರೂ ಆಗ ನನ್ನನ್ನು ಆ ರೀತಿ ಮೋಹಕ್ಕೆ ಸೆಳೆದಳಲ್ಲ!

'ಅವಳ ಮೋಹದ ಬಲೆಯಿಂದ ಪಾರಾಗಬೇಕೆಂದು ವಿವೇಕ ಸಾರಿ ಹೇಳುತ್ತಿದ್ದಿತಾದರೂ ಮನಸ್ಸು ಮತ್ತೆ ಮತ್ತೆ ಅರಸುವುದರಲ್ಲಿ ಸುಖಪಡುತ್ತಿತ್ತು. ಈ ಸಂಬಂಧ ಒಳ್ಳೆಯದಲ್ಲ—ಅದರ ಪರಿಣಾಮವೂ ಒಳ್ಳೆಯದಾಗಲಾರದು ಎಂದು ವಿವೇಕ ಉಪದೇಶಿಸುತ್ತಿದ್ದಿತು. ಆದರೆ ತಾರುಣ್ಯದ ಮದದಿಂದ ಮತ್ತವಾಗಿದ್ದ ಮನಸ್ಸು ಲಂಗುಲಗಾಮಿಲ್ಲದ ಕುದುರೆಯಂತೆ ಚಂದ್ರಳ ಕಡೆ ಧಾವಿಸುತ್ತಿತ್ತು.

'ಅನಂತರ ದಿನದಿನವೂ ಚಂದ್ರಾ ನನಗೆ ಕಾಣಿಸಿಕೊಳ್ಳತೊಡಗಿದಳು.

ಹಳ್ಳಿಯಲ್ಲಿ ಹುಡುಗಿಯರಿಗೆ ತುಂಬಾ ಸ್ವಾತಂತ್ರ್ಯವಿರುತ್ತದೆ. ಹುಡುಗರು, ಹುಡುಗಿಯರು ಕೂಡಿ ಮಾತನಾಡಿದರೆ ಯಾರೂ ಏನೂ ಭಾವಿಸಿಕೊಳ್ಳುವುದಿಲ್ಲ. ಕೂಡದಿದ್ದರೆ ಅವರ ಕೆಲಸವೂ ನಡೆಯುವಂತಿಲ್ಲ. ಹಗಲು ಹನ್ನೆರಡು ತಾಸೂ ಎಲ್ಲರೂ ಹೊಲಗಳಲ್ಲಿ ಕೂಡಿಯೆ ದುಡಿಯಬೇಕಾಗುತ್ತದೆ. ಸರಿ. ಚಂದ್ರಳ ಸಹವಾಸದಲ್ಲಿ ದಿನದ ಬಹುಭಾಗ ಕಳೆಯಹೋಗತೊಡಗಿತು. ಹೊಲಗಳಲ್ಲಿ, ಹಳ್ಳದಲ್ಲಿ, ಗುಡ್ಡದಲ್ಲಿ, ಗುಡಿಯಲ್ಲಿ ಇಬ್ಬರೂ ಸಂಧಿಸತೊಡಗಿದೆವು. ವಿವಾಹಿತ ಹುಡುಗಿಯಾದ ಅವಳು ಈ ರೀತಿ ನನ್ನ ಕಡೆ ಧಾವಿಸುವುದು ನನಗೆ ಆಶ್ಚರ್ಯವನ್ನುಂಟುಮಾಡುತ್ತಿದ್ದಿತಾದರೂ ಅವಳ ಸಹವಾಸದಲ್ಲಿ ಸುಖಿಪಟ್ಟಿತಾದುದರಿಂದ ನಾನು ಹೆಚ್ಚು ಯೋಚನೆಯನ್ನೇ ಮಾಡುತ್ತಿರಲಿಲ್ಲ.

'ಇದುವರೆಗೂ ಅವಳ ತಾಯಿಯನ್ನು ಕಾಣುವುದು ಸಾಧ್ಯವಾಗಿರಲಿಲ್ಲ. ಅವಳ ವಿಚಾರವೂ ತಿಳಿದಿರಲಿಲ್ಲ. ಒಂದು ದಿನ ಚಂದ್ರಳೇ ಹೇಳಿದಾಗ ನನಗೆ ಗೊತ್ತಾದುದು. ಮಾದೇವಿಗೆ ಕಾಹಿಲೆಯಾಗಿ ಆಕೆ ಹಾಸಿಗೆ ಹಿಡಿದುಬಿಟ್ಟಿದ್ದಳಂತೆ. ಎಲ್ಲಿಗೆ ಹೋಗಲೂ ಸಾಧ್ಯವಿರಲಿಲ್ಲವಂತೆ. ಅದೇ ದಿನ ನಾನು ಅವರ ಮನೆಗೆ ಹೋಗಿ ಮಾದೇವಿಯನ್ನು ಕಂಡೆ. ಅವಳ ಸ್ಥಿತಿಯನ್ನು ಕಂಡಾಗ ಅತೀವ ವೇದನೆಯಾಯಿತು. ಮಾದೇವಿ ಮೊದಲಿನ ಮಾದೇವಿಯಾಗಿರಲಿಲ್ಲ. ಕಾಹಿಲೆಯ ಕಷ್ಟದಿಂದಲೂ, ಔಷಧಿಯ ಅಭಾವದಿಂದಲೂ ಮೂಳೆಗಳ ಹಂದರದಂತಾಗಿತ್ತು ಅವಳ ಶರೀರ.

'ಮರುದಿನವೆ ನಗರದ ಡಾಕ್ಟರೊಬ್ಬರಿಗೆ ಬರಹೇಳಿ ಕಳುಹಿಸಿದೆ. ಅಂದಿನಿಂದ ಮಾದೇವಿಗೆ ಔಷಧಿಗಾರಂಭವಾಯಿತು. ಆಕೆ ಕೊಂಚಕೊಂಚವಾಗಿ ಚೇತರಿಸಿಕೊಳ್ಳತೊಡಗಿದಳು.

'ಈ ಮಧ್ಯೆ ಚಂದ್ರಳ ಮತ್ತು ನನ್ನ ಸಂಬಂಧ ದಿನಕ್ಕೊಂದು ತೆರನಾಗಿ ಬೆಳೆಯುತ್ತಿತ್ತು. ಅದು ಪಾಪವೆಂಬುದು ಗೊತ್ತಿದ್ದರೂ ಮನಸ್ಸು ತಡೆಯುತ್ತಿರಲಿಲ್ಲ. ಸುಮ್ಮನೆ ಸಭ್ಯನ ಸೋಗುಹಾಕಿ ಮಾಡಿದ ಅಪರಾಧವನ್ನು ಬಚ್ಚಿಟ್ಟುಕೊಳ್ಳುವ ಇಷ್ಟ ನನಗಿಲ್ಲವಪ್ಪ! ಅದು ಪಾಪವಾದರೂ ಮನಸ್ಸಿನ ದೌರ್ಬಲ್ಯದಿಂದ ಆ ಕೂಪಕ್ಕೇ ಬೀಳುತ್ತಿದ್ದೆ. ಅಲ್ಲದೆ ಚಂದ್ರಳೇ

ನನ್ನನ್ನು ತನ್ನ ಮೋಹಪಾಶದಿಂದ ಸೆಳೆದು ಬಿಗಿಯುತ್ತಿದ್ದಳಾದುದರಿಂದ ನನಗೆ ಏನು ಮಾಡುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ.

'ಒಂದು ದಿನ ರಾತ್ರಿ ಎಂಟು ಗಂಟೆ. ಇಬ್ಬರೂ ಅವರ ಹಿತ್ತಲದಲ್ಲಿನ ಬಣವೆಗಳ ಮಧ್ಯೆ ಒರಗಿಕೊಂಡಿದ್ದೆವು. ಮುಗಿಲಿನಿಂದ ಜ್ಯೋತ್ಸ್ನವೃಷ್ಟಿಯಾಗುತ್ತಿತ್ತು. ಎಲ್ಲೆಲ್ಲೂ ಸುಂದರ ಶಾಂತಿ ಪಸರಿಸಿತ್ತು. ನಮ್ಮನ್ನು ನೋಡುವವರಾರೂ ಇರಲಿಲ್ಲ.

'ಚಂದ್ರ ನನ್ನ ಎದೆಯ ಮೇಲೆ ತನ್ನ ಶಿರವನ್ನೊರಗಿಸಿ ಆಕಾಶದಲ್ಲಿನ ಚಂದ್ರನ ಕಡೆ ಮುಖಮಾಡಿ ಪವಡಿಸಿದ್ದಳು. ಅವಳ ನಿಡುದೋಳುಗಳು ನನ್ನ ಕತ್ತನ್ನು ಬಳಸಿ ಸುತ್ತುವರೆಯುತ್ತ ನನ್ನ ಶರೀರದಲ್ಲಿ ಸುಖಕಾರಕ ಅಲೆಗಳನ್ನು ಹುಟ್ಟಿಸುತ್ತಿದ್ದುವು. ನಮ್ಮಿಬ್ಬರ ದೇಹಗಳು ಒಂದುಗೂಡಿದ್ದುವು; ಹೃದಯಗಳೂ ಒಂದುಗೂಡಿದ್ದುವು.

' 'ಸಣ್ಣವರಾಗಿದ್ದಾಗ ನಾವಿಬ್ಬರೂ ಗಂಡಹೆಂಡಿರಾಗಿ ಆಟವಾಡಿದ್ದುದು ನಿನಗೆ ನೆನಸಿದೆಯ ಚಂದ್ರಾ?' ಎಂದು ನಾನು ಕೇಳಿದೆ.

'ಆಕೆ ಉತ್ತರಕೊಡಲಿಲ್ಲ. ಮೆಲ್ಲನೆ ನನ್ನೆದೆಯ ಮೇಲೆ ತನ್ನ ಎದೆಯನ್ನು ಹೊರಳಿಸಿ ನಸುನಕ್ಕಳು.

'ಭಾವಾವೇಶದಿಂದ ನಮ್ಮ ಎದೆಗಳ ಮಿಗಿತ ಬಲವಾಯಿತು. ಅವಳ ಎದೆಯ ಹೊಡೆತ ನನ್ನ ಎದೆಯ ರಕ್ತದಲ್ಲಿ ಮಾರ್ದನಿಗಳನ್ನು ಹುಟ್ಟಿಸತೊಡಗಿತು.

' 'ನಿನ್ನನ್ನು ಈಗಲೇ ಯಾಕೆ ಮದುವೆ ಮಾಡಿಕೊಟ್ಟರು ಚಂದ್ರಾ? ಕೊಂಚ ಕಾಲ ತಡೆದಿದ್ದರೆ ನಾನೇ ನಿನ್ನನ್ನು ಮದುವೆಯಾಗುತ್ತಿದ್ದೆ' ಎಂದೆ.

'ಆಕೆ ಕಣ್ಣುಗಳನ್ನರಳಿಸಿ ನನ್ನ ಕಡೆ ದೃಷ್ಟಿ ಹೊರಳಿಸಿದಳು. ಆ ದೃಷ್ಟಿಯಲ್ಲಿ ವಿಸ್ಮಯ ತುಂಬಿ ಬಂದಂತಿದ್ದಿತು.

' 'ಎಂತಹ ಕಾಡುಪಶುವಿಗೆ ನಿನ್ನನ್ನು ಕೊಟ್ಟರೋ ತಿಳಿಯದು. ನಿನ್ನ ಜೀವನವನ್ನೆಲ್ಲ ಹಾಳುಮಾಡಿಬಿಟ್ಟರು. ನಾವಿಬ್ಬರೂ ಈಗ ಎದೆಗೆ ಎದೆ ಸೇರಿಸಿ ಒರಗಿರುವ ಹಾಗೆ ಇಡಿಯ ಜೀವಮಾನದಲ್ಲೆಲ್ಲ ಒರಗಿರಬಹುದಾಗಿತ್ತು. ನೀನು ಬೇರೆ ಜಾತಿಯವಳಾದರೇನಾಯಿತು? – ನಾನು

ಜಾತಿಯ ಕೋತಿಯನ್ನು ಲೆಕ್ಕಿಸುತ್ತಿರಲಿಲ್ಲ. ನಿನ್ನನ್ನೇ ಮದುವೆಯಾಗುತ್ತಿದ್ದೆ.'

'ನನ್ನ ಮಾತಿನಿಂದ ಅವಳ ದುಃಖ ಉಕ್ಕಿ ಬಂದಿತೆಂದು ತೋರುತ್ತೆ. ಬಿಕ್ಕುತ್ತ ಬಿಕ್ಕುತ್ತ ಹೇಳಿದಳು. 'ಅಮ್ಮ ನನ್ನನ್ನು ಆ ನೀಚನಿಗೆ ಕೊಡಬೇಕೆಂದುಕೊಂಡಿರಲಿಲ್ಲ. ಆದರೆ ಕಕ್ಕನ ಮಾತಿನಿಂದ ಮದುವೆಯಾಗಿ ಹೋಯ್ತು. ಅವನೊ! ಗಂಡನಂತೆ ಗಂಡ! ಮೊಲೆಯ! ಪಶು! ದಿನವೆಲ್ಲ ಹೆಂಡ ಕುಡಿದು ಮತ್ತನಾಗಿ ಮನೆಗೆ ಬಂದು ಕೈಗೆ ಸಿಕ್ಕಿದುದರಿಂದ ಏಟು ಕೊಡುತ್ತಾನೆ. ನನ್ನ ಬಾಳೆಲ್ಲಾ ಗೋಳಾಯ್ತು ಶೇಖರಾ! ಸುಖಾ! ಸುಖಾ ಅನ್ನೋದೇ ನನ್ನ ಪಾಲಿಗೆ ಶೂನ್ಯ!'

' 'ಅಳಬೇಡ ಚಂದ್ರಾ! ನೀನು ಸುಮ್ಮನಿರು. ನಾನಿದ್ದೇನೆ. ನೀನು ನನ್ನವಳು! ಏನಾದರೂ ಮಾಡಿ ನಿನ್ನನ್ನು ಆ ರಾಕ್ಷಸನ ದವಡೆಯಿಂದ ಬಿಡುಗಡೆ ಮಾಡಿಸುತ್ತೇನೆ' ಎಂದೆನ್ನುತ್ತ ಅವಳನ್ನು ಬಿಗಿದಪ್ಪಿಕೊಂಡು ಮುದ್ದಿಸಿದೆ.

'ಇಬ್ಬರೂ ಮೈಮರೆತು ಅಲ್ಲಿ ಕುಳಿತಿದ್ದವು. ಇದ್ದುದಿದ್ದ ಹಾಗೆಯೆ ಯಾರೋ ಆ ಕಡೆ ಬರುತ್ತಿದ್ದುದು ಕಾಣಿಸಿತು. ನಾವಿಬ್ಬರೂ ಬೆಚ್ಚಿಬಿದ್ದು ದೂರ ಸರಿದೆವು. ನೋಡಿದರೆ ಚಂದ್ರಳ ತಾಯಿ-ಮಾದೇವಿ! ತನ್ನಲ್ಲಿನ ಬಲವೆಲ್ಲವನ್ನೂ ಏಕೀಕರಿಸಿ ಕುಂಟುತ್ತ ಕೂರುತ್ತ ಧಾವಿಸಿ ಬರುತ್ತಿದ್ದಳು.

'ನಾನು ದಿಗಿಲುಗೊಂಡೆ. ಅಪರಾಧಿಗಳಂತ ನಾವಿಬ್ಬರೂ ಸಿಕ್ಕಿಬಿದ್ದಿದ್ದವು. ಮಾದೇವಿ ಇನ್ನು ನನ್ನ ವಂಶೋದ್ಧಾರ ಮಾಡದೆ ಬಿಡಳೆಂದು ನನಗನ್ನಿಸುತ್ತಿತ್ತು. ಭೀತಿಯಿಂದಲೂ, ನಾಚಿಕೆಯಿಂದಲೂ ನನ್ನ ಶರೀರ ಕಂಪಿಸತೊಡಗಿತು.

'ಆದರೆ ಹಾಗಾಗಲಿಲ್ಲ. ಮಾದೇವಿ ಬಂದವಳೆ ನನ್ನನ್ನು ಬಯ್ಯುವುದಕ್ಕಾರಂಭಿಸಲಿಲ್ಲ. ಅದಕ್ಕೆ ಪ್ರತಿಯಾಗಿ ಕಕ್ಕುಲತೆ ತುಂಬಿದ ಸ್ವರದಲ್ಲಿ ಹೇಳಿದಳು. 'ಹೋಗು ಶೇಖರಾ! ಒಂದು ಗಳಿಗೆಯೂ ನಿಲ್ಲಬೇಡ! ಹೊರಟು ಹೋಗು! ಚಂದ್ರಿಯ ಗಂಡ ಅವಳನ್ನು ಊರಿಗೆ ಕರೆದೊಯ್ಯಲು ಈಗ ತಾನೆ ಬಂದವ ನಿಮ್ಮ ಮಾತುಗಳೆಲ್ಲವನ್ನೂ ಕೇಳಿದ್ದಾನೆ. ಕಂಠ

ತುಂಬ ಕುಡಿದು ಮತ್ತನಾದುದು ಬೇರೆ. ಕೊಡಲಿಯನ್ನೊ, ಕುಡ ಗೋಲನ್ನೊ ತರಲು ಹೋಗಿದಾನೆ. ನೀನಿಲ್ಲಿ ಅವನ ಕೈಗೆ ಸಿಕ್ಕಿಬಿದ್ದರೆ- ಹೂಂ! ಹೋಗು. ಹೋಗು....'

'ಅವಳು ಹೇಳಿ ಮುಗಿಸುವುದಕ್ಕೂ ಆತ ಕೈಲಿ ಕುಡುಗೋಲು ಹಿಡಿದು ಕೊಂಡು ಅಲ್ಲಿಗೆ ಬರುವುದಕ್ಕೂ ಸರಿಹೋಯಿತು.

''ಯಾವನೋ ನೀನು ಹೊಲೆಯ! ನನ್ನ ಹೆಂಡ್ತಿಯ ಮೇಲೆ ಕೈ ಹಾಕಿದವ! ನಿನ್ನ ಪ್ರಾಣ ಹಿಂಡಿಹಾಕಿ ಬಿಡ್ತೇನೆ' ಎಂದು ಕೂಗುತ್ತ ಕುಡುಗೋಲನ್ನೆತ್ತಿ ಆತ ನನ್ನ ಕಡೆ ಮೇಲೆ ಬಂದ.

''ಅಯ್ಯೋ ಅವನನ್ನು ಕೊಲ್ಲಬೇಡವ್ರೋ ಪಾಪಿ! ನನ್ನ ಮಗನ ಹಾಗೆ ನಾನಾತನನ್ನು ಬೆಳಸಿದ್ದೇನೆ. ನನ್ನ ಎದೆಯ ಹಾಲು ಹಾಕಿ ಸಾಕಿ ದ್ದೇನೆ. ಅವನಿಗೆ ಬದಲಾಗಿ ನನ್ನನ್ನು ಕೊಲ್ಲು ಬೇಕಾದರೆ...' ಎನ್ನುತ್ತ ಮಾದೇವಿ ನಮ್ಮಿಬ್ಬರ ಮಧ್ಯೆ ಸರ್ರನೆ ಬಂದುಬಿಟ್ಟಳು.

'ನನ್ನ ಕುತ್ತಿಗೆಗೆ ಬೀಳಲಿದ್ದ ಏಟು ಸರಿಯಾಗಿ ಅವಳ ತಲೆಗೆ ಬಿತ್ತು. ತಲೆ ಎರಡು ಹೋಳಾಯಿತು. ನೆತ್ತರ ಕಾರಂಜಿಯಂತೆ ಪುಟಿಯತೊಡಗಿತು.

'ಆ ಭೀಕರ ದೃಶ್ಯವನ್ನು ಕಂಡು ನನಗೆ ಜವಳಿ ಬಂದಿತು. ಮುಂದೇ ನಾಯಿತೆಂಬುದು ತಿಳಿಯಲಿಲ್ಲ.'

– ಇಷ್ಟು ಹೇಳಿ ಶೇಖರ ತಡೆದು ನಿಂತ. ಆಗ ಬಂದಿದ್ದ ಜವಳಿ ಈಗ ಮತ್ತೆ ಆತನಿಗೆ ಬಂದಂತೆ ತೋರಿತು ನನಗೆ.

ಕ್ಷಣಕಾಲ ಕಳೆದ ಬಳಿಕ ಕುತೂಹಲ ತುಂಬಿದ ಸ್ವರದಿಂದ ಕೇಳಿದೆ.

'ಮುಂದೇನಾಯ್ತು ಶೇಖರಾ?'

'ಆಗುವುದೇನು? ಆಗಬೇಕಾದ್ದು ಆಗಿಹೋಯ್ತು. ಚಂದ್ರಳ ಕೂಗಾಟದಿಂದ ನೆರೆಹೊರೆಯವರು ಧಾವಿಸಿ ಬಂದು ಅವಳ ಗಂಡನನ್ನು ಹಿಡಿದುಬಿಟ್ಟರು. ಮಾದೇವಿ ಆ ದಿನವೆ ಮಣ್ಣಿಗೆ ಸೇರಿಹೋದಳು. ಅವಳನ್ನು ಹೂಳಿದಾಗ ನನ್ನ ಶರೀರದಲ್ಲಿ ಇನ್ನೂ ಪ್ರಜ್ಞೆಯಿರಲಿಲ್ಲ. ಚೇತರಿಸಿಕೊಂಡಾಗ ಮಾದೇವಿಯನ್ನೂ, ನನಗಾಗಿ ತನ್ನ ಪ್ರಾಣವನ್ನೇ ಬಲಿಕೊಟ್ಟ ಅವಳ ಅದ್ಭುತ ತ್ಯಾಗವನ್ನೂ ನೆನಸಿ, ನೆನಸಿ ಅತ್ತುಬಿಟ್ಟೆ. ಅವಳ ಗೋರಿಯ

ಮೇಲೆ ಆ ಶ್ವೇತ ಸಮಾಧಿಯನ್ನು ಕಟ್ಟಿಸಿದೆ. ಇಲ್ಲಿರುವವರೆಗೂ ನಿತ್ಯವೂ ಸಾಯಂಕಾಲ ತಪ್ಪದೆ ಹೋಗಿ ಅಶ್ರುಪೂಜೆ ಮಾಡಿ ಬರುತ್ತಿದ್ದೆ. ಅವಳ ಸ್ವಂತ ಮಗಳೊಂದಿಗೆ ನಾನು ಕಳವಿನಿಂದ ಪ್ರಣಯಾಲಾಪ ನಡೆಸಿದ್ದುದನ್ನು ಕಂಡರೂ ಆಕೆ ರೇಗಲಿಲ್ಲ ನನ್ನ ಮೇಲೆ. ನಾನು ಮಹಾಪರಾಧ ಮಾಡಿದ್ದೆ ನಾದರೂ ಅದನ್ನು ಕ್ಷಮಿಸಿಬಿಟ್ಟಳು. ಅಷ್ಟುಮಾತ್ರವಲ್ಲ ಆ ಅಪರಾಧ ಕ್ಕಾಗಿ ನನಗೆ ತಕ್ಕ ಶಿಕ್ಷೆಯಾಗಲೆಂದು ತಾನೇ ಆ ಶಿಕ್ಷೆಗೆ ಬಲಿಯಾದಳು. ಮಾದೇವಿ! ಅವಳೆಂಥ ಮಾತಾಯಿ, ಅವಳೊಬ್ಬ ದೇವತೆ ಎಂದು ನಾನು ನಾನು ಆಗ ಹೇಳಿದುದು ಬದಕ್ಕೇ!'

ಮಾತು ಮುಗಿಸಿ ಬಳಿಕ ಎದುರಿಗೆ ತಲೆಯೆತ್ತಿ ನಿಂತಿದ್ದ ಆ ಶ್ವೇತ ಸಮಾಧಿಯನ್ನೊಂದು ಸಲ ದಿಟ್ಟಿಸಿ ನೋಡಿದ.

'ಮುಂದೆ ಚಂದ್ರಳ ಗತಿಯೇನಾಯಿತು? ಆಕೆಯ ಗಂಡನ ಗತಿ?'

'ಅವನಿಗೆ ಕಠಿಣ ಶಿಕ್ಷೆಯಾಯಿತು. ತಾಯಿಯ ಭೀಕರ ಕೊಲೆಯಿಂದ ಚಂದ್ರ ಹುಚ್ಚು ಹಿಡಿಸಿಕೊಂಡಳು. ಕೆಲ ತಿಂಗಳು ಜ್ವರದಿಂದ ನರಳಿ ನರಳಿ ಅವಳು ತನ್ನ ತಾಯಿಯನ್ನು ಹಿಂಬಾಲಿಸಿದಳು.'

ಕೇಯರನ ಸ್ವರ ಗದ್ಗದವಾಗಿತ್ತು. ತುಂಬಿ ಬಂದ ಕಂಠದಿಂದ ಆತನು ಹೇಳಿದ.

'ತಾರುಣ್ಯದ ಉನ್ಮಾದದ ಮಹಾಪೂರಕ್ಕೆ ಸಿಕ್ಕಿಬಿದ್ದು ನಾನು ಮಾಡಿದ ಪಾಪ ಅದು! ಚಂದ್ರಳಿಗೆ ಮದುವೆಯಾಗಿದ್ದುದು ತಿಳಿದೂ ನಾನು ಅವಳೊಂದಿಗೆ ಸರಸ ಬೆಳೆಸಿದುದರಿಂದಲೇ ಇಷ್ಟೆಲ್ಲ ಅನರ್ಥವಾಯಿತು. ಸುಶಿಕ್ಷಿತರೂ, ಸುಸಂಸ್ಕೃತರೂ ಎಂದು ಜಂಭಪಟ್ಟುಕೊಳ್ಳುವ ನಾವೂ ಇಂತಹ ಅಕ್ಷಮ್ಯ ಅಪರಾಧಗಳನ್ನು ಮಾಡುತ್ತೇವೆ. ಮಾದೇವಿ ಮತ್ತು ಚಂದ್ರಳಂತಹ ಬಡಪಾಯಿಗಳು ನಮ್ಮ ಅಪರಾಧಗಳಿಗಾಗಿ ಪ್ರಾಣಬಿಡ ಬೇಕಾಗುತ್ತದೆ. ಆ ತಾಯಿಯ ಹೃದಯ ಎಷ್ಟು ದೊಡ್ಡದು! 'ಅವನನ್ನು ಕೊಲ್ಲಬೇಡ! ನನ್ನ ಎದೆಯ ಹಾಲು ಹಾಕಿ ಅವನನ್ನು ಸಾಕಿದ್ದೇನೆ. ಅವನಿಗೆ ಬದಲಾಗಿ ನನ್ನನ್ನು ಕೊಲ್ಲು' ಎಂದು ಅವಳು ಆ ದಿನ ಹೇಳಿದ ಮಾತುಗಳನ್ನು ಸಾಯುವವರೆಗೂ ಮರೆಯಲಾರೆ ನಾನು! ನನಗೆ ಪ್ರಾಣ

ಕೊಟ್ಟವಳು ನನ್ನ ಹೆತ್ತ ತಾಯಿಯೇನೋ ನಿಜ! ಅದನ್ನುಳಿಸುವುದಕ್ಕಾಗಿ ತನ್ನ ಪ್ರಾಣವನ್ನೇ ಬಲಿ ಕೊಟ್ಟಳು ಈ ತಾಯಿ! ಅಂತಹ ತಾಯಿಗೆ, ಅಂತಹ ದೇವಿಗೆ ಇನ್ನಾವ ಪೂಜೆಯನ್ನರ್ಪಿಸಬೇಕು ಈ ಪಾಪಿ! ಅಶ್ರುಪೂಜೆ ಅಷ್ಟೆ!'

ಅಶ್ರುಪೂಜೆ!

ಅಹುದು! ನಿಜವಾಗಿಯೂ ಶೇಖರ ತನ್ನ ಆ ಎರಡನೆಯ ತಾಯಿಯ ಸಮಾಧಿಯನ್ನು ನಿಟ್ಟಿಸುತ್ತ ಅಶ್ರುಪೂಜೆ ಸಲ್ಲಿಸುತ್ತಿದ್ದ.

ಬೆಂಗಳೂರು ಜನವರಿ, ೧೯೪೨

# ಹೂವಿನ ಹುಡುಗಿ!

'ಮೋಡ ಮುಸುಕಿತು. ಮಿಂಚು ಹೊಳೆಯಿತು. ಮಳೆಹನಿಗಳು ಉದುರತೊಡಗಿದುವು.

ಆಕಾಶದ ಕಡೆ ಹೊರಳಿದ್ದ ದೃಷ್ಟಿ ತಿರುಗಿಸಿ ಬಾಗಿಲಿಗೊರಗಿ ನಿಂತಿದ್ದ ಲಲಿತಳ ಕಡೆ ನೋಡಿದೆ.

ಆಕಾಶದಲ್ಲಿನ ಆ ಕಪ್ಪು ಮೋಡ! ಅವಳ ಮುಖದ ಮೇಲಿನ ಈ ಕಪ್ಪು ಮೋಡ! ಅದರ ಪಡಿನೆಳಲೇ ಇಲ್ಲಿ ನನ್ನಾಕೆಯ ಮುಖದ ಮೇಲೆ ಮೂಡಿದ ಹಾಗಿತ್ತು. ಹುಬ್ಬು ಸಂಕುಚಿತವಾಗಿತ್ತು. ಕೆನ್ನೆಗಳ ಮೇಲೆ ಬಿಂಕದ ಮುನಿಸು ಮೂಡಿತ್ತು.

'ಏನೇ?' ಎಂದೆ.

ಕೊರಳು ಕೊಂಕಿಸಿ ಆಕೆ ಹಿಂದೆ ತಿರುಗಿದಳು. ಮಾತನಾಡಲಿಲ್ಲ.

ಹೊರಡುತ್ತಿದ್ದವನು ನಿಂತುಕೊಂಡು ಅವಳ ಕೈಗಳೆರಡನ್ನು ಹಿಡಿದುಕೊಂಡು ಮೆಲ್ಲನೆ ಒತ್ತುತ್ತ ಕೇಳಿದೆ.

'ಏನಪ್ಪಾ ಇದು ಮತ್ತೆ? ಇವತ್ತೊಂದು ಹೂಡಿದಿಯೇನೇ ಆಟಾನ?'

'ಆಟಾನೋ ಪಾಟಾನೋ! ಬಹಳ ಒ--ಳ್ಳೆ--ವ--ರು ನೀವು ಹೋಗಿ! ನಿಮ್ಮ ಹತ್ತಿರ ಯಾರು ಮಾತನಾಡಬೇಕು?' ಎಂದಳು.

'ಯಾರು ಅಂದ್ರೆ ಇನ್ನಾರು ಬರ್ತಾರೇ? ನನ್ನ ಜತೇಲಿ ಹಸೇ ಮೇಲೆ ಕೂತ ಹುಡುಗೀ ತಾನೇ ಮಾತನಾಡೋದು?'

'ಹಸೀನೋ-ಬಿಸೀನೋ-ಹೋಗಿ. ನಿಮ್ಮ ಸಹವಾಸವೇ ಬೇಡ....' ಎಂದು ಹೇಳಿದರೂ ಆಕೆ ನನ್ನ ಪಕ್ಕಕ್ಕೆ ಬಂದು ಕೋಟಿನ ಗುಂಡಿಗಳನ್ನು ಸುಮ್ಮನೆ ಆಡಿಸುತ್ತ ಹೇಳಿದಳು.

'ನೋಡಿ. ಇವತ್ತಾದರೂ ಮರೆತೀರಿ ಅಂದೆ!'

'ಏನೇ ಅದು—ಮರೆಯೋದು? ರಿಬ್ಬನ್ನೇ? ಪಿನ್ನೇ?—ಕವಡೇನೇ? ಇಲ್ಲ ಮೈಸೂರ್ ಪಾಕೇ?'

'ಶುರುಮಾಡಿದ್ರಲ್ಲಾ ಹಾಸ್ಯಾನ! ಮಾತು ಹಾರಿಸಬೇಕೂ ಅಂದ್ರೆ ಪ್ರಾರಂಭವಾಗಿ ಬಿಡುತ್ತೆ ನಿಮ್ಮ ಗ್ರಾಮಫೋನ್! ಅಲ್ಲಾ ನೆನ್ನೆ ಬೆಳಗ್ಗೆ ನೀವು ಹೊರಗೆ ಹೊರಟಾಗ ಏನು ತರಹೇಳಿದ್ದೆ ಜ್ಞಾಪಕ ಇದೆಯೋ ಅಂದೆ.'

ಬಂತಲ್ಲಾ ಗ್ರಹಚಾರ! ಈಗ ನಿಜಕ್ಕೂ ನಾನೇ ಸೋತು ಹೋಗಬೇಕಾದ ಪರಿಸ್ಥಿತಿಯೇ ಸರಿ. ನೆನ್ನೆ ಅವಳೇನು ಹೇಳಿದ್ದಳೋ—ನಾನೇನು ಕೇಳಿದ್ದೆನೊ—ಒಂದೂ ಜ್ಞಾಪಕವಿರಲಿಲ್ಲ ನನಗೆ. ಇಂದಿನ ಮಾತೇಕೆ ಬಿಡಿ—ನೆನ್ನೆ ಮಧ್ಯಾಹ್ನ ಆವಾಗ ಅದರ ನೆನಪು ನನಗಿತ್ತೊ ಇಲ್ಲವೊ! ಈ ಹೆಂಗಸರು ಹೇಳುವ ವಸ್ತುಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದೂ ಕಷ್ಟವೇ ಸರಿ. ಹೇಳುತ್ತಾರೆ ಒಂದು ಪಟ್ಟೀನೇ. ಒಂದೊಂದೆ ವಸ್ತುವನ್ನಾದರೂ ಹೇಳಿದರೆ ತಲೆಯಲ್ಲಿ ಕಟ್ಟಿ ಇಟ್ಟುಕೊಳ್ಳಲಿಕ್ಕಾದೀತು. 'ಗಸೆಗಸೆ, ಸಾಸಿವೆಕಾಳು, ಬೆಲ್ಲ, ಕಡಲೇಪುರಿ, ಟೇಪು, ಕುಂಕುಮ, ಜಾಕೀಟ್ ಬಟ್ಟೆ, ಕೋತಿಗೆ ತಿನ್ನಿಸಲು ಕಳ್ಳೇಕಾಯಿ ಪೆಪ್ಪರ್‌ಮೆಂಟ್-ಬಿಸ್ಕತ್ತು, ಬೆಕ್ಕಿನ ಮರಿಯ ಕತ್ತಿಗೆ ಹಾಕಲು ಒಂದು ಗಂಟೆ... ಒಂದೇ ಎರಡೇ ... ಹೀಗೆ ನೂರಾರು ಚಿತ್ರವಿಚಿತ್ರ ವಸ್ತುಗಳು.

ಇವುಗಳಲ್ಲಿ ಯಾವುದನ್ನು ತರಹೇಳಿದ್ದಳು ಲಲಿತಾ? ಅಡಿಗೆಗೆ ಬೇಕಾದ ಸಾಮಾನಂತೂ ಎಲ್ಲ ಇದ್ದೇ ಇದೆ ಸಾಕಾದಷ್ಟು. ಅದನ್ನಂತೂ ಅವಳು ಕೇಳಿರಲಾರಳು. ಇನ್ನುಳಿದುದು ಕುಂಕುಮ.... ಹೂಂ! ಅದೂ ಇದಯಲ್ಲ ಪೊಟ್ಟಣ ಪೊಟ್ಟಣ.... ಜಾಕೀಟ್ ಬಟ್ಟೆಗೇನು ಧಾಡಿ! ಹತ್ತು ಹನ್ನೆರಡು ರವಿಕೆಗಳಿವೆ ಹೊಚ್ಚ ಹೊಸವು!—ಕೋತಿಗೆ ಕಳ್ಳೇಕಾಯಿ.... ಬೆಕ್ಕಿನ ಮರಿಗೆ ಗಂಟೆ.... ನಾಯಿಮರಿಗೆ ಬಿಸ್ಕತ್ತು.... ಈ ಮೂರರಲ್ಲಿ

ಯಾವುದಾದರೊಂದು ಇರಬೇಕು — ಎಂದುಕೊಂಡು ಕೇಳಲು ನಾಲಗೆ ಎತ್ತಿದೆ. 'ಕೋತಿಗೆ....' ಎಂದು ಮೆಲ್ಲನೆ ಹೇಳುತ್ತಲೂ ಲಲಿತೆಯ ಕಣ್ಣು....ಅಬ್ಬಾ.... ಇಷ್ಟು ದೊಡ್ಡದಾಗಿ ಅರಳಿದುವು! ಸರಿ—ಆ ಮಾತು ಅಲ್ಲೇ ಉಳಿಯಿತು.

ಎಡಗೆನ್ನೆಯ ಮೇಲೆ ಬೆರಳಿರಿಸಿಕೊಂಡು ಲಲಿತಾ ಅಣಕದ ನಗೆಯೊಂದಿಗೆ ಹೇಳಿದಳು.

'ಈಗ ಗೊತ್ತಾಯಿತು ಕಣ್ರೀ!'

'ಏನು!'

'ಗೊತ್ತಾಯಿತೂ ಅಂದೆ!'

'ಏನೂ ಅಂದೆ!'

'ಕಲಾವಿದರು, ಪ್ರಖ್ಯಾತ ಚಿತ್ರಗಾರರು ಅಂತ ಜನರಿಂದ ಹೊಗಳಿಸಿಕೊಂಡವರೊಬ್ಬರ ಜ್ಞಾಪಕಶಕ್ತಿ ಎಂಥಾದ್ದು ಅಂತ ಗೊತ್ತಾಯಿತು!....'

ಸರಿ! ಈಗಂತೂ ನಾನು ಸೋಲನ್ನೊಪ್ಪಿಕೊಳ್ಳಲೇಬೇಕಾಯಿತು. ಆದರೆ ಗಂಡಸಿನ ಬಿಂಕ ತೀರಬೇಕಲ್ಲ! ಮನಸ್ಸೇನೊ ಸೋತುಹೋಯಿತಾದರೂ ನಾಲಗೆ ಸೋಲಲಿಲ್ಲ.

'ಏನನು ಹೇಳಬೇಡೀ ಬಜಾರಿ! ಹೊತ್ತಾಯಿತು. ಹೋಗಬೇಕು!' ಅಂದೆ.

'ತಪ್ಪಾಯ್ತೆ ಅಂತ ಮಾತು ಕೊಟ್ಟರೆ ಹೇಳುತ್ತೇನೆ'

'ಬರೀ ಮಾತು ಕೊಡಬೇಕೋ—ಇಲ್ಲ—ಅದಕ್ಕೆ ಸಾಕ್ಷಿ ಅಂತ ಇನ್ನೇನಾದರೂ ಕೊಡಬೇಕೋ?'

'ನಿಮ್ಮ ಆ 'ಇನ್ನೇನಾದರೂ' ನೀವೇ ಇಟ್ಟುಕೊಳ್ಳಿ. ನನಗೆ ಒಳ್ಳೆ ಸಂಪಿಗೆ ಹೂ ತಂದುಕೊಡಿ. ಸಾಕು'

'ಅಯ್ಯೋ! ಇಷ್ಟೇನೇ? ಸಂಪಿಗೆ ಹೂವಿಗಾಗಿ ಇಷ್ಟು ರಗಳೇ ಏನೇ ಚಿನ್ನದು? ಆಗಲೇ ಹೇಳಬಾರದಾಗಿತ್ತೇ ಮಹರಾಯಿತಿ?'

'ರಗಳೆ ಹಚ್ಚದಿದ್ದರೆ ನೀವು ತರುತ್ತಿದ್ದಿರಿ! ನಾನು ಮುಡಿದುಕೊಳ್ಳುತ್ತಿದ್ದೆ! ಏನೋ ಅಪರೂಪದ ಹೂ ಈ ಊರಿಗೆ ಅದು! ಮನೆಯ ಕಡೆ

ಯಾರೂ ತರುವುದಿಲ್ಲಾಂತ ನಿಮಗೆ ಹೇಳಿದರೆ ನೀವು ನಿತ್ಯ ಮರೆತೇನೇ ಬರೋದು! ಇಂದಾದರೂ ತರ್ತೀರೊ, ಇಲ್ಲಾ ಬರಿಗೈಲೇ ಬರ್ತೀರೋ?' ಎಂದಳು ಲಲಿತಾ ನನ್ನ ಮುಂಗೈ ಚಿವುಟುತ್ತ!

'ಅಯ್ಯಯ್ಯೋ! ರಕ್ತಾ ತೆಗೀತೀಯಲ್ಲೆ! ಬಿಡೇ! ಗಂಡುಬೀರೀ!'

'ಹಾಗೇ ಆಗಬೇಕು ನಿಮಗೆ. ಪೇಟೆಯವರೆಗೂ ಕೈ ನೋಯುತಾನೇ ಇರಬೇಕು. ಆಗ ನಾ ಹೇಳಿದ್ದು ಏನೂಂತ ಖಂಡಿತ ನೆನಪಾಗುತ್ತೆ!' ಎಂದಳು ನನ್ನ ಹೊಸ ಹುಡುಗಿ!

'ಹುಡುಗೀರು ಅಂದರೆ ಹುಡುಗೀರು! ಏನು ಇವರ ಉಪಾಯಗಳು! ಯಾವ ಬೃಹಸ್ಪತಿ ಇವರ ತಲೆಯಲ್ಲಿ ಬುದ್ಧಿ ಬರೆದಿದಾನೊ ಏನೊ!' ಎಂದು ಕೊಳ್ಳುತ್ತಾ ಹೊರಟುಬಿಟ್ಟೆ.

ನಿಜಕ್ಕೂ ಒಳ್ಳೆಯ ಉಪಾಯವನ್ನೇ ಕೈಗೊಂಡಿದ್ದಳು ಲಲಿತಾ. ಅವಳು ಹೇಳಿದ ಹಾಗೆ ಪೇಟೆಗೆ ಬರುವವರೆಗೂ ನನ್ನ ಮುಂಗೈ ನೋಯು ತ್ತಲೇ ಇತ್ತು. ಮರೆವಿನ ರೋಗಕ್ಕೆ ಮಡದಿಯ ಮದ್ದು!

ಪೇಟೆಯ ಮೂಲೆಯೊಂದರಲ್ಲಿ ಹಳ್ಳಿಯ ಹುಡುಗಿಯೊಬ್ಬಳು ಸಂಪಿಗೆ ಹೂ ಇಟ್ಟುಕೊಂಡು ಕುಳಿತಿದ್ದಳು. ಹತ್ತಿರ ಹೋಗಿ ನೋಡಿದೆ. ನಿಜಕ್ಕೂ ಸುಂದರವಾದ ಹೂಗಳು!

'ಏನಮ್ಮಾ, ಹೇಗೆ ಕೊಡುತೀಯಾ?'

'ತಕೊಳ್ಳಿ ಬುದ್ಧೀ, ಡಜನಿಗೆ ಹತ್ತು!'

'ಏನೆಂದೆ? ಡಜನಿಗೆ ಬರೀ ಹತ್ತೇ? ಕೊಡೋದು ಹೇಳಮ್ಮಾ!— ಇಪ್ಪತ್ತು ಕೊಡ್ತೀಯಾ?'

ಹ್ಯಾಗೆ ಕೊಡೋಕಾಗುತ್ತೆ ಬುದ್ಧೀ? ಆರು ಮೈಲಿಯಿಂದ ಬಂದು ಮಾರುತ್ತಾ ಕೂತಿದ್ದೇನೆ. ಹೂ ಇಳಿಸಬೇಕಾದರೆ ಜೀವಾನೇ ಅಡವಿರಿಸ ಬೇಕಾಗುತ್ತೆ! ತಕೊಳ್ಳಿ ಬುದ್ಧೀ, ತಕೊಳ್ಳಿ!'

ಅವಳ ಮಾತು, ಆ ಶೈಲಿ, ಸ್ವರದಲ್ಲಿ ತುಂಬಿ ಬರುತ್ತಿದ್ದ ಕರುಣೆಯ ಲಹರಿ, ಮಾತನಾಡುವಾಗ ಮುಖದಲ್ಲಿ ಮೂಡಿದ್ದ ದೀನಭಾವ, ದೃಷ್ಟಿಯಲ್ಲಿ ತುಂಬಿದ್ದ ಕಾತುರತೆ ನನ್ನ ಮುಖವನ್ನೇ ಕಟ್ಟಿಬಿಟ್ಟಿತು.

ಒಂದು ಬಾರಿ ಅವಳನ್ನು ಅಡಿಯಿಂದ ಮುಡಿಯವರೆಗೆ ಸೂಕ್ಷ್ಮವಾಗಿ ನಿಟ್ಟಿಸಿ ನೋಡಿದೆ. ಎಂಥ ಅನುಪಮ ರೂಪರಾಶಿ!

ಸಂಪಿಗೆಯೊಂದನ್ನೆತ್ತಿ ಅದರ ಗಂಧ ಹೀರುತ್ತ ಪ್ರಶ್ನೆ ಮಾಡಿದೆ.

'ಏನಮ್ಮಾ. ಯಾವೂರು ನಿನ್ನದು?'

ಊರಿನ ವಿಷಯ ಹೊರಡುತ್ತಲೂ ಆಕೆ ಕೊಂಚ ದಿಗಿಲುಗೊಂಡ ಹಾಗೆ ತೋರಿತು. ಆ ಮುಗ್ಧ ಮುಖದ ಮೇಲೆ ಯಾವುದೊ ವಿಚಿತ್ರ ಭಾವವೊಂದು ಮಿಂಚಿ ಮಾಯವಾಯಿತು. ಹೇಳಿದಳು.

'ಇಲ್ಲೇ ಆರು ಮೈಲಿನ ಮೇಲೆ ಚಿಕ್ಕಳ್ಳಿ, ಇಲ್ಲನೇ ಬುದ್ದೀ, ಅದೇ ನಮ್ಮ ಊರು!'

'ಚಿಕ್ಕಳ್ಳಿ! ದೊಡ್ಡಳ್ಳಿ! ಯಾವ ಬೃಹಸ್ಪತಿ ಹಾಕು ಇಂಥ ಹೆಸರು ಇಡ್ತಾರೊ ಏನೋ! ಬೇರೆ ಹೆಸರುಗಳೇ ಹೊಳೆಯುವುದಿಲ್ಲನ್ನೋ ಏನೋ ಇವರಿಗೆ ಸರಿ. ಸರಿ. ಕಟ್ಟಮ್ಮ ಇಪ್ಪತ್ತು ಹೂ!'

ಆಕೆ ಬೇಗಬೇಗನೆ ಒಕ್ಕೊಳ್ಳಿಯ ಅರಳಿದ ಹೂಗಳನ್ನಾರಿಸಿ ಕಟ್ಟಿ ನನ್ನ ಕೈಗೆ ಕೊಟ್ಟಳು. ದುಡ್ಡು ತೆಗೆದುಕೊಳ್ಳಲು ಮುಂದಾದ ಆ ಕೋಮಲ ಕೈ! ಯಾವಳೊಬ್ಬ ಸಿನಿಮಾ ಸುಂದರಿಯೂ ಸಹ ಈ ಹೂವಿನ ಹುಡುಗಿಯ ಕೈ ಕಂಡು ಅಸೂಯೆ ಪಟ್ಟುಕೊಂಡಾಳು! ಎನ್ನಿಸಿತು ನನಗೆ.

ಹಠಾತ್ತಾಗಿ ನನ್ನ ತಲೆಯಲ್ಲಿ ಯೋಚನೆಯೊಂದು ಹುಟ್ಟಿಕೊಂಡಿತು. ಮತ್ತೊಂದು ಬಾರಿ ಅವಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದೆ.

ಬರ್ತೀನಮ್ಮ ಹಾಗಾದರೆ! ಪ್ರತಿನಿತ್ಯ ಸಂಪಿಗೆ ಬೇಕಾಗುತ್ತೆ ನನಗೆ. ನೀನೇ ಕೊಡುತ್ತಾ ಇರು. ತಿಳೀತೇ!' ಎಂದು ಹೇಳಿ ಹೊರಟು ಬಂದೆ.

ಈ ಸಂಪಿಗೆ ಹೂಗಳ ಕಂಪಿಗೆ ಮಾರುಹೋಗಿ ಲಲಿತಾ ಅವುಗಳನ್ನು ಎದೆಯ ಮೇಲಿಟ್ಟುಕೊಂಡೆ ನಿದ್ರಿಸುತ್ತಿದ್ದಾಳೆ. ಸಾತ್ವಿಕ ಸಂತಸದಿಂದ ಅರಳಿದ ನನ್ನವಳ ಮುಖ ನಿಟ್ಟಿಸಿದ ಹಾಗೆಲ್ಲ ಈ ಮೂರ್ತಿ ಮಾಯವಾಗಿ ಅಲ್ಲಿ ಆ ಮೂರ್ತಿಯೆ ಮೊಗದೋರುತ್ತಿದೆ. ಆ ಹೂವಿನ ಹುಡುಗಿ! ಅವಳ ತೆಳ್ಳಗಿನ ತುಂಬು ಹರೆಯದ ಶರೀರ—ಮುಗ್ಧ ಮೋಹಕ ಮುಗುಳುನಗೆ ಕೂತ ಭಂಗಿ—ಎತ್ತಿದ ಕೈ ಕತ್ತಿನ ಡೋಲು....

ನನ್ನಲ್ಲಿ ಮೂಡಿದ ಯೋಜನೆ ಫಲಿಸಿದರೆ? ಆಹಾ! ಅದೆಷ್ಟು ಚೆನ್ನಾದೀತು!"

## ( ೧ )

'ಆಹಾ! ಅದೆಷ್ಟು ಚೆನ್ನಾದೀತು! ಎಷ್ಟು ಹಸು ಬಂದೀತು! ತುಂಬಾ ಚೆನ್ನಾಗುತ್ತೆ!' ಎಂದು ಅಣಕವಾಡಿ ಲಲಿತಾ ದಿನಚರಿಯ ಪುಸ್ತಕವನ್ನು ಮೇಜಿನ ಮೇಲೆ ಅಪ್ಪಳಿಸಿದಳು. ದುಸರುಬುಸನೆ ಅಡಿಯಿಡುತ್ತ ಅರವಿಂದನ ಕೊಟಡಿಗೆ ನಡೆದಳು.

ಕಿಟಕಿಯೊಳಗಿನಿಂದ ತೂರಿಬರುತ್ತಿದ್ದ ಸಂಜೆಗೆಂಪಿನ ಬೆಳಕು ಅರವಿಂದ ಚಿತ್ರ ಬರೆಯುವುದರಲ್ಲಿ ತಲ್ಲೀನನಾಗಿದ್ದ.

ಬಾಗಿಲಿನ ತೆರೆಯನ್ನು ದಾಟಿ ಹೊರಗಿನಿಂದ ಲಲಿತಾ ಕೋಣೆಯೊಳಕ್ಕೆ ಕಣ್ಣು ಬಾಣ ಬಿಟ್ಟಳು.

ಹೆದೆಯೇರಿಸಿದ ಬಿಲ್ಲಿನಂತೆ ಅವಳ ಹುಬ್ಬುಗಳೆರಡೂ ಕುಣಿದು ಕುಣಿದುವು. ಯಾವುಯಾವುದೋ ಭಾವನೆಗಳು ಅವಳ ಮುಖದಲ್ಲಿ ಮೂಡಿ ಮಾಯವಾದುವು. ಸೀರೆಯ ನಿರಿಗಳನ್ನು ಸರಸರನೆ ಹಾರಿಸುತ್ತ ಬಂದು ಪತಿಯ ಹಿಂದೆ ನಿಂತು ನೋಡಿದಳು.

ಚೆಂದುಟಿಯ ಚೆಲುವೆಯೊಬ್ಬಳು ಕೈಲಿ ನಂದಿಗೆಯೊಂದನ್ನು ಹಿಡಿದು ಕೊಂಡು ಮಂದಹಾಸ ಬೀರುತ್ತ ನಿಂತಿದ್ದ ಚಿತ್ರವದು.

ಕುಂಚಲಿಯನ್ನು ತಿರುವುತ್ತ ಅರವಿಂದ ಅವಳ ಕಡೆ ಹೊರಳಿದ.

'ಏನಂತೀಯೆ? ಹೇಗೆ ಬಂದಿದೆ ಚಿತ್ರ?' ಎಂದ.

ಲಲಿತೆಯ ಕೋಪ ಉಕ್ಕೇರಿ ಬಂತು. ತಟ್ಟನೆ ಆ ಚಿತ್ರ ಫಲಕವನ್ನೆತ್ತಿ ದೂರ ಬಿಸುಟಿದಳು. ಆವೇಗಪೂರಿತ ಸ್ವರದಲ್ಲಿ ಹೇಳಿದಳು.

'ಆ ವಿಚಾರ ಏನು ಹೇಳಿಬಿಡಿ. ನನ್ನನ್ನು ಈಗಲೆ ಊರಿಗೆ ಕಳಿಸಿಬಿಡಿ!'

ಯಾವ ವಿಚಾರ?.. ಏನು ಸಮಾಚಾರ? ಯಾವುದೂ ಅರ್ಥವಾಗ ಲಿಲ್ಲ ಅರವಿಂದನಿಗೆ. ಚಿತ್ರದ ಬಗ್ಗೆ ಅಭಿಪ್ರಾಯ ಕೇಳಿದರೆ ಅವಳೆತ್ತಿ

ಬಿಸುಟು ಬಿಟ್ಟಳಲ್ಲಾ . ಅಬ್ಬಾ ಕೋಪವೆ! . ಕಾರಣವಾದರೂ ಏನು ಅದಕ್ಕೆ? ಯಾವುದೂ ಅವನಿಗೆ ಹೊಳೆಯಲಿಲ್ಲ.

ಲಲಿತಾ ಬಿಕ್ಕುತ್ತ ಬಿಕ್ಕುತ್ತ ಹೇಳಿದಳು.

'ಸಂಪಿಗೆ ಹೂ ತನ್ನಿ ಅಂತ ಯಾವ ಕೆಟ್ಟ ಗಳಿಗೆಯಲ್ಲಿ ಹೇಳಿದೆನೋ ನಾನು! ನಿಮ್ಮೆದೆಯಲ್ಲಿ ಆ ವಿಚಾರ ಬಂತು. ಸರಿ. ಸರಿ. ಹಾಗೇ ಆಗಲಿ. ನನ್ನ ಕತ್ತು ಕುಯ್ದು ನಿಮ್ಮ ವಿಚಾರ ಫಲದಾಯಕವಾಗಿ ಮಾಡಿಕೊಳ್ಳಿ. ತುಂಬಾ ಚೆನ್ನಾಗುತ್ತೆ.'

ತ್ವೇಷದಿಂದ ಎದ್ದುಬಿಟ್ಟು ಅರವಿಂದ ಅವಳನ್ನು ಗಟ್ಟಿಯಾಗಿ ಅಪ್ಪಿಕೊಂಡ. ಕಂಬನಿ ತುಂಬಿದ ದೃಷ್ಟಿಯಿಂದ ಲಲಿತಾ ಅವನ ಕಡೆ ನೋಡಿದಳು. ಅವನ ಕಣ್ಣುಗಳ ಪರುಷಭಾವ ಅವಳ ಎದೆಯಲ್ಲಿನ ಅರ್ಥ ಸಂಶಯವನ್ನೇನೊ ದೂರಗೊಳಿಸಿತು. ಅದರ ಸ್ಟ್ಯಾಂಡ ಮೇಲೆ ಬಿದ್ದುಕೊಂಡಿದ್ದ ಆ ಹೂವಿನ ಹುಡುಗಿಯ ಚಿತ್ರದ ಕಡೆ ದೃಷ್ಟಿ ಹೊರಳುತ್ತಲೇ ಮತ್ತೆ ಕೋಪವುಕ್ಕೇರಿತು.

ಅವನ ಕೈ ಬಿಡಿಸಿಕೊಂಡು ಲಲಿತಾ ಕುರ್ಚಿಯಲ್ಲಿ ಕುಕ್ಕರಿಸಿದಳು. ಎರಡು ಕೈಗಳಿಂದಲೂ ಮುಖ ಮುಚ್ಚಿಕೊಂಡು ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿದಳು.

## ( ೨ )

ಮದುವೆಯಾದಂದಿನಿಂದ ಎಂದೂ ಬಂದಿರಲಿಲ್ಲ ಇಂಥ ಬಿಕ್ಕಟ್ಟು. ನಿತ್ಯವೂ ಅದು ಹೆಚ್ಚಾಗತೊಡಗಿತು. ನಾಲ್ಕಾರು ದಿನಗಳು ಮೌನದ ಅಸಹ್ಯ ಶಾಂತಿಯಲ್ಲಿ ಕಳೆದುಹೋದುವು. ಗಂಡ ಹೆಂಡರಲ್ಲಿನ ಮಾತು-ಕತೆ, ಗೇಲಿ-ತಮಾಷೆ, ಪ್ರಣಯಚೇಷ್ಟೆ, ಸರಸಸಲ್ಲಾಪ, ತಂಟೆ-ತಗಾದೆ ಎಲ್ಲವೂ ನಿಂತುಹೋಯಿತು. ಯಂತ್ರದ ಬೊಂಬೆಗಳಂತೆ ಇಬ್ಬರೂ ಕಾರ್ಯಗಳನ್ನಷ್ಟು ಮಾಡುತ್ತಿದ್ದರು. ಈ ವರ್ತನೆ ಇಬ್ಬರಿಗೂ ಅಸಹನೀಯವಾಗಿತ್ತು. ಆದರೇನು! ದುರಭಿಮಾನ ಕೇಳಬೇಕಲ್ಲ!

ಐದನೆಯ ದಿನ ಇನ್ನೂ ಬೆಳಗಾಗಿರಲಿಲ್ಲ. ಜಾಗರಣೆಯಿಂದಲೂ ಮಾನಸಿಕ ಅಶಾಂತಿಯಿಂದಲೂ ಬೇಸರಗೊಂಡಿದ್ದ ಅರವಿಂದ ಎದ್ದು ಹೊರಕ್ಕೆ ಬಂದ. ದಕ್ಷಿಣದಿಂದ ಸುಯ್ಯನೆ ಬೀಸಿ ಬರುತ್ತಿದ್ದ ತಂಗಾಳಿಗೆ ಮೈಯೊಡ್ಡಿ ನಿಂತು ಸುತ್ತಲೂ ಶೂನ್ಯದೃಷ್ಟಿ ಹೊರಳಿಸಿದ.

ಆಕಾಶದಲ್ಲೆಲ್ಲ ಕಪ್ಪು ಮೋಡಗಳೇ—ಎಂದು ಹೋದಾವೊ ಅವು ತನ್ನ ಸಂಸಾರದಿಂದ—ಎಂದು ಹಂಬಲಿಸಿದ ಅರವಿಂದ. ಒಂದು ವೇಳೆ ಅದೇ ಸ್ಥಿತಿ ಕೊನೆಯವರೆಗೂ ಉಳಿದುಹೋದರೆ ಲಲಿತೆಯ ಸಂಶಯ ಹಾಗೆಯೆ ಇದ್ದುಕೊಂಡು ಬಿಟ್ಟರೆ—ತನ್ನ ಸಂಸಾರದ ಗತಿಯೇನು? ತನ್ನ ಗತಿಯೇನು?—ತಾನು ಕಟ್ಟಿದ ಕನಸುಗಳೆಲ್ಲ ಬರೀ ಕನಸಾಗುವವೇ—ಎಂದು ಚಿಂತಿಸಿದ.

ವಿಚಾರ ಜಾಲದಲ್ಲಿ ಸಿಲುಕಿದ್ದ ಅರವಿಂದನಿಗೆ ಲಲಿತಾ ಬಂದು ಪಕ್ಕದಲ್ಲೇ ನಿಂತುಕೊಂಡರೂ ಎಚ್ಚರವಾಗಲಿಲ್ಲ.

ಆಕೆ ಬಂದು ಮೆಲ್ಲನೆ ಅವನ ಭುಜವನ್ನು ಬೆರಳಿಂದ ತಟ್ಟಿದಳು. ‘ರೀss’ ಎಂದಳು.

ಬರೀ ‘ರೀss’ ಅಂದರೇನು? ಎಷ್ಟು ಮಧುರವಾಗಿ ತೋರಿತು ಅರವಿಂದನಿಗೆ ಅದು! ನಾಲ್ಕಾರು ದಿನಗಳ ಮೌನವ್ರತಾಚರಣೆಯ ತರುವಾಯ ನಲ್ಲೆಯಾಡಿದ ನುಡಿಯದು! ಒಂದೇ ಒಂದು ಶಬ್ದವಾದರೇನು! ಎಷ್ಟು ಮೋಹಕ! ಎಷ್ಟು ಆಕರ್ಷಕ!

ಅವಳ ಕೈಗಳೆರಡನ್ನೂ ತನ್ನ ಕೈಲಿ ಗಟ್ಟಿಯಾಗಿ ಹಿಡಿದುಕೊಂಡು ಹೃದಯವೇ ಹೊರಡುವಂತೆ ನುಡಿದ ಅರವಿಂದ.

‘ಲಲಿತಾ....ನನ್ನ ಲಲಿತಾ....ನನ್ನ ಲಲ್ಲೀ....’

ತನ್ನ ಮಾತು ಕೇಳುತ್ತಲೂ ಆಕೆ ಕೋಪ—ಸಂಶಯಗಳೆಲ್ಲವನ್ನೂ ಮರೆತು ತನ್ನೆದೆಗೊರಗುವಳೆಂದು ಆತ ಭಾವಿಸಿದ್ದ. ಆದರೆ ಲಲಿತಾ ಹಾಗೇನೂ ಮಾಡಲಿಲ್ಲ. ಕೊಂಚ ದೂರ ಸರಿದು ನಿಂತು ದೃಢ ಸ್ವರದಲ್ಲಿ ಹೇಳಿದಳು.

‘ನಾನಿನ್ನು ಹೀಗೇ ಸಹಿಸಿಕೊಂಡಿರಲಾರೆ. ಇಂದು ಅಮ್ಮನ ಹತ್ತಿರ ಹೋಗುತೇನೆ.’

ಮಾತನಾಡಲಿಲ್ಲ ಅರವಿಂದ. ಮಾತು ಆದರೂ ಹೇಗೆ ಬಂದೀತು ಅವನ ಮುಖದಿಂದ?

' ಹೋಗುತ್ತೇನೇ ಅಂದೆ.... '

' ಹೋಗುತ್ತಿದ್ದರೆ ಹೊರಟುಹೋಗು!' ಅವನ ನಾಲಗೆ ಪಕ್ಕನೆ ನುಡಿದುಬಿಟ್ಟಿತು.

ಅವಳು ಹೋಗುವುದು ಅವನಿಗೆ ಎಷ್ಟೂ ಇಷ್ಟವಿರಲಿಲ್ಲ. ಅವಳಿಗೂ ಅಷ್ಟೆ. ಆದರೂ ಸಹ ಯಾವುದೋ ಒಂದು ಅದೃಶ್ಯ ಶಕ್ತಿ ಅವರನ್ನು ಈ ರೀತಿ ಪ್ರೇರೇಪಿಸುತ್ತಿತ್ತೇನೊ!

ಹೊರಟುಹೋದಳು ಲಲಿತಾ.

ದಿನಗಳು, ತಿಂಗಳುಗಳು ಒಂದೊಂದಾಗಿ ಉರುಳತೊಡಗಿದುವು.

## (೩)

' ನನ್ನ ಲಲಿತಾ,

ನೀನು ಹೊರಟುಹೋದೆ. ಆ ಮಾತಿಗೆ ಎರಡು ತಿಂಗಳುಗಳಾಗುತ್ತ ಬಂತು.

ಈ ಎರಡು ತಿಂಗಳುಗಳ ಕಾಲ ಹೇಗೆ ಸಹಿಸಿಕೊಂಡೆನೊ ನಾನು! ನನಗೇ ಅಚ್ಚರಿಯೆನಿಸುತ್ತದೆ. ನಿನ್ನನ್ನು ಬಿಟ್ಟು ನಾನು ಹೇಗೆ ಬದುಕಿರುವೆನೋ! ನಿನಗೆ ಒಂದು ಕಾಗದವನ್ನು ಬರೆಯದೆ-ಹಾಗೆಯೆ ಮೌನವಾಗಿರುವಷ್ಟು ಗಟ್ಟಿ ಮನಸ್ಸು ಹೇಗೆ ಮಾಡಿದೆನೊ! ಹೌದು. ನಿಜಕ್ಕೂ ಆಶ್ಚರ್ಯವೇ ಅದು!

ನಿಜ ಹೇಳಲೇನೇ ಲಲಿ! ನಿನ್ನ ಮುಂದೆ ಬಚ್ಚಿಟ್ಟುಕೊಂಡು ಪ್ರಯೋಜನವಾದರೂ ಏನು ಹೇಳು. ನೀನು ಬೇರೆ-ನಾನು ಬೇರೆ ಎಂಬುದಿದೆಯೆ! ಈ ಎರಡು ತಿಂಗಳು-ಎರಡು ವರ್ಷಗಳಂತಾಗಿದೆ ನನಗೆ. ನೀನಿಲ್ಲದ ಈ ಮನೆ ಬೆಂಗಾಡಿನಂತಾಗಿದೆ. ನನ್ನ ಆನಂದ-ನನ್ನ ಉತ್ಸಾಹ ಎಲ್ಲ ಮಾಯವಾಗಿದೆ.

ಎಷ್ಟು ಸುಂದರವಾಗಿತ್ತಲ್ಲೇ ನಮ್ಮ ಸಂಸಾರ? ನಿನ್ನ ಮನಸ್ಸಿನಲ್ಲಿ
ಎಂಥ ಸಂದೇಹ ಬಂತೋ! ಎಲ್ಲಿಂದ ಎಲ್ಲಿ- ಎಷ್ಟು ಅನರ್ಥ! ನನ್ನ
ದಿನಚರಿಯನ್ನೋದಿ ನಿನ್ನಲ್ಲಿ ವಿಕಲ್ಪವುಂಟಾಯಿತೋ ಏನೊ ಯಾರು
ಬಲ್ಲರು!

ನಿನ್ನ ಸಂಶಯಕ್ಕೆ ಕಾಲೂ ಇಲ್ಲ-ಕೈಯೂ ಇಲ್ಲ. ಆಗಲೇ ನೀನು
ಕೊಂಚ ತಿಳಿ ಮನಸ್ಸಿನಿಂದ ವಿಚಾರ ಮಾಡಿದ್ದರೆ ಎದೆ ಬಿಚ್ಚಿ ನನ್ನ ಕೈಲಿ
ಮಾತನಾಡಿದ್ದರೆ ಎಲ್ಲವೂ ಸ್ಪಷ್ಟವಾಗುತ್ತಿತ್ತು. ಆದರೆ ನಿನಗದು ಇಷ್ಟ
ವಿರಲಿಲ್ಲ. ಅಂಥ ವಿಕಲ್ಪದ ಹಾವು ನಿನ್ನ ತಲೆ ಹೊಕ್ಕಿತ್ತು.

ನಿನಗೆ ಗೊತ್ತು ಲಲಿತಾ! ನಾನು ಸೌಂದರ್ಯ ಪ್ರೇಮಿ. ನಿಸರ್ಗದ
ಎಲ್ಲ ಬಗೆಯ ಸೌಂದರ್ಯವೂ ನನಗೆ ಆನಂದವನ್ನುಂಟುಮಾಡುತ್ತದೆ.
ಅಂತೆಯೆ ನಾನು ಸರ್ಕಾರಿ ಕೆಲಸದ ಬಲೆಗೆ ಸಿಲುಕದೆ ಚಿತ್ರಗಾರನಾದೆ.
ನಾನುಣ್ಣುವ ಸೌಂದರ್ಯದ ಅಮೃತವನ್ನು ಕಲೆಯ ಮೂಲಕ ಜಗತ್ತಿಗೂ
ಹಂಚುವ ಕಾಯಕ ಕೈಗೊಂಡೆ.

ಅಖಿಲ ಕರ್ನಾಟಕವನ್ನೆಲ್ಲ ನನ್ನ ಚಿತ್ರಕಲೆಯಿಂದ ತಣಿಸುವ ಕಲಾ
ವಿದ ನಾನು. ಆದರೆ ನೀನು; ನನ್ನ ಜೀವನದ ಜೊತೆಗಾತಿಯಾಗಿ, ನನ್ನ
ಕಷ್ಟ ಸುಖಗಳಲ್ಲಿ ಪಾಲುಗಾತಿಯಾಗಿ ನನಗೆ ಸ್ಫೂರ್ತಿ ಸಂತೋಷಗಳ
ನ್ನೀಯಬೇಕಾದ ನನ್ನ ನಲ್ಲೆ ನೀನು?

ಆ ಹೂವಿನ ಹುಡುಗಿಯನ್ನು ಕಂಡು ದಿನಚರಿಯಲ್ಲಿ ಅವಳ ಸೌಂದರ್ಯ
ವನ್ನು ಕುರಿತು ಬರೆದ ಮಾತ್ರಕ್ಕೇ ನನ್ನ ಹೃದಯವೇ ಅವಳಿಗೆ ಮಾರು
ಹೋಗಿದೆಯೆಂದು ನಂಬಿಬಿಟ್ಟೆಯೇನು! ಎಂಥ ಹುಚ್ಚು ಇದು! ಸೌಂದರ್ಯ
ಕಲಾವಿದನಿಗೆ ಸಂತೋಷವನ್ನುಂಟುಮಾಡುತ್ತದೆ. ಆ ಕಲಾ ದೃಷ್ಟಿಯಲ್ಲಿ
ವಿಕಾರ ತುಂಬಿರುತ್ತದೆಂದು ಭಾವಿಸುವುದು ಅವಿವೇಕವಲ್ಲದಿನ್ನೇನೇ
ಹುಡುಗಿ?

ಈಗಲೂ ಆ ಸಂಪಿಗೆಯಾಕೆ ಆಗಾಗ ಇಲ್ಲಿಗೆ ಬರುತ್ತಾಳೆ. ಹೂ
ಕೊಟ್ಟು ಹೋಗುತ್ತಾಳೆ. ಆದರೇನು ಪ್ರಯೋಜನ? ಅವನ್ನು ಮುಡಿದು
ಸಂತೋಷಿಸುವವರಾರಿದಾರೆ ಇಲ್ಲಿ? ಅವಳು ಕೊಟ್ಟ ಹೂಗಳೆಲ್ಲ ರಾಶಿ

ಯಾಗಿ ಬಿದ್ದಿವೆ ನಿನ್ನ ಕೊಟಡಿಯಲ್ಲಿ. ನನ್ನ ಮೇಲೆ ಕನಿಕರವಿಲ್ಲವಾದರೆ ಹೋಗಲಿ. ಆ ಹೂಗಳ ಮೇಲಾದರೂ ದಯೆದೋರಿ ತಕ್ಷಣ ಹೊರಟುಬಿಡು

ಇನ್ನೂ ಹೋಗಲಿಲ್ಲವೇನೇ ನಿನ್ನ ಸಂಶಯ! ಅಯ್ಯೋ ಹುಚ್ಚು ಹುಡುಗಿ! ನನ್ನ ಪೆಪ್ಪು ಹುಡುಗಿ! ಇದೇನೇ ನಿನ್ನ ಬುದ್ಧಿ ಇಂಥದು!—ಬಿಡು ಅದನ್ನೆಲ್ಲ! ಸುಮ್ಮನೆ ಹೊರಟುಬಿಡು. ನಿನ್ನನ್ನಗಲಿ ನಾನು ಬಾಳುವೆನೇನೇ?—ಹಂ! ಹಾಗೆ! ಎಲ್ಲಿ ಹೊರಡು ನೋಡೋಣ....ಒಳ್ಳೆಯ ಹುಡುಗಿ ನೀನು! ....

ನಿನ್ನ

ಅರವಿಂದ'

ಲಲಿತಾ ಆ ಕಾಗದವನ್ನೆತ್ತಿ ಆಚೆ ಇಟ್ಟು ಅದಕ್ಕುತ್ತರವಾಗಿ ತಾನು ಬರೆದಿಟ್ಟಿದ್ದ ಪತ್ರವನ್ನೆತ್ತಿಕೊಂಡಳು. ಮತ್ತೊಂದು ಬಾರಿ ಅದರ ಮೇಲೆ ದೃಷ್ಟಿಯನ್ನೋಡಿಸಿದಳು.

"........ರಿಗೆ

ತಾವು ಬರೆದ ಮಾರುದ್ದದ ಕಾಗದ ಮುಟ್ಟಿತು. ತಮ್ಮ ಪ್ರಶ್ನೆಗಳಿಗೆಲ್ಲ ನಾನು ಉತ್ತರ ಹೇಳಲಾರೆ. ಆದರೂ ಎಲ್ಲ ತಪ್ಪನ್ನು ನನ್ನ ಮೇಲೇ ಹೊರಿಸಿ ನಿರ್ದೋಷಿಯಾಗಿ ದೂರವಿರಬೇಕೆನ್ನುವ ನಿಮ್ಮ ಅನ್ಯಾಯವನ್ನು ಖಂಡಿಸದಿರಲಾರೆ.

ಆಹಾ! ಗಂಡಸು ಜಾತಿಯೆ! ಏನು ಮೋಸ! ಎಂಥ ಕಪಟ! ಎಂಥ ಬೂಟಾಟಿಕೆ! ನನ್ನಲ್ಲಿ ಹುಟ್ಟಿದ್ದ ಸಂದೇಹಕ್ಕೆ ಎಷ್ಟೂ ಆಧಾರವಿಲ್ಲ ಅಂತೀರಿ ನೀವು. ಪಾಪ! ನಿಮ್ಮ ದಿನಚರಿಯನ್ನು ಮತ್ತೊಮ್ಮೆ ಸರಿಯಾಗಿ ಕಣ್ಣು ತೆರೆದು ಓದಿನೋಡಿ. ಕಾದಂಬರಿ—ನಾಟಕಗಳಲ್ಲಿನ ನಾಯಕರು ತಮ್ಮ ಪ್ರೇಯಸಿಯರನ್ನು ಕುರಿತು ಬರೆದ ಹಾಗಿದೆ ನಿಮ್ಮ ವರ್ಣನೆ—ತೆಳ್ಳಗಿನ ತುಂಬು ಹರೆಯದ ಶರೀರ—ಸಿನಿಮಾ ನಟಿಯರಂತ ಸುಂದರ ಕೋಮಲಕರ—ಮುಗ್ಧ ಮೋಹಕ ಮುಗುಳು ನಗೆ—ಕೂತ ಭಂಗಿ—ಕತ್ತಿನ ಡೌಲು—ಅದೆಲ್ಲಾ ನಿಮ್ಮಲ್ಲಿ ಯೋಚನೆ ಹುಟ್ಟಿಸದೆ ಬಿಟ್ಟೀತೇ?—ಅವಳ ಚಿತ್ರ ಬರೆಯುವುದರಲ್ಲಿ ತಲ್ಲೀನರಾಗಿ ಊಟ—ತಿಂಡಿಯ ನೆನಪೂ ಇಲ್ಲದೆ ಹಾಗೇ ಕೂತಿದ್ದಿರಿ ನೀವು ಮತ್ತೆ ಮೇಲೆ ಉದ್ದುದ್ದ ನೆಪಗಳು! ಅಬ್ಬ! ಬುರುಡೆಗಳೇ!

ಕಲಾ ದೃಷ್ಟಿ—ವಿಕಾರ—ಅಂಥ ದೊಡ್ಡ ದೊಡ್ಡ ಶಬ್ದಗಳು ನನಗೆ ಹೇಗೆ ತಾನೆ ಅರ್ಥವಾಗಬೇಕು?—ಇಷ್ಟು ಮಾತ್ರ ನಾನು ಹೇಳಬಲ್ಲೆ. ಕಲೆ—ಗಿಲೆ— ಎಂದು ಬುರುಡೆ ಹಾರಿಸುತ್ತ ಕೈ ಹಿಡಿದಾಕೆಯ ಕತ್ತು ಕುಯ್ದು ಹಾಕುವ ಕಲಾವಿದರು ನೀವು.

ನನ್ನ ದಾರಿಯನ್ನು ಯಾರೂ ಕಾಯಬೇಕಾದ ಅಗತ್ಯವಿಲ್ಲ. ಆ ಸಂಪಿಗೆ ಹೂಗಳೆಲ್ಲವನ್ನೂ ಬೆಂಕಿಯ ಬಾಯಿಗೆ ಬಲಿಕೊಟ್ಟು ಬಿಡಿ.

ನಿಮ್ಮ (?)

ಲಲಿತಾ।

ಓದಿ ಮುಗಿಸಿ ಒಂದು ಕ್ಷಣ ಮೌನವಾಗಿ ಕೂತುಕೊಂಡಿದ್ದಳು. ಅನಂತರ ಅದನ್ನು ಚೂರು ಚೂರಾಗಿ ಹರಿದು ಹಾಕಿ ಕಿಟಕಿಯೊಳಗಿನಿಂದ ತೂರಿಬಿಟ್ಟಳು.

ಗಾಳಿಯೊಂದಿಗೆ ಹೊರಟ ಆ ಚೂರುಗಳನ್ನು ನೋಡುತ್ತಿದ್ದ ಹಾಗೆ ತನ್ನ ಹೃದಯವೂ ಅವುಗಳಂತೆಯೆ ಚೂರು ಚೂರಾಗಿ ಹರಿದು ಹೋದ ಹಾಗೆ ಭಾಸವಾಯಿತು ಅವಳಿಗೆ.

ಂ ಂ ಂ ಂ

ಮೂರನೆಯ ದಿನವೆ ಅರವಿಂದನಿಂದ ಇನ್ನೊಂದು ಕಾಗದ ಬಂತು.

'ನನ್ನ ಲಲಿತಾ,

ನಿನ್ನೆ ದಿನ ನಾನು ಬರೆದಿದ್ದ ಮಾರುದ್ದದ ಕಾಗದವನ್ನೋದಿ ನೀನು ಬೇಜಾರುಗೊಂಡಿರಬಹುದು. ಯಾರಿಗೆ ಗೊತ್ತು—ಕೋಪಿಸಿಕೊಂಡು ಉತ್ತರವನ್ನೂ ಬರೆದಿರಬಹುದು. ನನ್ನ ಕಾಗದದಿಂದ ನೀನು ಸಿಟ್ಟಾಗಿದ್ದರೂ ಸರಿಯೆ—ಶಾಂತವಾಗಿದ್ದರೂ ಸರಿಯೆ. ಇದೀಗ ಮತ್ತೆ ಬರೆದು ನಿನಗೆ ತೊಂದರೆ ಕೊಡಲೇಬೇಕಾಗಿದೆ.

ನಿನ್ನೆಯ ದಿನ ನಡೆದ ಘಟನೆಯೊಂದರಿಂದ ನಾನು ತುಂಬ ವ್ಯಾಕುಲನಾಗಿದ್ದೇನೆ. ಅದೇ ಆ ಹೂವಿನ ಹುಡುಗಿಯ ವಿಚಾರವೇ. ಹೂಗಳೊಂದಿಗೆ ಆಕೆ ಬಂದಿರಲಿಲ್ಲ. ಅದಕ್ಕೆ ಪ್ರತಿಯಾಗಿ ಕಂಬನಿ ಸುರಿಸುತ್ತ ಬಂದಿದ್ದಳು.

ಆಕೆ ಹೇಳಿದುದನ್ನು ತಿಳಿದಾಗ ಅತ್ಯಂತ ವಿಷಾದವಾಯಿತು.

ಅವಳಿನ್ನೂ ಅವಿವಾಹಿತೆಯೆಂದು ಭಾವಿಸಿದ್ದೆ. ಅದು ತಪ್ಪಾದುದೆಂದು ತಿಳಿದು ಬಂತು. ಅಲ್ಲದೆ ಇನ್ನೂ ಒಂದು ಹೃದಯಭೇದಕ ವಿಚಾರ ತಿಳಿಯಿತು.

ಹೋದಳು ಆ ಹೂವಿನ ಹುಡುಗಿ. ಇನ್ನು ಮರಳಲಾರಳು.

ಈ ಅನಿರೀಕ್ಷಿತ ಘಟನೆಯಿಂದ ನನಗೆ ಹುಚ್ಚು ಹಿಡಿದಂತಾಗಿದೆ. ಶರೀರದಲ್ಲಿ ಸ್ವಾಸ್ಥ್ಯವಿಲ್ಲ. ಮನಸ್ಸಿನಲ್ಲಿ ಶಾಂತಿಯಿಲ್ಲ.

ಕಾಗದ ಕಂಡ ಕೂಡಲೆ ಹೊರಟು ಬಿಡು. ಹೆಚ್ಚಿಗೆ ಬರೆಯಲಾರೆ.

ನಿನ್ನನ್ನು ಬಿಟ್ಟು ನಾನು ಬಾಳಲಾರೆ. ಬೇಗ ಬಾ ನನ್ನ ಮುದ್ದೇ!

ನಿನ್ನ ಅಕ್ಕರೆಯ
ಅರವಿಂದ'.

## [೪]

ಮೆಟ್ಟಿಲುಗಳ ಮೇಲೆ ಧಡಧಡ ಸದ್ದಾಯಿತು.

ಅರವಿಂದ ಎದ್ದು ಬಾಗಿಲಿಗೆ ಬಂದ.

ಹೌದು. ಲಲಿತಾ ಬಂದಿದ್ದಳು! ಅವನ ಲಲಿತಾ!

'ನನಗೆ ಗೊತ್ತೇ ಇತ್ತು ನೀನು ಬಂದೇ ಬರುವಿಯೆಂದು!' ಎನ್ನುತ್ತ ಅರವಿಂದ ಅವಳನ್ನು ಎದೆಗೊತ್ತಿಕೊಂಡ.

ಅವನ ಕೆನ್ನೆಯನ್ನು ಮೆಲ್ಲನೆ ಚಿವುಟುತ್ತ ನಗು ನಗುತ್ತ ಕೇಳಿದಳು ಲಲಿತಾ.

'ಏನಂತಾಳೆ ನಿಮ್ಮ ಹೂವಿನ ಹುಡುಗಿ?'

'ಈಗಲಾದರೂ ಹೋಯಿತಷ್ಟೆ ನಿನ್ನ ಸಂಶಯ? ಇಲ್ಲ—ಇನ್ನೂ ಇದೆಯೋ?'

'ಅಲ್ಲ ಅದು ಹಾಗಿರಲಿ. ಆ ಹುಡುಗಿಗೇನಾಯಿತು? ಎಲ್ಲಿ ಹೋದಳು?'

ಇಬ್ಬರೂ ಬಂದು ಮಂಚದ ಮೇಲೆ ಕುಳಿತುಕೊಂಡರು. ಅರವಿಂದ ಹೇಳತೊಡಗಿದ.

'ಏನೇನೋ ಆಯ್ತು ಪಾಪ! ಅವಳಿಗೆ ಮದುವೆಯಾಗಿ ಬಹು ದಿನವಾಗಿತ್ತಂತೆ. ಬಡತನದ ಬಾಳು. ಗಂಡ ಸಂಪಿಗೆ ಗಿಡ ಹತ್ತಿ ಹೂ ತೆಗೆದುಕೊಡುತ್ತಿದ್ದ. ಆಕೆ ಅವನ್ನು ಪೇಟೆಗೆ ತಂದು ಮಾರುತ್ತಿದ್ದಳು. ಜೀವನ ಹೇಗೋ ಸಾಗುತ್ತಿತ್ತು. ಆದರೆ ಮೊನ್ನೆ ಏನಾಯಿತು, ಅಂದರೆ ಆತ ಆಕಸ್ಮಾತ್ತಾಗಿ ಸತ್ತುಹೋಗಿಬಿಟ್ಟ....'

'ಅಯ್ಯೋ ಪಾಪ! ಏನಾಯಿತು ಅವನಿಗೆ?' ಎಂದು ಕಳವಳದಿಂದ ಕೇಳಿದಳು ಲಲಿತಾ.

'ಏನೂ ಆಗಲಿಲ್ಲ—ಹೋಗಲಿಲ್ಲ. ಯಾವ ಕಾಯಿಲೆಯೂ ಬರಲಿಲ್ಲ. ಮೊನ್ನೆ ಸಂಪಿಗೆ ಗಿಡ ಏರುವಾಗ ಕಾಲು ಜಾರಿ ಕೆಳಕ್ಕೆ ಬಿದ್ದುಬಿಟ್ಟ. ಮಳೆಗಾಲ—ಈಗ ಏರಬೇಡ ಎಂದು ಮನೆಯವರೆಲ್ಲಾ ಮೊದಲೇ ಹೇಳಿದ್ದರಂತೆ.'

'ಅದೇನು ಅಂಥ ಹುಚ್ಚು ಅವನಿಗೆ?'

'ಅದನ್ನೇ ಹೇಳುತ್ತೇನೆ ಕೇಳು. ಹೆಂಡತಿ ಅಂದರೆ ಅವನಿಗೆ ವಿಪರೀತ ಪ್ರೀತಿ. ನಿತ್ಯ ಹೆಚ್ಚು ಹೆಚ್ಚು ಹೂ ಮಾರಿದರೆ ಕೊಂಚ ದುಡ್ಡು ಉಳಿಯುತ್ತೆ—ಅವಳಿಗೊಂದೆರಡು ಒಡವೆ ಆಗುತ್ತೆ—ಅಂತ ಅವನ ಆಸೆ. ಆಕೆಗೂ ಗಂಡ ಅಂದರೆ ತುಂಬಾ ಪ್ರೀತಿ. ಹೂ ಮಾರಿ ಬಂದ ಹಣದಲ್ಲಿ ಕೊಂಚ ಉಳಿಸಿ ಅವನಿಗೊಂದು ಕೋಟು ಹೊಲಿಸಿ ಕೊಡಬೇಕು ಅಂತ ಯೋಚಿಸಿದ್ದಳಂತೆ. ಅದಕ್ಕಾಗಿಯೇ ಅಂಥಾ ವೇಳೆಯಲ್ಲೂ ಆತ ಗಿಡ ಏರಿದ. ಆಕೆ ಆಸೆಯಿಂದ ಅವನು ಇಳಿಯುವುದನ್ನೇ ನಿರೀಕ್ಷಿಸುತ್ತ ನಿಂತಿದ್ದಳು. ಅವಳ ಎಲ್ಲ ಆಸೆಗಳನ್ನೂ ನಾಶಗೊಳಿಸಿ ಆತ ಕಾಲುಜಾರಿ ಬಿದ್ದುಬಿಟ್ಟ. ಹೇಳಿ ಕೇಳಿ ಹಳ್ಳಿ. ಡಾಕ್ಟರ್ ಎಲ್ಲಿ ಬರಬೇಕು ಅಲ್ಲಿ? ಪಾಪ! ಅಂದೇ ಕಣ್ಣು ಮುಚ್ಚಿದ....'

ಹೇಳಿ ಮುಗಿಸಿ ಅರವಿಂದ ಪತ್ನಿಯ ಕಡೆ ಹೊರಳಿದ. ಹೆಣ್ಣು ಜೀವ! ಅಷ್ಟಕ್ಕೇ ಅವಳಿಗೆ ದುಃಖವುಕ್ಕಿ ಕಣ್ಣು ತುಂಬಿ ಬಂದಿತ್ತು.

'ಪಾಪ! ಎಂಥಾ ಅನ್ಯಾಯವಾಯಿತು ಅಂದ್ರೆ! ಆ ಬಡ ಹುಡುಗಿ ಎಲ್ಲಿಗೆ ಹೋದಳೊ! ಇಲ್ಲೇ ನಮ್ಮಲ್ಲೇ ಇಟ್ಟುಕೊಳ್ಳಬಹುದಾಗಿತ್ತಲ್ಲ! ಕೆಲಸ ಗಿಲಸ ಮಾಡಿಕೊಂಡು ಇರುತ್ತಿದ್ದಳು!'

ದಿಗಿಲುಗೊಂಡು ಅರವಿಂದ ಲಲಿತೆಯ ಕಡೆ ಹೊರಳಿದ. ಹೌದು- ಹೃತ್ಪೂರ್ವಕವಾಗಿಯೆ ಆ ಮಾತು ಬಂದಿತ್ತು ಅವಳ ಮುಖದಿಂದ. ಸಹಾನುಭೂತಿಯ ಒಂದು ಸ್ಪರ್ಶಕ್ಕೇ ಸಂದೇಹವೆಲ್ಲಾ ಅಳಿಸಿಹೋಗಿತ್ತು !

'ನಾನೂ ತುಂಬಾ ಹೇಳಿದೆ ಅವಳಿಗೆ. ಅಲ್ಲದೆ ಆಕೆಯ ಬಗ್ಗೆ ಇನ್ನೂ ಒಂದು ಯೋಚನೆಯಿತ್ತು ನನಗೆ. ಅದು ಫಲಕಾರಿಯಾದೀತೇ ಎಂದು ದಿನಚರಿಯಲ್ಲಿ ನಾನು ಬರೆದಿದ್ದೆ. ಅದೇ ನಿನ್ನ ಸಂಶಯಕ್ಕೆ ಮೂಲಕಾರಣವಾಗಿರಬೇಕು . .'

' ಏನದು ಅಂಥಾ ಯೋಚನೆ ?'

' ಅಂಥ ಅದ್ಭುತವೇನೂ ಅಲ್ಲ ಕಣೇ. ನನ್ನ ಚಿತ್ರಗಳಿಗೆ 'ಮಾಡೆಲ್' ಆಗಿ ಕೂತುಕೊಳ್ಳುವುದಕ್ಕೆ ಕಣ್ಣು ಮೂಗು, ಮೈಕಟ್ಟುಗಳಿಂದ ಅಂದವಾಗಿರುವ ಚೆಲುವೆಯೊಬ್ಬಳ ಅಗತ್ಯವಿತ್ತು ನನಗೆ. ಆಕೆ ಅದಕ್ಕೊಪ್ಪಿಯಾಳೇನೊ ಎಂದುಕೊಂಡಿದ್ದೆ. ಇಲ್ಲ-ಅವಳು ಸಮ್ಮತಿಸಲಿಲ್ಲ. ದೂರ- ಎಲ್ಲೋ ಮೊಗಲಾಯಿಯಲ್ಲಿ ತವರು ಮನೆಯಂತೆ ಅವಳದು. ಅಲ್ಲಿಗೆ ಹೊರಟುಹೋದಳು.'

ಲಲಿತೆಯ ಹೃದಯದಲ್ಲಿನ ಸಂದೇಹವೆಲ್ಲ ಪೂರ್ತಿಯಾಗಿ ತೊಡೆದು ಹೋಗಿದ್ದಿತು. ಆ ಹೂವಿನ ಹುಡುಗಿಯ ದುರಂತ ಕತೆ ಅವಳ ಎದೆಯನ್ನು ಹಿಂಡಿ ಹಾಕಿದ್ದಿತು.

' ಅವಳದೊಂದು ಚಿತ್ರ ಬರೆದಿದ್ದಿರಲ್ಲಾ - ಅದು ಮುಗಿಯಿತೇ ?' ಎಂದು ಕೇಳಿದಳು.

' ಮುಗಿಸಿ ಎಷ್ಟೋ ದಿನವಾಯಿತಲ್ಲ ! ಏಕೆ ?'

' ಅದನ್ನು ನನಗೇ ಕೊಟ್ಟು ಬಿಡುತ್ತೀರಾ ? ನನ್ನ ಕೊಠಡಿಯಲ್ಲಿ ಹಾಕುತ್ತೇನೆ.'

ಇದೇ ಲೇಖಕರ ಇನ್ನೊಂದು ಕಥಾ ಸಂಗ್ರಹ

೧೨೦ ಪುಟ **ಕಾರವಾನ್** ಬೆಲೆ ೧—೦—೦

ಶಾರದಾ ಸಾಹಿತ್ಯಮಾಲೆಯ ಮೊದಲನೆಯ ಕಿರಣ

**ಮುನ್ನುಡಿ: ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರಿಂದ**

" ಕತೆಗಳಲ್ಲಿ ವಸ್ತುವೈವಿಧ್ಯತೆಯಿದೆ. ಶೈಲಿಯಲ್ಲಿ ಮನಸೆಳೆಯುವ ಮುನ್ನೋಟವಿದೆ. ಪಾತ್ರಗಳು ಕಲಾವಿದನ ಅಮರ ಚಿತ್ರಗಳಂತಿವೆ. ಲೇಖಕರು ಕಹಿ-ಸಿಹಿ, ನೋವು-ನಗೆ ಮುಂತಾದ ದ್ವಂದ್ವಗಳ ಹೋರಾಟದಲ್ಲಿ ವ್ಯಕ್ತಿಗಳನ್ನು ತೇಲಿಬಿಟ್ಟು ತಾವು ಸೃಷ್ಟಿಸಿರುವ ಪಾತ್ರಗಳನ್ನು ಓದುಗರು ಮರೆಯಲಾಗದ ರೀತಿಯಲ್ಲಿ ಪ್ರದರ್ಶಿಸಿ ಕ್ರಾಂತಿಕಾರರಾಗಿರುವರು "

—ಎಸ್. ಎಂ. ಎಂ. " **ಕಥಾವಳಿ** " ಯಲ್ಲಿ

" ಬಾಳಿನ ಸಣ್ಣ ಪುಟ್ಟ ದೃಶ್ಯಗಳಲ್ಲಿ ಕೂಡ ದೊಡ್ಡ ತತ್ವಗಳ ಮತ್ತು ಮಹಾ ಸಮಸ್ಯೆಗಳ ಪ್ರಭಾವವನ್ನು ಕಾಣುವ ಮತ್ತು ತೋರುವ ಶಕ್ತಿ ಶ್ರೀ ಕಟ್ಟೀಮನಿಯವರಿಗಿದೆ."—ಎಲ್. ಎಸ್. ಎಸ್. ಆರ್. " **ಕತೆಗಾರ** " ದಲ್ಲಿ

" ಶ್ರೀ ಬಸವರಾಜರು ನಿಜಕ್ಕೂ ದಲಿತರ ಪ್ರತಿನಿಧಿಗಳು, ನೊಂದವರ ಪಡೆಯ ಸಿಪಾಯಿ ಎಂಬುದನ್ನು"ಕಾರವಾನ್" ತೋರಿಸುತ್ತದೆ. ಅದನ್ನೋದಿದರೆ ಮೈನವಿರೇಳುವುದು ರಕ್ತ ಕುದಿಯುವುದು.''—"**ಚಿತ್ರ ಸಮಾಚಾರ್**"

" ಕಾರವಾನ್ ' ನಲ್ಲಿ ಬರಗಾಲಗ್ರಸ್ತ ವಿಜಾಪುರದ ಗುಳೇಕಾರ ಕುಟುಂಬವೊಂದರ ಕರುಣಾಜನಕ ಚಿತ್ರ ಪರಿಣಾಮಕಾರಿಯಾಗಿ ಮೂಡಿ ಬಂದಿದೆ............ಈ ಕತೆಗಳ ವಸ್ತು, ತಂತ್ರ, ವೈವಿಧ್ಯಪೂರ್ಣವಾಗಿವೆ "

— " **ಕರ್ಮವೀರ** "

" ಸಂಗ್ರಹದ ಏಳು ಕತೆಗಳಲ್ಲಿ ಹೆಚ್ಚಿನವು ಉತ್ತಮ ಕಲಾಕೃತಿಗಳು. ಜನಜೀವನದ ರೌರವ ನರಕಯಾತನೆಯ ಅನುಭವವಿದ್ದ ಶಿಲ್ಪಿಯೊಬ್ಬ ಕಾದಕಲ್ಲನ್ನು ಕಡೆದು ಕೆತ್ತಿ ಚಿತ್ರಿಸಿದಂತಿದೆ. ಶೈಲಿಯಲ್ಲಿ ಓಘವಿದೆ. ಮೋಹಕತೆಯಿದೆ. ಸ್ಫೂರ್ತಿಯಿದೆ. ಮೇಲಾಗಿ ಜೀವಕಳೆಯಿದೆ. ಕಥಾವಸ್ತುವಿನ ಆಯ್ಕೆಯಲ್ಲಿ ಜಾಣ್ಮೆಯಿದೆ. ಪ್ರಗತಿಶೀಲತೆಯಿದೆ. ತಾಂತ್ರಿಕ ನೈಪುಣ್ಯ ಮನಸ್ಸಿಗೆ ಮುಟ್ಟುವಂತಿದೆ.''—'ನಿರಂಜನ' " **ಪ್ರಜಾಮತ** " ದಲ್ಲಿ

ಪ್ರಕಾಶಕರು :— **ಶಾರದಾ ಪ್ರಕಟನಾಲಯ,** ಬಸವನಗುಡಿ ಬೆಂಗಳೂರು.

**ವಾರ್ಷಿಕ ಚಂದಾ** ೫ ರೂಪಾಯಿ (ರಿ. ವೆಚ್ಚ ಕೂಡಿ.)